ಸಂಪುಟ: 05 ಸಂಚಿಕೆ: 304 ಪುಟಗಳು: 08 ಶನಿವಾರ 17 ಜನವರಿ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

ಮುಂಜಾನೆ ಮಾತು
ನಮ್ಮ ದುಃಖಗಳಿಗೆ ನಾವೇ ಜವಾಬ್ದಾರರು, ಮತ್ತಾರೂ ಅಲ್ಲ. ನಮ್ಮ ಅದೃಷ್ಟವನ್ನು ರೂಪಿಸಿಕೊಳ್ಳುವವರು ನಾವೇ

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಏನೂ ಮಾಡದೇ ಚಪ್ಪಾಳೆ ಗಿಟ್ಟಿಸುವ ಬೊಗಳೆ ಸರ್ಕಾರ: ಛಲವಾದಿ

• ಉದಯವಾಹಿನಿ, ಕೊಪ್ಪಳ

ಇಡೀ ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಕೇವಲ ಕೆಸರೆರಚಾಟದಲ್ಲೇ ಸರಕಾರ ಕಾಲ ಕಳೆಯುತ್ತಿದೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಆಕ್ಷೇಪಿಸಿದ್ದಾರೆ. ಶುಕ್ರವಾರ ಇಲ್ಲಿನ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಬಹಳಷ್ಟು ಅಭಿವೃದ್ಧಿ ಆಗಬೇಕಿತ್ತು. ಕೇವಲ 5 ಗ್ಯಾರಂಟಿಗಳ ಹೆಸರಿನಲ್ಲೇ 5 ವರ್ಷ ಅಧಿಕಾರ ಮುಗಿಸಬಹುದು ಎಂಬ ಪರಿಸ್ಥಿತಿ ಇದೆ. ಯಾವುದನ್ನು ಕೇಳಿದರೂ ನೋಡುತ್ತೇವೆ; ಮಾಡುತ್ತೇವೆ ಎನ್ನುತ್ತಾರೆಯೇ ಹೊರತು ಮಾಡಿದ್ದಿಲ್ಲ. ಎಲ್ಲೇ ಹೋದರೂ ಸಾವಿರ ಕೋಟಿ, ಎರಡು ಸಾವಿರ ಕೋಟಿ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡುತ್ತೇವೆ; ಅಭಿವೃದ್ಧಿ ಪ್ರಾರಂಭವಾಗುತ್ತದೆ ಎನ್ನುತ್ತಾರಷ್ಟೇ ಎಂದು ಟೀಕಿಸಿದರು.

ಇದೊಂದು ರೀತಿಯ ಬೊಗಳೆ ಸರಕಾರ. ಜನರನ್ನು ದಾರಿ ತಪ್ಪಿಸುವುದು, ಏನೂ ಮಾಡದೇ ಚಪ್ಪಾಳೆ ಗಿಟ್ಟಿಸುವ ಕಾರ್ಯವನ್ನು ಈ ಸರಕಾರ ಮಾಡುತ್ತಿದೆ ಎಂದು ಟೀಕಿಸಿದರು. ಅದರಿಂದಲೇ ಜನರು ಇವರನ್ನು ದಿನೇದಿನೇ ಮರೆತು ಹೋಗುವ ಕಾಲ ಬಂದಿದೆ ಎಂದು ನುಡಿದರು. ಇವರ ದರ್ಪ ಹೆಚ್ಚಾಗಿದೆ. ಕ್ಷುಲ್ಲಕ ಕಾರಣಗಳಿಗೆ ಇವತ್ತು ಯಾವ ರೀತಿ ಈ ಸರಕಾರ ನಡೆದುಕೊಳ್ಳುತ್ತಿದೆ ಎಂಬುದನ್ನು ನೀವು ನೋಡಿದ್ದೀರಿ. ದಲಿತರ ಮೇಲೆ ಅತಿ ಹೆಚ್ಚು ಅತ್ಯಾಚಾರ ಆದ ಕಾಲ ಇದು. ಹಸುಳೆಗಳ ಮೇಲೆ ಅತ್ಯಾಚಾರ ಆಗಿ ಅವರನ್ನು ಕೊಲೆ ಮಾಡಿದ ಅನೇಕ ನಿದರ್ಶನಗಳು ಇವತ್ತು ಇವೆ ಎಂದು ಆರೋಪಿಸಿದರು. ಕೊಲೆಗಳು, ದರೋಡೆಗಳು ಆಗುತ್ತಿವೆ. ಈ ಕಾಲದಲ್ಲೂ ಬ್ಯಾಂಕ್‌ಗಳಿಗೆ ನುಗ್ಗಿ ದರೋಡೆ ನಡೆಯುತ್ತಿದೆ. ಎಲ್ಲಿ ನೋಡಿದರೂ ಕ್ಯಾಮೆರಾಗಳಿವೆ. ಮತ್ತೆ ಇದನ್ನು ಮಾಡುತ್ತಿರುವುದು ಯಾರು ಎಂದು ಪ್ರಶ್ನಿಸಿದರು.



ಸರಕಾರದ ಇಲಾಖೆಗಳಿಂದ ಆಗಿದೆ ಎಂಬುದು ಹೊರಕ್ಕೆ ಬರುತ್ತಿದೆ. ಇಂಥದ್ದನ್ನು ಮಾಡಲು, ಈ ರೀತಿಯ ಆಡಳಿತ ಕೊಡಲು ಒಂದು ಸರಕಾರ ಬೇಕೇ ಎಂದು ಜನರು ಮಾತನಾಡುತ್ತಿದ್ದಾರೆ ಎಂದು ತಿಳಿಸಿದರು.

ಇಂಥ ಪರಿಸ್ಥಿತಿ ಯಾವ ಕಾಲದಲ್ಲೂ ಇರಲಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ದ್ವೇಷ ಭಾಷಣದ ಹೆಸರಿನಲ್ಲಿ ಮಸೂದೆ ತಂದಿದ್ದಾರೆ. ಇದಕ್ಕೆ ಪ್ರತ್ಯೇಕ ಕಾನೂನು ಮಾಡುವ ಅವಶ್ಯಕತೆ ಇಲ್ಲವೆಂದು ನಾನು ಅವತ್ತೇ ಮುಖ್ಯಮಂತ್ರಿಗಳಿಗೆ ಹೇಳಿದ್ದೆ. ದ್ವೇಷ ಭಾಷಣ, ಹಗೆತನ ತೀರಿಸುವುದು, ಒಬ್ಬರ ತೇಜೋವಧೆ ಮಾಡುವುದಕ್ಕೆ- ಇದೆಲ್ಲಕ್ಕೂ ಕಾನೂನಿದೆ. ಅದೇ ಕಾನೂನಿನಡಿ ಎಷ್ಟೋ ಜನರಿಗೆ ಶಿಕ್ಷೆ ಆಗಿದೆ. ಇದಕ್ಕೆ ಯಾಕೆ ವಿಶೇಷತೆ ಕೊಡುತ್ತೀರಿ ಬೇಡ ಎಂದಿದ್ದೆ. ಯಾರಾದರೂ ಸಾಮಾಜಿಕ ಜಾಲತಾಣದಲ್ಲಿ ಕಳಿಸಿದ್ದನ್ನು ಬಿಜೆಪಿಯವರು ಮರು ಪೋಸ್ಟ್ ಮಾಡಿದರೆ, ಎರಡನೇ ದಿನದಲ್ಲಿ ಅರೆಸ್ಟ್ ಮಾಡುತ್ತಾರೆ. ಜೈಲಿಗೆ ಕಳಿಸುತ್ತಾರೆ ಎಂದು ಆಕ್ಷೇಪಿಸಿದರು. ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣಗೌಡರನ್ನೂ ಜೈಲಿಗೆ ಕಳಿಸಿದ್ದರು ಎಂದು ಟೀಕಿಸಿದರು.

ದ್ವೇಷ ಭಾಷಣ ಮಸೂದೆ ಅಡಿ ನೋಟಿಸ್ ಕೊಡಬೇಕಿಲ್ಲ, ದಾರಿ ಮೇಲೆ ಹೋಗುವವರನ್ನು ದೂರಿನ ನೆಪದಡಿ ಬಂಧಿಸಿ ಜೈಲಿಗೆ ಕಳಿಸುವಂತಾಗಿದೆ ಎಂದು ಟೀಕಿಸಿದರು. ನೇರಾನೇರ ಮಾತನಾಡುವ ದಲಿತ ಸಂಘಟನೆಗಳೆ, ರೈತ ಸಂಘಟನೆಗಳು, ಕನ್ನಡ ಸಂಘಟನೆಗಳು ಜೊತೆಗೆ ವಿರೋಧ ಪಕ್ಷಗಳನ್ನು ಹದ್ದುಬಸ್ತಿನಲ್ಲಿ ಇಡಲು ಹೊರಟಿದ್ದಾರೆ. ಸರಕಾರದ ವಿರುದ್ಧ ಯಾರೂ, ಏನೂ, ಎಲ್ಲೂ ಮಾತಾಡಬಾರದೆಂಬ ನಿಯಮ ತರುತ್ತಿದ್ದಾರೆ. ಒಬ್ಬರ ವಿಷಯದಲ್ಲಿ ಕೈಸನ್ನೆ, ಮತ್ತೊಬ್ಬರ ವಿಷಯದಲ್ಲಿ ಕಣ್ಸನ್ನೆ ಮಾಡಿದರೂ ಕೇಸು ಹಾಕಬೇಕಂತೆ ಎಂದು ವಾಗ್ದಾಳಿ ನಡೆಸಿದರು. ಕೈಸನ್ನೆ, ಕಣ್ಸನ್ನೆಯಲ್ಲಿ ದ್ವೇಷ ಇರುತ್ತದೆಯೇ ಎಂದು ಕೇಳಿದರು.

ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ

ದರೋಡೆ ಎಂಬುದು ಜಂಟಿ ಉದ್ಯಮವೇ

ಬೆಂಗಳೂರಿನಂಥ ಪ್ರದೇಶದಲ್ಲಿ ರಸ್ತೆಯಲ್ಲಿ ಹೋಗಬೇಕಾದರೆ, ಅಷ್ಟೂ ಟ್ರಾಫಿಕ್ ಇರುವಾಗ ವಾಹನದಲ್ಲಿ ಹಣ ತೆಗೆದುಕೊಂಡು ಹೋಗುವಾಗ 11 ಕೋಟಿ ರೂಪಾಯಿಯನ್ನು ಯಾರೋ ವಾಹನದಲ್ಲಿ ಬಂದು ದರೋಡೆ ಮಾಡಿದ್ದಾರೆ. ಪೊಲೀಸಿನವರೇನು ಕಡ್ಲೆಪುರಿ ತಿನ್ನುತ್ತಿದ್ದರೇ ಎಂದು ಪ್ರಶ್ನಿಸಿದರು. ತನಿಖೆ ಮಾಡಿ ಹಿಡಿದಾಗ ಯಾರೋ ಪೊಲೀಸಿನವರೇ ಮಾಡಿಸಿದ್ದು ಗೊತ್ತಾಗಿದೆ. ಈ ರೀತಿಯ ದರೋಡೆಗೆ ಪೊಲೀಸ್ ಇಲಾಖೆ, ಸರಕಾರ ಜಂಟಿ ಉದ್ಯಮ ಮಾಡುತ್ತಿವೆಯೇ ಎಂಬ ಅನುಮಾನ ನನ್ನದು ಎಂದು ತಿಳಿಸಿದರು. ಇಲಾಖೆಯೂ ನಿಮ್ಮದೇ ಸರಕಾರವೂ ನಿಮ್ಮದೇ ಅಲ್ಲವೇ ಎಂದು ಕೇಳಿದರು.

ರಾಜ್ಯ ಬಿಜೆಪಿ ನಾಯಕರಲ್ಲಿ ಉತ್ಸಾಹ, ಜಿಬಿಎ ಗೆಲುವು ಖಚಿತ: ಅಶೋಕ್

• ಉದಯವಾಹಿನಿ, ಬೆಂಗಳೂರು

ಮುಂಬೈ ಪಾಲಿಕೆ ಚುನಾವಣೆಗಳಲ್ಲಿ ಕಮಲ ಅರಳಿದ ಬೆನ್ನಲ್ಲೇ ರಾಜ್ಯ ಬಿಜೆಪಿ ನಾಯಕರಲ್ಲೂ ಉತ್ಸಾಹ ಗರಿಗೆದರಿದೆ. ಗ್ರೇಟರ್ ಬೆಂಗಳೂರು ಪಾಲಿಕೆಯಲ್ಲಿ ಬಿಜೆಪಿಗೆ ಗೆಲುವು ಖಚಿತ ಎಂದು ವಿಪಕ್ಷದ ನಾಯಕ ಆರ್ ಅಶೋಕ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮುಂಬೈ ಮಹಾನಗರದ ಜನತೆ ಬಿಜೆಪಿಗೆ ಬೆಂಬಲಿಸಿದಂತೆ ಮುಂಬರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದು ಮಹಾನಗರ ಪಾಲಿಕೆಗಳ ಚುನಾವಣೆಯಲ್ಲಿಯೂ ಸಹ ಬೆಂಗಳೂರಿನ ಮಹಾ ಜನತೆ ಬಿಜೆಪಿಗೆ ದೊಡ್ಡ ಮಟ್ಟದಲ್ಲಿ ಆಶೀರ್ವಾದ ಮಾಡಲಿದ್ದು, ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳ ಮೂಲಕ ಕರ್ನಾಟಕದಲ್ಲಿ ಕಾಂಗ್ರೇಸ್ ಪಕ್ಷದ ಪತನದ ಹಾದಿ ಆರಂಭವಾಗುವುದು ನಿಶ್ಚಿತ ಎಂದಿದ್ದಾರೆ.

ಮಹಾರಾಷ್ಟ್ರದ ವಿಧಾನಸಭೆ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವಿನ ನಂತರ ಈಗ ಮಹಾರಾಷ್ಟ್ರದ ಪ್ರತಿಷ್ಠಿತ ಬಿಎಂಸಿ ಸೇರಿದಂತೆ ಪುಣೆ, ನಾಗಪುರ ಹಾಗೂ ರಾಜ್ಯದ ಎಲ್ಲಾ ಪ್ರಮುಖ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಮತ್ತು ಶಿವಸೇನೆ (ಏಕನಾಥ್ ಶಿಂಧೆ ಬಣ) ಮೈತ್ರಿಕೂಟ ಮತ್ತೊಮ್ಮೆ ಅಭೂತಪೂರ್ವ ಜಯಭೇರಿ ಬಾರಿಸಿದ್ದು ಇದು ಜನತೆ ಮತ್ತೊಮ್ಮೆ ಬಿಜೆಪಿಯ ಅಭಿವೃದ್ಧಿ ರಾಜಕಾರಣಕ್ಕೆ ಮನ್ನಣೆ ನೀಡಿದ್ದಾರೆ.

ಸಿಇಟಿ: ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭ

• ಉದಯವಾಹಿನಿ,ಬೆಂಗಳೂರು

ಇಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸಿಇಟಿ-2026ಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭವಾಗಿದ್ದು, ಫೆ.16 ಕೊನೆಯ ದಿನ. ಅರ್ಜಿ ಸಲ್ಲಿಕೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವೆಬ್ ಸೈಟ್‌ನಲ್ಲಿ ಲಿಂಕ್ ಬಿಡುಗಡೆ ಮಾಡಿದ್ದು, ಅರ್ಜಿ ಶುಲ್ಕ ಪಾವತಿಗೆ ಫೆ.18 ಕೊನೆ ದಿನ. ಅಭ್ಯರ್ಥಿಗಳು ಪೂರಕ ದಾಖಲೆಗಳನ್ನು ಸಿದ್ಧ ಮಾಡಿಟ್ಟುಕೊಂಡು ಭರ್ತಿ ಮಾಡಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ. ಈ ಸಾಲಿನ ಅರ್ಜಿಯು ಆಧಾರ್ ಆಧಾರಿತ ಅರ್ಜಿಯಾಗಿದೆ. ಅದರಲ್ಲಿನ ಹೆಸರು ಇತ್ಯಾದಿ ಅಂಶಗಳು ಸ್ವಯಂಚಾಲಿತವಾಗಿ ಅರ್ಜಿಯಲ್ಲಿ ಬಂದು ಕೂರಲಿವೆ. ಇ-ಮೇಲ್ ಮೂಲಕವೂ ಒಟಿಪಿ ಜತೆಗೆ ಪ್ರತಿ ಹಂತದ ಮಾಹಿತಿಯನ್ನು ತಿಳಿಸುವ ವಿಶೇಷ ವ್ಯವಸ್ಥೆ ಮಾಡಲಾಗಿದೆ.

ಮತ ಕಳುವಿನ ಮತ್ತೊಂದು ಅಧ್ಯಾಯ: ಸಿದ್ದರಾಮಯ್ಯ ಕಿಡಿ

• ಉದಯವಾಹಿನಿ, ಮಂಗಳೂರು

ಬೃಹನ್ ಮುಂಬೈ ಮಹಾನಗರ ಪಾಲಿಕೆ ಚುನಾವಣೆಯು ಆಯೋಗದ ವಿಶ್ವಾಸಾರ್ಹತೆಯ ಕುರಿತು ಗಂಭೀರ ಆತಂಕಗಳನ್ನು ಹುಟ್ಟಿಸಿದೆ. ಇಂತಹ ಆತಂಕಗಳು ಮಹಾರಾಷ್ಟ್ರದಲ್ಲಷ್ಟೇ ಅಲ್ಲ, ದೇಶದ ಇತರೆ ಭಾಗಗಳಲ್ಲಿಯೂ ಪ್ರತಿಧ್ವನಿಸುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಪ್ರಜಾಸತ್ತಾತ್ಮಕ ವ್ಯವಸ್ಥೆ ಜೀವಂತವಾಗಿರಲು ಪ್ರತಿಯೊಂದು ಮತವೂ ಪವಿತ್ರವಾಗಿರಬೇಕು. ಅದರ ರಕ್ಷಣಾ ಕ್ರಮಗಳು ನಿಜವಾಗಿಯೂ ಪರಿಣಾಮಕಾರಿಯಾಗಿರಬೇಕು. ಮುಂಬೈ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಮತದಾರರಿಗೆ ಹಾಕಿದ ಶಾಯಿಯನ್ನು ಸುಲಭವಾಗಿ ಅಳಿಸಬಹುದು ಎನ್ನುವುದನ್ನು ಮಾಧ್ಯಮ ವರದಿಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವ ವಿಡಿಯೊಗಳು ತೋರಿಸುತ್ತಿವೆ. ಇದು ತಾಂತ್ರಿಕ ದೋಷವಲ್ಲ, ಇದು ಮತಕಳವು ಕಥನದ ಮತ್ತೊಂದು ಕಳವಳಕಾರಿ ಅಧ್ಯಾಯ ಎಂದು ಟೀಕಿಸಿದ್ದಾರೆ.

ದಿಲ್ಲಿ ಭೇಟಿ ಮುನ್ನ ಡಿಕೆಶಿ ಪ್ರಿಯಾಂಕ್ ಮೀಟಿಂಗ್

ರಾಜ್ಯ ರಾಜಕೀಯದ ಬಿಗ್ ಬಾಸ್ ಪಟ್ಟಕ್ಕೆ ಹಣಾಹಣಿ ಜೋರಾಗ್ತಿದೆ.. ಎರಡೂವರೆ ವರ್ಷ ಕಳೆದ ಬಳಿಕ ಸಂಕ್ರಾಂತಿ ಬಳಿಕ ಡಿಕೆಶಿ ಕ್ಯಾಂಪ್‌ಶುಭ ಸುದ್ದಿಯ ನಿರೀಕ್ಷೆಯಲ್ಲಿದೆ.. ರಾಜಕೀಯ ಚಟುವಟಿಕೆಗಿಳಿದ ಡಿಕೆಶಿ, ಅಸ್ಸಾಂ ಎಲೆಕ್ಷನ್‌ಗೆ ಉಸ್ತುವಾರಿ ನೆಪ ಮಾಡ್ಕೊಂಡು ರಾಜ್ಯದ ಕುರ್ಚಿಗೆ ಟೀ ಪ್ಲಾಂಟೇಷನ್ ಮಾಡ್ತಿದ್ದಾರೆ.. ಬಣ್ಣ-ರುಚಿ-ಶಕ್ತಿಯ ಕಥೆ ಹೇಳಿ ಮನವೊಲಿಕೆ ಪ್ಲಾನ್‌ಗೆ ಮುಂದಾಗಿದ್ದಾರೆ.

ಕುರ್ಚಿ ಆಟ! ಮುಸುಕಿನ ಗುದ್ದಾಟ

ಸಿಎಂ ಹುದ್ದೆಗಾಗಿ ಡಿಕೆಶಿ ಭಾರೀ ಕಸರತ್ತು..

• ಉದಯವಾಹಿನಿ, ಬೆಂಗಳೂರು

ಸಂಕ್ರಾಂತಿ ಮರುದಿನವೇ ರಾಜ್ಯ ರಾಜಕೀಯವು ದಕ್ಷಿಣಾಯಣದಿಂದ ಉತ್ತರಾಯಣಕ್ಕೆ ಪಥ ಬದಲಿದೆ.. ವಿಫಲವಾದ ಪ್ರಯತ್ನಗಳ ಬಳಿಕ ಪ್ರಾರ್ಥನೆಯ ಬಲದ ಮೇಲೆ ನಂಬಿಕೆಯಿಟ್ಟ ಬಂಡೆ ಬ್ರದರ್ಸ್ ಅದರ ಫಲದ ನಿರೀಕ್ಷೆಯಲ್ಲಿದ್ದಾರೆ.. ಡೆಲ್ಲಿಯಲ್ಲಿ ಕನಕಾಧಿಪತಿ ಡಿಸಿಎಂ ಡಿಕೆಶಿ ಅರಸೊತ್ತಿಗೆ ಅಖಾಡಕ್ಕಿಳಿದು ತ್ಯಾಗ ಪರಿಶ್ರಮ, ಸ್ವಾಮಿನಿಷ್ಠೆಯ ದಾಳ ಉರುಳಿಸ್ತಿದ್ದಾರೆ. ವರ್ಷದ ಮೊದಲ ಹಬ್ಬ ಮುಗಿಸಿ ಡೆಲ್ಲಿ ತಲುಪಿದ ಡಿಸಿಎಂ ಡಿಕೆಶಿಗೆ ಅಸ್ಸಾಂ ಎಲೆಕ್ಷನ್ ಕಾರಣ ಕೊಟ್ಟಿದೆ.. ತ್ರಿಮೂರ್ತಿ ಹೈಕಮಾಂಡ್ ಮನವೊಲಿಕೆಗೆ ಸರಿಯಾದ ಮುಹೂರ್ತ ಪಡೆದು ಬಂದ ಡಿಕೆಶಿ ಸಿಎಂ ಸ್ಥಾನದ ಬಗ್ಗೆ ಡಿಕೆಶಿ ವರಿಷ್ಠರ ಜೊತೆ ಚರ್ಚೆ ನಡೆಸಲಿದ್ದಾರೆ.

ಮುಖ್ಯಮಂತ್ರಿ ಸ್ಥಾನದ ವಿಚಾರದ ಚರ್ಚೆ ಬಗ್ಗೆ ದಿಲ್ಲಿಯಲ್ಲಿ ಡಿಕೆಶಿ ಮಾತು

ಸಿಎಂ ಹುದ್ದೆಗೆ ಪರಿಗಣಿಸಿ. ಪಕ್ಷದ ಭವಿಷ್ಯದ ಬಗ್ಗೆ ಗಮನ ಹರಿಸಿ ಅಂತ ಹೇಳ್ತಿರುವ ಡಿಕೆಶಿ, ಕೇವಲ ಅಸ್ಸಾಂ ಚುನಾವಣೆಗೆ ನನ್ನನ್ನು ಸೀಮಿತ ಮಾಡಬೇಡಿ.. ರಾಜ್ಯದ ಗೊಂದಲ ನಡುವೆ ಅಸ್ಸಾಂ ಉಸ್ತುವಾರಿಯನ್ನ ಹೇಗೆ ನಿರ್ವಹಣೆ ಮಾಡ್ಲಿ ಅಂತ ಕೇಳ್ತಿದ್ದಾರೆ.. ಸ್ಥಳೀಯ ಸಂಸ್ಥೆಗಳ ಚುನಾವಣೆ ಸಮೀಪ ಇದೆ.. ಹೀಗಾಗಿ ಸಿಎಂ ಸೀಟ್ ಬಗ್ಗೆ ಕ್ಲಾರಿಟಿ ನೀಡಿ.. ಭವಿಷ್ಯದಲ್ಲಿ ಬಿಜೆಪಿ-ದಳ ಮೈತ್ರಿಗೆ ತಕ್ಕ ತಿರುಗೇಟು ನೀಡಲು ಇದು ಅಗತ್ಯ ಅಂತಿದ್ದಾರೆ ಡಿಕೆಶಿ.. ಜೊತೆಗೆ ನನ್ನ ತ್ಯಾಗ, ಪರಿಶ್ರಮ ಪರಿಗಣಿಸಿ ಅಂತಿರುವ ಡಿಕೆಶಿ, ಪಕ್ಷದ ಚೌಕಟ್ಟನ್ನ ಮೀರಿಲ್ಲ ಅನ್ನೋ ಮೂಲಕ ಲಾಯಲ್ಟಿಯ ದಾಳ ಉರುಳಿಸ್ತಿದ್ದಾರೆ.. ಇನ್ನು, ನನ್ನ ಪರವೂ ಡೆಲ್ಲಿಗೆ ಬರಲು ಶಾಸಕರಿದ್ದಾರೆ, ಪ್ರಬಲ ಸಮುದಾಯವು ನನ್ನ ಬೆನ್ನಿಗಿದೆ.. ಸದ್ಯ ಸರ್ಕಾರಕ್ಕೆ ಎರಡೂವರೆ ವರ್ಷ ಆಗಿದೆ.. ಅಧಿಕಾರ ಹಂಚಿಕೆಗೆ ಇದು ಸುಸಂದರ್ಭ.. ಸಿಎಂ ಸ್ಥಾನ ವಿಚಾರದಲ್ಲಿ ರಾಜಸ್ಥಾನ, ಮಧ್ಯಪ್ರದೇಶದಂತೆ ಪರಿಸ್ಥಿತಿ ನಿರ್ಮಾಣ ಆಗೋದು ಬೇಡ ಅಂತ ವರಿಷ್ಠರ ಬಳಿ ಮನವಿ ಮಾಡಿದ್ದಾರೆ. ಇನ್ನು, ಅಧಿಕಾರ ಹಸ್ತಾಂತರ ವಿಚಾರವಾಗಿ ಡೆಲ್ಲಿಯಲ್ಲಿ ಮಾತಾಡಿದ ಡಿಸಿಎಂ ಡಿಕೆಶಿ, ನನ್ನ, ಸಿಎಂ ಹಾಗೂ ಹೈಕಮಾಂಡ್ ನಡುವಣ ವಿಚಾರ.. ಬಹಿರಂಗ ಚರ್ಚೆ ಮಾಡುವ ವಿಷಯ ಅಲ್ಲ ಅಂತಿದ್ದಾರೆ.. ಡೆಲ್ಲಿಗೆ ತೆರಳ್ತಿದ್ದಂತೆ ಡಿಸಿಎಂ ಕ್ಯಾಂಪ್‌ನಲ್ಲಿ ಸಂಭ್ರಮ ಕಾಣಿಸ್ತಿದೆ.. ಸಿಎಂ ಬದಲಾವಣೆ ಆಗಬಹುದು.. ಸಂಕ್ರಾಂತಿಗೆ ಪಥ ಬದಲಾವಣೆ ಆಗುತ್ತೆ, ನಮ್ಮಲ್ಲಿ ಶುರುವಾಗಿದೆ ಅಂತ ಡಿಕೆಶಿ ಆಪ್ತ ಶಿವಗಂಗಾ ಹೇಳ್ತಿದ್ದಾರೆ.. ಆದ್ರೆ, ಡಿಕೆಶಿ ಡೆಲ್ಲಿ ವಿಸಿಟ್ ಏನಂತ ವಿಶೇಷ ಇಲ್ಲ, ಅನ್ನೋದು ಸಿಎಂ ಕ್ಯಾಂಪ್‌ನ ವಾದ.

ಸೋನಿಯಾ ಜೊತೆ ಮಾತುಕತೆ

ಡಿ.ಕೆ.ಶಿವಕುಮಾರ್ ರಾಹುಲ್ ಗಾಂಧಿಯವರನ್ನು ಭೇಟಿ ಮಾಡುವ ಮೊದಲೇ, ಬೆಂಗಳೂರಿನಲ್ಲಿ ಸಿದ್ದರಾಮಯ್ಯ ಸಚಿವ ಕೆ.ಜೆ.ಜಾರ್ಜ್ ಮೂಲಕ ಸೋನಿಯಾ ಗಾಂಧಿ ಅವರನ್ನು ಸಂಪರ್ಕಿಸುವ ಯತ್ನ ನಡೆಸಿದ್ದಾರೆ.ದೆಹಲಿ ಮತ್ತು ಬೆಂಗಳೂರಿನಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳ ಕದನ ಕುತೂಹಲ ಹೆಚ್ಚಿಸಿವೆ. ಅಧಿಕಾರ ಹಂಚಿಕೆ ಸಂಬಂಧಪಟ್ಟಂತೆ ಯಾವುದೇ ಗೊಂದಲಗಳಿಲ್ಲ ಎಂದು ಮುಖ್ಯಮಂತ್ರಿಯವರು ಒಮ್ಮೆ ಹೇಳಿದರೆ, ಮತ್ತೊಮೆ ಹೈಕಮಾಂಡ್ ಹೇಳಿದಂತೆ ಕೇಳುತ್ತೇವೆ ಎಂದು ಹೇಳುವ ಮೂಲಕ ಗೊಂದಲ ಮೂಡಿಸುತ್ತಿದ್ದಾರೆ. ಇದು ಕಾಂಗ್ರೇಸ್ ಪಾಳಯದಲ್ಲಿ ನಡೆಯುತ್ತಿರುವ ಅಂತರ್ ಯುದ್ಧದ ಗಂಭೀರ ಸ್ವರೂಪವನ್ನು ಅನಾವರಣ ಮಾಡುತ್ತಿದೆ. ಡಿ.ಕೆ.ಶಿವಕುಮಾರ್ ಅವರು ನಾಯಕತ್ವ ಬದಲಾವಣೆಯ ವಿಚಾರವಾಗಿ ಕಾರ್ಯಾಚರಣೆ ಆರಂಭಿಸುವ ಮೊದಲು ಇದೇ ಕೆ.ಜೆ.ಜಾರ್ಜ್ ಅವರನ್ನು ಭೇಟಿ ಮಾಡಿ ಬೆಂಬಲ ಯಾಚಿಸಿದ್ದರು.

ರಾಹುಲ್ ಭೇಟಿಯಾದ ಕೆಜೆ ಜಾರ್ಜ್

ನವದೆಹಲಿಯ 10 ಜನಪಥ್ ರಸ್ತೆಯಲ್ಲಿರುವ ಸೋನಿಯಾ ಗಾಂಧಿ ನಿವಾಸದಲ್ಲಿ ರಾಹುಲ್ ಗಾಂಧಿಯವರನ್ನ ಭೇಟಿ ಮಾಡಿ ಪ್ರಸಕ್ತ ರಾಜ್ಯ ರಾಜಕೀಯ ವಿದ್ಯಮಾನಗಳ ಬಗ್ಗೆ ಮಹತ್ವದ ಚರ್ಚೆ ಮಾಡಿದ್ದಾರೆ. ರಾಹುಲ್ ಗಾಂಧಿಯನ್ನು ಭೇಟಿ ಮಾಡಲು ಡಿಕೆ ಶಿವಕುಮಾರ್ ಸಾಕಷ್ಟು ಬಾರಿ ಯತ್ನಿಸಿ ಆಗದಿದ್ದಕ್ಕೆ ಬರಿಗೈನಲ್ಲೇ ವಾಪಸ್ ಆಗಿದ್ದಾರೆ. ಆದ್ರೆ, ಇದೀಗ ಏಕಾಏಕಿ ರಾಹುಲ್, ಜಾರ್ಜ್ ಭೇಟಿಗೆ ಸಮಯ ಕೊಟ್ಟಿರುವುದು ಕಾಂಗ್ರೇಸ್‌ನಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ. ಈ ಹಿಂದೆಯೂ ಸಹ ಇದೇ ನಾಯಕತ್ವ ಬದಲಾವಣೆ ಸಂಬಂಧ ಬಣ ಬಡಿದಾಟ ತೀವ್ರ ಸ್ವರೂಪಕ್ಕೆ ಹೋಗಿದ್ದಾಗ ಜಾರ್ಜ್, ಎಐಸಿಸಿ ಅಧ್ಯಕ್ಷ ಖರ್ಗೆ, ಸಿಎಂ ಸಿದ್ದರಾಮಯ್ಯನ ಜತೆ ಮಾತುಕತೆ ನಡೆಸಿದ ಬಳಿಕ ಡಿಕೆಶಿಯನ್ನು ಭೇಟಿ ಮಾಡಿದ್ದರು. ಈ ಮೂಲಕ ಸದ್ಯಕ್ಕೆ ಸೈಲೆಂಟ್ ಇರಿ ಎಂದು ಮನವೊಲಿಸಲು ಪ್ರಯತ್ನಿಸಿದ್ದರು ಎನ್ನಲಾಗಿದೆ. ಇದರ ಬೆನ್ನಲ್ಲೇ ಇದೀಗ ಮತ್ತದೇ ಜಾರ್ಜ್ ದಿಢೀರ್ ರಾಹುಲ್ ಗಾಂಧಿ ಭೇಟಿ ಮಾಡಿ ಬಂದಿರುವುದು ಸಾಕಷ್ಟು ಕುತೂಹಲಕ್ಕೆ ಕಾರತಣವಾಗಿದೆ.

ಮುಸುಕಿನ ಗುದ್ದಾಟ

ಕರ್ನಾಟಕ ಕಾಂಗ್ರೇಸ್‌ನಲ್ಲಿ ನಾಯಕತ್ವಕ್

ಮಂಗಳೂರಿಗೆ ಅಮೃತ್ ಭಾರತ್ ಎಕ್ಸ್‌ಪ್ರೆಸ್ ಹೊಸ ರೈಲು ಘೋಷಣೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಕರಾವಳಿ ಭಾಗದ ಜನರಿಗೆ ಗುಡ್‌ನ್ಯೂಸ್. ಕೇಂದ್ರ ರೈಲ್ವೆ ಇಲಾಖೆಯು ಮಂಗಳೂರಿಗೆ ಹೊಸ ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲು ಸೇವೆಯನ್ನು ಆರಂಭಿಸಲು ಮುಂದಾಗಿದೆ. ಈ ರೈಲು ತಮಿಳುನಾಡಿನ ನಾಗರಕೋಯಿಲ್ – ಕರ್ನಾಟಕದ ಮಂಗಳೂರು ನಡುವೆ ಸಂಚಾರ ನಡೆಸಲಿದೆ.

ಕೇಂದ್ರ ರೈಲ್ವೆ ಇಲಾಖೆ ದೇಶಾದ್ಯಂತ ಹಲವು ಅಮೃತ್ ಭಾರತ್ ರೈಲುಗಳನ್ನು ಆರಂಭಿಸುತ್ತಿದೆ. ಕೆಲ ದಿನಗಳ ಹಿಂದಷ್ಟೇ 9 ಹೊಸ ಅಮೃತ್ ಭಾರತ್ ರೈಲು, ಅವುಗಳ ಮಾರ್ಗಗಳನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಘೋಷಣೆ ಮಾಡಿದ್ದರು.

ಮುಂದುವರೆದು ಕೇರಳ, ತಮಿಳುನಾಡಿದಿಂದ 5 ಹೊಸ ರೈಲು ಓಡಿಸಲು ನಿರ್ಧರಿಸಲಾಗಿದೆ.

ಮಂಗಳೂರು – ನಾಗರಕೋಯಿಲ್ ರೈಲು 3 ರಾಜ್ಯಕ್ಕೆ ಅನುಕೂಲ

ಮಂಗಳೂರು – ನಾಗರಕೋಯಿಲ್ ಅಮೃತ್ ಭಾರತ್ ರೈಲು ಒಟ್ಟು 700 ಕಿ.ಮೀಗೂ ಅಧಿಕ ಸಂಚಾರ ನಡೆಸಲಿದ್ದು, ಕರ್ನಾಟಕ, ತಮಿಳುನಾಡು ಹಾಗೂ ಕೇರಳದ ವಿವಿಧ ನಗರಗಳ ನಡುವೆ ಸಂಪರ್ಕ ಕಲ್ಪಿಸಲಿದೆ. ಈ ರೈಲು ಮಾರ್ಗ ಮಧ್ಯೆ, ತಿರುವನಂತಪುರಂ, ವಾರ್ಕಳ, ಕೊಲ್ಲಂ, ಚೆಂಗನೂರು, ಕೊಟ್ಟಾಯಂ, ಎರ್ನಾಕುಲಂ, ತ್ರಿಶೂರ್, ಕಾಸರಗೋಡ್ ಸೇರಿ ಹಲವು ಪ್ರಮುಖ ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ.

ಜನವರಿ 23 ಕ್ಕೆ ಚಾಲನೆ ಸಾಧ್ಯತೆ: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 5 ಹೊಸ ಅಮೃತ್ ಭಾರತ್ ರೈಲಿಗೆ ಚಾಲನೆ ನೀಡಲು ಜನವರಿ 23 ರಂದು ತಿರುವನಂತಪುರಂಗೆ ಭೇಟಿ ನೀಡುವ ಸಾಧ್ಯತೆ ಇದೆ. ಈ ರೈಲುಗಳಿಂದ ಕರ್ನಾಟಕ, ತಮಿಳುನಾಡು, ಕೇರಳ, ತೆಲಂಗಾಣ, ಆಂಧ್ರಪ್ರದೇಶ, ಜಾರ್ಖಂಡ್ ಸೇರಿ 6 ರಾಜ್ಯಗಳಿಗೆ ಅನುಕೂಲವಾಗಲಿದೆ.

ಬೆಂಗಳೂರು – ಮಂಗಳೂರು ಮಾರ್ಗದಲ್ಲಿ ಬೇಡಿಕೆ: ವಂದೇ ಭಾರತ್ ಅಥವಾ ಅಮೃತ್ ಭಾರತ್ ರೈಲು ಸೇವೆಯನ್ನು ಕರ್ನಾಟಕದ ಬೆಂಗಳೂರು – ಮಂಗಳೂರು – ಕಾರವಾರ ನಡುವೆ ಆರಂಭಿಸಬೇಕು ಎಂಬ ಬೇಡಿಕೆ ಇದೆ. ಸದ್ಯ ಸಕಲೇಶಪುರ – ಸುಬ್ರಮಣ್ಯ ರಸ್ತೆ ನಡುವೆ ಮಾರ್ಗ ವಿದ್ಯುದೀಕರಣವಾಗಿದ್ದು, ಸೂಪರ್ ಫಾಸ್ಟ್ ಹಾಗೂ ವಂದೇ ಭಾರತ್ ರೈಲು ಓಡಿಸಲು ಅನುಕೂಲರವಾಗಿವೆ ಎಂದು ರೈಲ್ವೆ ಪ್ರಯಾಣಿಕರ ಸಂಘಗಳು ಒತ್ತಾಯಿಸಿವೆ.

ಉದಯವಾಹಿನಿ ಚಿತ್ರ

ನೀಟ್ ಪಿಜಿ ಮಾನದಂಡ ಸಡಿಲ: ಎಐಡಿಎಸ್‌ಒ ಖಂಡನೆ

• ಉದಯವಾಹಿನಿ, ಬೆಂಗಳೂರು

ನೀಟ್ ಪಿಜಿ 2025ರ ಕಟ್ ಆಫ್ ಅಂಕಗಳನ್ನು ಇಳಿಸಿರುವ ರಾಷ್ಟ್ರೀಯ ಪರೀಕ್ಷಾ ಮಂಡಳಿ ಕ್ರಮವನ್ನು ಎಐಡಿಎಸ್ ಒ ಖಂಡಿಸಿದೆ. ಈ ಕ್ರಮ ಸ್ನಾತಕೋತ್ತರ ವೈದ್ಯಕೀಯ ಪ್ರವೇಶ ನಿರ್ವಹಿಸುವಲ್ಲಿ ಆಡಳಿತದ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಅರ್ಹತಾ ಮಾನದಂಡ ಸಡಿಲಗೊಳಿಸಿರುವುದು ಶೈಕ್ಷಣಿಕ ಗುಣಮಟ್ಟವನ್ನು ದುರ್ಬಲವಾಗಿಸಲಿದೆ. ಭವಿಷ್ಯದಲ್ಲಿ ಆರೋಗ್ಯ ವ್ಯವಸ್ಥೆಯ ಗುಣಮಟ್ಟ ಕುಂದಿಸಲಿದೆ ಎಂದು ಸಂಘಟನೆ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ. ಅಸಮರ್ಪಕವಾಗಿ ಸ್ನಾತಕೋತ್ತರ ಸೀಟುಗಳ ಹಂಚಿಕೆ, ಶೈಕ್ಷಣಿಕ ಮೂಲಸೌಕರ್ಯಗಳ ಕೊರತೆ, ಕೌನ್ಸೆಲಿಂಗ್ ವಿಳಂಬ ಮುಂತಾದ ಪ್ರಮುಖ ಸಮಸ್ಯೆಗಳನ್ನು ಪರಿಹರಿಸುವ ಬದಲು, ಸರ್ಕಾರ ಅರ್ಹತಾ ಮಾನದಂಡಗಳನ್ನೇ ದುರ್ಬಲಗೊಳಿಸಲು ಮುಂದಾಗಿದೆ. ವೈದ್ಯಕೀಯ ಶಿಕ್ಷಣ ಸಾರ್ವಜನಿಕ ಆರೋಗ್ಯದ ಮೇಲೆ ನೇರ ಪರಿಣಾಮ ಬೀರಲಿದ್ದು, ಅರ್ಹತಾ ಮಾನದಂಡಗಳಲ್ಲಿ ರಾಜಿ ಮಾಡಿಕೊಳ್ಳುವುದು ಸರಿಯಲ್ಲ' ಎಂದು ಹೇಳಿದ್ದಾರೆ.

ಗಾಯನ, ನೃತ್ಯ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವದ ಪ್ರಯುಕ್ತ ಜನವರಿ 17, ಶನಿವಾರ ಸಂಜೆ 6-30ಕ್ಕೆ ಚಿ॥ ಅಪ್ರಮೇಯ ಮತ್ತು ಕು॥ ಧೃತಿ ಆತ್ರೇಯ ಇವರಿಂದ ದಾಸರ ಪದಗಳ ಗಾಯನ, ಪುಟ್ಟ ಕಿಶೋರಿ ಧನ್ವಿ ಆತ್ರೇಯಳಿಂದ ನೃತ್ಯ ಪ್ರದರ್ಶನ. ವಾದ್ಯ ಸಹಕಾರ : ವಿದ್ವಾನ್ ಟಿ.ಎಸ್. ರಮೇಶ್ (ಕೀ-ಬೋರ್ಡ್), ವಿದ್ವಾನ್ ಬಿ.ಆರ್. ಪ್ರಕಾಶ್ (ತಬಲಾ).

ಉದಯವಾಹಿನಿ ಚಿತ್ರ

ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರಂ, ಬೆಂಗಳೂರು-560003

ದಲಿತ ಸಿ.ಎಂ ಆಗದಿರುವುದಕ್ಕೆ ನೋವಿದೆ: ಸಚಿವ ಕೆ.ಎಚ್.ಮುನಿಯಪ್ಪ

• ಉದಯವಾಹಿನಿ, ಬೆಂಗಳೂರು

ದಲಿತ ಮುಖ್ಯಮಂತ್ರಿ ಆಗದಿರುವುದಕ್ಕೆ ನೋವಿದೆ. ಹೈಕಮಾಂಡ್ ಮನಸ್ಸು ಮಾಡಿದರೆ ಎಲ್ಲವೂ ಆಗುತ್ತದೆ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು, ಮಲ್ಲಿಕಾರ್ಜುನ ಖರ್ಗೆ ಕಾಲದಲ್ಲೇ ದಲಿತ ಸಿಎಂ ಆಗಬೇಕು ಎಂದು ಇತ್ತು. ಯಾವಾಗ, ಏನು ಆಗಬೇಕು ಎನ್ನುವುದು ಹೈಕಮಾಂಡ್‌ಗೆಗೊತ್ತಿದೆ. ಮುಖ್ಯಮಂತ್ರಿ ಮಾಡುವ ಸ್ಥಾನದಲ್ಲಿ ಖರ್ಗೆ ಇದ್ದಾರೆ. ನಾವು ಇನ್ನೇನು ಮಾತನಾಡುವುದು ಎಂದರು. ಶೇ 25ರಷ್ಟು ಇರುವ ಸಮುದಾಯ ಶೇ 75ರಷ್ಟು ಮತಗಳನ್ನು ಕಾಂಗ್ರೆಸ್‌ಗೆ ಹಾಕುತ್ತಿದೆ. ಇದೆಲ್ಲವನ್ನೂ ಹೈಕಮಾಂಡ್‌ಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. 2028ಕ್ಕೆ ಮತ್ತೆ ಅಧಿಕಾರಕ್ಕೆ ಬರುವುದು ನಮ್ಮ ಗುರಿ ಎಂದರು.

ಯಾರ ಪರನೂ ಇಲ್ಲ: ರಾಹುಲ್ ಗಾಂಧಿಯನ್ನು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಭೇಟಿ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ರಾಹುಲ್ ಗಾಂಧಿ ಇಬ್ಬರ ಜೊತೆಗೂ ಮಾತನಾಡಿದ್ದಾರೆ. ಇದು ಹೈಕಮಾಂಡ್‌ಗೆ ಬಿಟ್ಟ ವಿಚಾರ. ನಾನು ಯಾರ ಪರವೂ ಅಲ್ಲ ಎಂದರು.

ಬೊಮ್ಮನಹಳ್ಳಿ ವಲಯ-2 ನಗರ ಯೋಜನೆ ವಿಭಾಗದ ಉಪ ನಿರ್ದೇಶಕರ ಕಚೇರಿ ಸ್ಥಳಾಂತರ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬೊಮ್ಮನಹಳ್ಳಿ ವಲಯ-2 ನಗರ ಯೋಜನೆ ವಿಭಾಗದ ಉಪ ನಿರ್ದೇಶಕರ ಕಚೇರಿಯನ್ನು ತಾತ್ಕಾಲಿಕವಾಗಿ ಎಚ್‌ಎಸ್‌ಆರ್ ಬಡಾವಣೆಯ ಬಿಡಿಎ ವಾಣಿಜ್ಯ ಸಂಕೀರ್ಣದ 2ನೇ ಮಹಡಿಗೆ ಸ್ಥಳಾಂತರಿಸಲಾಗಿದೆ. ಬಿಟಿಎಂ ಲೇಔಟ್‌ನ ಆರ್‌ಟಿಒ ಕಚೇರಿ ಎದುರು ಇದ್ದ ಕಟ್ಟಡದಲ್ಲಿ ಇಲ್ಲಿಯವರೆಗೆ ಕಾರ್ಯನಿರ್ವಹಿಸುತ್ತಿತ್ತು. ಈ ಕಚೇರಿಯ ವ್ಯಾಪ್ತಿಗೆ ಬೊಮ್ಮನಹಳ್ಳಿ, ಬಿ.ಟಿ.ಎಂ ಲೇಔಟ್, ಮಹದೇವಪುರ ವಿಧಾನಸಭಾದ ಭಾಗಶಃ ಪ್ರದೇಶ ಒಳಗೊಂಡಂತೆ 18 ವಾರ್ಡ್‌ಗಳು ಬರುತ್ತಿದ್ದು, ಸಾರ್ವಜನಿಕರ ಭೇಟಿಗೆ ಅನುವಾಗುವಂತೆ ಮೂರು ವಿಧಾನಸಭಾ ಕ್ಷೇತ್ರಗಳಿಗೆ ಸಮೀಪದಲ್ಲಿ ಇರುವಂತಹ ಕಟ್ಟಡಕ್ಕೆ ಕಚೇರಿ ಸ್ಥಳಾಂತರ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆಐಎನಲ್ಲಿ ಪ್ರಯಾಣಿಕರ ಸಂಚಾರ ಶೇ.8ರಷ್ಟು ಬೆಳವಣಿಗೆ

ದೇಶೀಯ ವಿಮಾನಗಳ ಓಡಾಟ ಸಂಖ್ಯೆಯಲ್ಲಿ ಮೂರನೇ ಸ್ಥಾನದಿಂದ ಎರಡನೇ ಸ್ಥಾನಕ್ಕೆ ಏರಿಕೆ

• ಉದಯವಾಹಿನಿ, ಬೆಂಗಳೂರು

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ 2025ನೇ ಹಣಕಾಸು ವರ್ಷದಲ್ಲಿ ಪ್ರಯಾಣಿಕರ ಸಂಚಾರದಲ್ಲಿ ದಾಖಲೆ ನಿರ್ಮಿಸಿದೆ. 2024ರಲ್ಲಿ 40.73 ದಶ ಲಕ್ಷವಿದ್ದ ಪ್ರಯಾಣಿಕರ ಸಂಚಾರ, 2025ರಲ್ಲಿ43.82 ದಶ ಲಕ್ಷಕ್ಕೆ ತಲುಪಿದೆ. ಈ ಮೂಲಕ ಶೇ.8ರಷ್ಟು ಬೆಳವಣಿಗೆ ಸಾಧಿಸಿದೆ. ಅಲ್ಲದೆ, 2025ರ ನ.23ರಂದು ಒಂದೇ ದಿನ ಅತಿ ಹೆಚ್ಚು 1 ಲಕ್ಷ 37 ಸಾವಿರದ 317 ಪ್ರಯಾಣಿಕರ ಸಂಚಾರ ದಾಖಲಾಗಿದೆ. ವಿಮಾನಗಳ ಸಂಚಾರವು 2025ರ ಅ.19ರಂದು ಗರಿಷ್ಠ 837ಕ್ಕೆ ತಲುಪಿದೆ. ಸಾಮಾನ್ಯವಾಗಿ ದೈನಂದಿನ ಸರಾಸರಿ ವಿಮಾನ ಸಂಚಾರ 765 ರಷ್ಟಿರಲಿದ್ದು, ಈ ಪ್ರಮಾಣವು ನಿರಂತರ ಬೆಳವಣಿಗೆಯನ್ನು ಪ್ರತಿಬಿಂಬಿಸಿದೆ.

1 ಲಕ್ಷ 37 ಸಾವಿರದ 317 ಪ್ರಯಾಣಿಕರ ಸಂಚಾರ ದಾಖಲೆ

ಎರಡನೇ ಸ್ಥಾನಕ್ಕೆ ಏರಿಕೆ: 2025ರ ಅಕ್ಟೋಬರ್‌ನಲ್ಲಿ ಭಾರತೀಯ ವಿಮಾನ ನಿಲ್ದಾಣಗಳಲ್ಲಿ ಕಾರ್ಯನಿರ್ವಹಿಸುವ ದೇಶೀಯ ವಿಮಾನಗಳ ಸಂಖ್ಯೆಯಲ್ಲಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮೂರನೇ ಸ್ಥಾನದಿಂದ ಎರಡನೇ ಸ್ಥಾನಕ್ಕೆ ಏರಿದೆ. ಈ ವರ್ಷದಲ್ಲಿ ಅಂತಾರಾಷ್ಟ್ರೀಯ ಪ್ರಯಾಣಿಕರ ದಟ್ಟಣೆಯಲ್ಲಿ ಬೆಳವಣಿಗೆ ಕಂಡಿದೆ. 2024ರಲ್ಲಿ ದೈನಂದಿನ ಪ್ರಯಾಣಿಕರ ಸಂಚಾರ ಶೇ.38ರಿಂದ 2025ರಲ್ಲಿ ಶೇ.51ಕ್ಕೆ ಏರಿದೆ. ಇದು ಅಂತಾರಾಷ್ಟ್ರೀಯ ಪ್ರಯಾಣಿಕರ ಸಂಚಾರದಲ್ಲಿ ವರ್ಷದಿಂದ ವರ್ಷಕ್ಕೆ ಶೇ.28.7 ಬೆಳವಣಿಗೆಗೆ ಕಂಡಂತಾಗಿದೆ.

ಬಿಐಎಎಲ್‌ನ ಮುಖ್ಯ ಕಾರ್ಯಾಚರಣಾ ಅಧಿಕಾರಿ ಗಿರೀಶ್ ನಾಯರ್ ಮಾತನಾಡಿ, ಈ ಬೆಳವಣಿಗೆಯು ಹೆಚ್ಚುತ್ತಿರುವ ವಿಮಾನಯಾನ ಬೇಡಿಕೆ ಮಾತ್ರವಲ್ಲದೆ ವಿಮಾನಯಾನ ಸಂಸ್ಥೆಗಳು ಮತ್ತು ಪ್ರಯಾಣಿಕರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಭಾರತಕ್ಕೆ ಹೊಸ ದ್ವಾರವಾಗಿ ಇರಿಸಿರುವ ನಂಬಿಕೆ ಮತ್ತು ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ. ಇದು ಬೆಂಗಳೂರು ಪ್ರಮುಖ ಜಾಗತಿಕ ನಗರವಾಗಿ ಹೊರಹೊಮ್ಮಲು ಅನುವು ಮಾಡಿಕೊಡುವ ನಿರ್ಣಾಯಕ ಕೇಂದ್ರವಾಗಿದೆ ಎಂದು ತಿಳಿಸಿದರು.

ಸರಕು ವ್ಯವಹಾರ ಬೆಳವಣಿಗೆ: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ 2025ರಲ್ಲಿ 520,985 ಮೆಟ್ರಿಕ್ ಟನ್ ಸರಕುಗಳನ್ನು ನಿರ್ವಹಿಸಿದ್ದು, 2024ಕ್ಕೆ ಹೋಲಿಸಿದರೆ, ಶೇ. 5ರಷ್ಟು ಹೆಚ್ಚಳ ಕಂಡಿದೆ. ವಿಮಾನ ನಿಲ್ದಾಣವು 2025ರ ಅ.7ರಂದು 2,207 ಮೆಟ್ರಿಕ್ ಟನ್‌ಗಳ ಅತ್ಯಧಿಕ ಏಕದಿನ ಸರಕು ಸಾಗಣೆ ಮಾಡಿದೆ. ವಿಮಾನ ನಿಲ್ದಾಣವು ಈಗ 15 ದೇಶೀಯ, ಅಂತಾರಾಷ್ಟ್ರೀಯ ಸರಕು ಸಾಗಣೆ ವಿಮಾನಯಾನ ಸಂಸ್ಥೆಗಳ ಮೂಲಕ 37 ಸರಕು ಸಾಗಣೆ ತಾಣಗಳಿಗೆ ಸಂಪರ್ಕ ಹೊಂದಿದೆ.

ಚಿಕಾಗೋ, ಸಿಂಗಾಪುರ, ಲಂಡನ್ ಹೀಥ್ರೂ, ಫ್ರಾಂಕ್‌ಫರ್ಟ್, ಲೀಪ್‌ಜಿಗ್ ಪ್ರಮುಖ ರಫ್ತು ಮಾರುಕಟ್ಟೆಗಳಾಗಿ ಹೊರಹೊಮ್ಮಿದರೆ, ಶೆನ್‌ಜೆನ್, ಶಾಂಘೈ, ಫ್ರಾಂಕ್‌ಫರ್ಟ್, ಹಾಂಕಾಂಗ್ ಮತ್ತು ಸಿಂಗಾಪುರ ಆಮದುಗಳನ್ನು ಮುನ್ನಡೆಸಿವೆ. ಕೊಳೆಯುವ ಕೃಷಿ- ವಸ್ತುಗಳು, ಔಷಧಗಳು, ಆಟೋ ಭಾಗಗಳು ಮತ್ತು ಬಿಡಿ ಭಾಗಗಳು, ವಿದ್ಯುತ್ ಮತ್ತು ಎಲೆಕ್ಟ್ರಾನಿಕ್ ವಸ್ತುಗಳು ಮತ್ತು ಇ-ಕಾಮರ್ಸ್ ಸಾಗಣೆ ನಿಲ್ದಾಣದ ಬೆಳವಣಿಗೆಗೆ ಪ್ರಮುಖ ಸರಕುಗಳಾಗಿವೆ.

ಉದಯವಾಹಿನಿ ಚಿತ್ರ

ಲಗೇಜ್ ಸಿಲುಕಿ ವಿಮಾನದ ಇಂಜಿನ್‌ಗೆ ಹಾನಿ

ಹೊಸದಿಲ್ಲಿ ಏರ್ ಇಂಡಿಯಾ ವಿಮಾನದ ಇಂಜಿನ್‌ಗೆ ಲಗೇಜ್ ಸಿಲುಕಿ ಇಂಜಿನ್ ಹಾಳಾದ ಘಟನೆ ವರದಿಯಾಗಿದೆ. ಏರ್‌ಬಸ್ ಎ350 ವಿಮಾನವು ದಟ್ಟವಾದ ಮಂಜಿನಲ್ಲಿ ಚಲಿಸುತ್ತಿದ್ದಾಗ ಈ ಘಟನೆ ಸಂಭವಿಸಿದೆ. ದಿಲ್ಲಿ- ನ್ಯೂಯಾರ್ಕ್ ನಡುವೆ ಸಂಚರಿಸುವ ಎಐ101 ವಿಮಾನವು ಇರಾನ್ ವಾಯುಮಾರ್ಗವಾಗಿ ತೆರಳುತ್ತಿತ್ತು. ಆದರೆ ಸಂಘರ್ಷದ ಪರಿಣಾಮ ಇರಾನಿನ ವಾಯುಪ್ರದೇಶ ಮುಚ್ಚಿದ ಪರಿಣಾಮ ಅದು ದಿಲ್ಲಿಗೆ ಮರಳಿತ್ತು. ವಿಮಾನ ದಿಲ್ಲಿಯಲ್ಲಿ ಇಳಿಯುತ್ತಿದ್ದ ವೇಳೆ ಲಗೇಜ್ ಕಂಟೇನರ್ ಅನ್ನು ಇಂಜಿನ್ ಫ್ಯಾನ್ ಬ್ಲೇಡ್‌ಗಳು ಸೆಳೆದುಕೊಂಡು ಹಾನಿ ಸಂಭವಿಸಿದೆ ಎಂದು ವಿಮಾನ ಸಂಸ್ಥೆ ಅಧಿಕಾರಿಗಳು ತಿಳಿಸಿದ್ದಾರೆ. ಇಂಜಿನ್ ಫ್ಯಾನ್ ತಿರುಗುತ್ತಿದ್ದ ವೇಗಕ್ಕೆ ಲಗೇಜ್ ಕಂಟೇನರ್ ಬಂದು ಸಿಲುಕಿ ಇಂಜಿನ್‌ಗೆ ಅಪ್ಪಳಿಸಿದ್ದು, ಈ ವೇಳೆ ಇಂಜಿನ್‌ಗೆ ಗಂಭೀರ ಹಾನಿಯಾಗಿದೆ.

ಶಿಶುಮರಣ ತಪ್ಪಿಸಲು ಜನ್ಮಜಾತ ಸಮಸ್ಯೆ ಪತ್ತೆಗೆ ತಪಾಸಣೆ

• ಉದಯವಾಹಿನಿ, ಬೆಂಗಳೂರು

ಜನ್ಮಜಾತ ಅನಾರೋಗ್ಯ ಸಮಸ್ಯೆಗಳ ಪತ್ತೆಯ ಜತೆಗೆ, ವಿರಳ ಕಾಯಿಲೆಗಳಿಂದ ಸಂಭವಿಸುತ್ತಿರುವ ಮರಣ ತಡೆಯಲು ಆರೋಗ್ಯ ಇಲಾಖೆಯು ಸಾರ್ವತ್ರಿಕ ನವಜಾತ ಶಿಶು ತಪಾಸಣೆ ಯೋಜನೆ ರೂಪಿಸಿದೆ. ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಈ ಯೋಜನೆ ಶೀಘ್ರದಲ್ಲಿಯೇ ಜಾರಿಯಾಗಲಿದೆ. ಈ ಸಂಬಂಧ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ (ಐಜಿಐಸಿಎಚ್) ವಿವಿಧ ಸರ್ಕಾರಿ ಹೆರಿಗೆ ಆಸ್ಪತ್ರೆಗಳ ವೈದ್ಯರಿಗೆ ಅಗತ್ಯ ತರಬೇತಿ ನೀಡಲಾಗುತ್ತಿದೆ. ಜನಿಸಿದ 48 ಗಂಟೆಯಿಂದ 72 ಗಂಟೆಯ ಒಳಗೆ ಶಿಶುಗಳ ರಕ್ತದ ಮಾದರಿಯನ್ನು ಪಡೆದು, ಪರೀಕ್ಷೆ ನಡೆಸಲು ಪ್ರಯೋಗಾಲಯಕ್ಕೆ ಕಳಿಸಲಾಗುತ್ತದೆ. ಆರಂಭಿಕ ಹಂತದಲ್ಲಿಯೇ ಸಮಸ್ಯೆ ಪತ್ತೆ ಮಾಡಿದಲ್ಲಿ ಚಿಕಿತ್ಸೆ ಸುಲಭ ಸಾಧ್ಯ ಎಂಬ ಉದ್ದೇಶದಿಂದ ಈ ಯೋಜನೆಯನ್ನು ಪ್ರಾರಂಭಿಸಲಾಗುತ್ತಿದೆ. ಎರಡೂ ಜಿಲ್ಲೆಗಳ ಸರ್ಕಾರಿ ಹೆರಿಗೆ ಆಸ್ಪತ್ರೆಗಳಲ್ಲಿ ಈ ಯೋಜನೆ ಜಾರಿಗೆ ಇಲಾಖೆ ಸಿದ್ಧತೆ ಮಾಡಿಕೊಳ್ಳುತ್ತಿದೆ. ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ಹಾಗೂ ವಾಣಿವಿಲಾಸ ಆಸ್ಪತ್ರೆಯನ್ನು ಪರೀಕ್ಷಾ ಕೇಂದ್ರಗಳಾಗಿ ಗುರುತಿಸಲಾಗಿದೆ. ಇಲ್ಲಿ ಜನ್ಮಜಾತ ಅನಾರೋಗ್ಯ ಸಮಸ್ಯೆ ಪತ್ತೆಗೆ ಪ್ರಯೋಗಾಲಯ ವ್ಯವಸ್ಥೆಯಿದೆ. ಸಾರ್ವಜನಿಕ ಆರೋಗ್ಯ ಸೌಲಭ್ಯಗಳಲ್ಲಿ ಹೆರಿಗೆಯಾಗುವ ಎಲ್ಲಾ ನವಜಾತ ಶಿಶುಗಳನ್ನು ರೋಗ ಪತ್ತೆ ತಪಾಸಣೆಗೆ ಒಳಪಡಿಸಲಾಗುತ್ತದೆ. ಸಮಸ್ಯೆಯ ಸಂದೇಹ ಇರುವ ಮಗುವಿನ ರಕ್ತದ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯ ಪರೀಕ್ಷೆಗೆ ಕಳುಹಿಸಲಾಗುತ್ತದೆ.

ಐದು ರೋಗ ಪತ್ತೆ: ಯೋಜನೆಯಡಿ ಹೈಪೋಥೈರಾಯ್ಡಿಸಮ್, ಅಡ್ರಿನಲ್ ಹೈಪರ್ಪ್ಲಾಸಿಯಾ ಗ್ಯಾಲಕ್ಟೋಸೆಮಿಯಾ, ಫಿನೈಲೈಟೋನೂರಿಯಾ ಮತ್ತು ಗೂಕೋಸ್-6 ಫಾಸ್ಫೇಟ್ ಡಿಹೈಡ್ರೋಜಿನೇಸ್ (ಜಿ6ಪಿಡಿ) ಕೊರತೆ, ಚಯಾಪಚಯ ಅಸ್ವಸ್ಥತೆಗಳ ಪತ್ತೆಗೆ ತಪಾಸಣೆ ಮಾಡಲಾಗುತ್ತದೆ. ರೋಗ ನಿರ್ಣಯದ ಪರೀಕ್ಷೆಗೆ ತಲಾ ರೂ.500 ನಿಗದಿಪಡಿಸಲಾಗಿದೆ.

ರೋಗ ಗೊತ್ತುಪಡಿಸಿದ ಬಳಿಕ ಹಾರ್ಮೋನ್‌ಗಳ ಬದಲಾವಣೆ ಸೇರಿ ವಿವಿಧ ಚಿಕಿತ್ಸೆಗಳಿಗೆ ಒಳಪಡಿಸಲಾಗುತ್ತದೆ. ಅಪಾಯದಲ್ಲಿರುವ ಶಿಶುಗಳನ್ನು ಗುರುತಿಸಿ. ಚಿಕಿತ್ಸೆ ಒದಗಿಸಲು ಈ ಯೋಜನೆ ಸಹಕಾರಿಯಾಗಲಿದೆ. ಈ ತಪಾಸಣೆ, ಚಿಕಿತ್ಸೆಯಿಂದ ನವಜಾತ ಶಿಶುಗಳ ಮರಣ ಪ್ರಮಾಣವೂ ಇಳಿಕೆಯಾಗಲಿದೆ. ಆರಂಭಿಕ ಹಂತದಲ್ಲಿ ಸಮಸ್ಯೆ ಗುರುತಿಸದಿದ್ದರೆ ಚಿಕಿತ್ಸೆ ದುಬಾರಿಯಾಗುವ ಜತೆಗೆ, ಮಗು ಅಂಗವಿಕಲತೆಗೆ ಒಳಗಾಗುವ ಅಥವಾ ಮೃತಪಡುವ ಸಾಧ್ಯತೆ ಇರುತ್ತದೆ ಎಂದು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕ ಡಾ. ಸಂಜಯ್ ಕೆ.ಎಸ್. ತಿಳಿಸಿದರು.

ಉದಯವಾಹಿನಿ ಚಿತ್ರ

> ಜನ್ಮಜಾತ ಸಮಸ್ಯೆ ಪತ್ತೆಗೆ ಸಂಬಂಧಿಸಿ ವೈದ್ಯರಿಗೆ ತರಬೇತಿ ಒದಗಿಸಲಾಗುತ್ತಿದೆ. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿದಲ್ಲಿ ಪ್ರಾಣಾಪಾಯದಿಂದ ಪಾರು ಮಾಡಬಹುದು
>
> -ಡಾ. ಸಂಜಯ್ ಕೆ.ಎಸ್. ಐಜಿಐಸಿಎಚ್ ನಿರ್ದೇಶಕ

ಸಂಕ್ರಮಣದ ಹಬ್ಬದ ಪ್ರಯುಕ್ತ ಶ್ರೀರಾಘವೇಂದ್ರ ಸ್ವಾಮಿಗಳ ದರ್ಶನಕ್ಕೆ ಸಹಸ್ರಾರು ಭಕ್ತರು

• ಉದಯವಾಹಿನಿ, ಬೆಂಗಳೂರು

ಜಯನ

ತಮಿಳುನಾಡಿನ ಡಕಾಯಿತರ ಬಂಧನ

ಉದಯವಾಹಿನಿ ಚಿತ್ರ

• ಉದಯವಾಹಿನಿ, ತುಮಕೂರು

ಹುಳಿಯಾರು ಹೋಬಳಿ ಕೆಂಕೆರೆ ಬಳಿ ತೋಟದ ಮನೆಯಲ್ಲಿ ಮಂಜುನಾಥ್ ಎಂಬುವರನ್ನು ಕೊಲೆ ಮಾಡಿದ್ದ ನಾಲ್ವರು ಅಂತರರಾಜ್ಯ ದರೋಡೆಕೋರರನ್ನು ಪೊಲೀಸರು ಬಂಧಿಸಿದ್ದಾರೆ. ತಲೆಮರೆಸಿಕೊಂಡಿರುವ ಮತ್ತೊಬ್ಬನ ಬಂಧನಕ್ಕೆ ಬಲೆ ಬೀಸಿದ್ದಾರೆ. ತಮಿಳುನಾಡಿನ ಹೊಸೂರು ಬಳಿಯ ಬತ್ತಲಪಲ್ಲಿಯ ಚಾಲಕ ಸತೀಶ್ ಕುಮಾರ್ (40), ಸೇಲಂ ತಾಲ್ಲೂಕಿನ ಕಡಗತ್ತೂರು ಗ್ರಾಮದ ಕೇಶವನ್ (43), ದಿಂಡಿಗಲ್ ಜಿಲ್ಲೆಯ ಎರಮನಾಯಕಬಟ್ಟಿ ಗ್ರಾಮದ ಕವಿತೇಶ್ವರನ್ (22), ಸಂಬತಿ ಗ್ರಾಮದ ಅರುಣ್ ಪ್ರಶಾಂತ (26) ಬಂಧಿತರು. ಆರೋಪಿಗಳಿಂದ ಕಾರು, ಇತರೆ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ. ಕೊಲೆ ನಡೆದ ಎರಡು ದಿನಗಳಲ್ಲೇ ದರೋಡೆಕೋರರನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಮಂಜುನಾಥ್ ವಾಸವಿದ್ದ ತೋಟದ ಮನೆಗೆ ನುಗ್ಗಿ ಡಕಾಯಿತಿಗೆ ಯತ್ನಿಸಿದ್ದು, ಅದು ಸಾಧ್ಯವಾಗದೆ ಕೊಲೆ ಮಾಡಿ ಪರಾರಿಯಾಗಿದ್ದರು. ಹೆದ್ದಾರಿ ಸಮೀಪ, ಒಂಟಿ ಮನೆಗಳು, ತೋಟದ ಮನೆಗಳ ಮೇಲೆ ದಾಳಿ ನಡೆಸಿ ದರೋಡೆ ಮಾಡುತ್ತಿದ್ದರು. ಕೆಂಕೆರೆಯಲ್ಲೂ ದರೋಡೆಗೆ ಮುಂದಾಗಿದ್ದು, ಮಂಜುನಾಥ್ ಕಿರುಚಿಕೊಂಡಿದ್ದರಿಂದ ಕೊಲೆ ಮಾಡಿ ಪರಾರಿಯಾಗಿದ್ದರು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕೆಂಕೆರೆಯಲ್ಲಿ ಶಾಮಿಯಾನ ಅಂಗಡಿ ನಡೆಸುತ್ತಿದ್ದ ಮಂಜುನಾಥ್, ತೋಟದಲ್ಲಿ ಮನೆ ನಿರ್ಮಿಸಿಕೊಂಡು ವಾಸವಿದ್ದರು. ಜ. 11ರ ರಾತ್ರಿ 8.30 ಗಂಟೆ ಸಮಯದಲ್ಲಿ ಕೆಲವರು ಮನೆಯ ಬಳಿಗೆ ಬಂದಿದ್ದು, 'ಕಳ್ಳರು ಬಂದಿದ್ದಾರೆ, ಬನ್ನಿ ಚಿಕ್ಕಪ್ಪ' ಎಂದು ಮಕ್ಕಳು ಕೂಗಿಕೊಂಡಿದ್ದಾರೆ. ಮನೆಯ ಹೊರಗೆ ಇಬ್ಬರು ಹೆಣ್ಣು ಮಕ್ಕಳ ಜತೆಗೆ ಮಂಜುನಾಥ್ ಕುಳಿತಿದ್ದರು. ಹಿರಿಯ ಮಗಳು, ಮಂಜುನಾಥ್‌ನನ್ನು ಐವರು ಹಿಡಿದುಕೊಂಡು ಬಾಯಿ ಮುಚ್ಚಿಕೊಂಡಿದ್ದಾರೆ. ಒಬ್ಬ ಮಗಳು ಮನೆ ಒಳಗೆ ಹೋಗಿ ಬಾಗಿಲು ಹಾಕಿಕೊಂಡಿದ್ದಾಳೆ. ಮನೆ ಬಾಗಿಲು ತೆಗೆಸುವಂತೆ ಒತ್ತಾಯಿಸಿದ್ದು, ಬಾಗಿಲು ತೆಗೆಯದಿದ್ದಾಗ ಕೊಲೆ ಮಾಡಿ ಪರಾರಿಯಾಗಿದ್ದರು. ಮುಖ ಕಾಣದಂತೆ ಮುಚ್ಚಿಕೊಂಡಿದ್ದರು. ಕೂಗಾಟ ಕೇಳಿ ನಾನು ಸ್ಥಳಕ್ಕೆ ಬಂದು ನೋಡುವುದರ ಒಳಗೆ ಕೊಲೆ ಮಾಡಿ ಪರಾರಿಯಾಗಿದ್ದರು ಎಂದು ಮೃತನ ಸಹೋದರ ದೂರು ನೀಡಿದ್ದರು.

ಯರಗೋಳ್ ಡ್ಯಾಂನಲ್ಲಿ ಮೀನು ಸಾಕಾಣಿಕೆ ನೇರ ಗುತ್ತಿಗೆಯಲ್ಲಿ ಅಕ್ರಮ ಶಂಕೆ

ಬಹಿರಂಗ ಹರಾಜಿಗೆ ಜಿಲ್ಲಾಧಿಕಾರಿಗೆ ಮನವಿ

• ಉದಯವಾಹಿನಿ, ಬಂಗಾರಪೇಟೆ

ಯರಗೋಳ್ ಡ್ಯಾಂನಲ್ಲಿ ಮೀನು ಸಾಕಾಣಿಕೆ ಮಾಡಲು 5 ವರ್ಷಗಳಿಗೆ ನೀಡಿರುವ ನೇರ ಗುತ್ತಿಗೆಯಲ್ಲಿ ಬಲಾಢ್ಯರ ಕೈವಾಡದಿಂದ ಅಕ್ರಮ ನಡೆದಿದ್ದು, ಸರಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂ. ನಷ್ಟ ಉಂಟಾಗಿದೆ. ಕೋಲಾರ ಜಿಲ್ಲೆಯ ಜನತೆಗೆ ಕುಡಿಯುವ ನೀರು ಪೂರೈಸಲು ನಿರ್ಮಿಸಿರುವ ಯರಗೋಳ್ ಡ್ಯಾಂ ಜಿಲ್ಲೆಯ ಜನತೆಗೆ ವರದಾನವಾಗಿದೆ. ಈಗ ಡ್ಯಾಂನಲ್ಲಿ ಮೀನುಗಾರಿಕೆ ಮಾಡಲು ಮೀನುಗಾರಿಕೆ ಇಲಾಖೆ ಮುಂದಾಗಿದ್ದು ಮೀನು ಕೃಷಿಕರ ಕೈಗೆ ಕೆಲಸ ಅರಸಿ ಬಂದಿದೆ. ಆದರೆ ನೇರ ಗುತ್ತಿಗೆಯಲ್ಲಿ ಅಕ್ರಮದ ವಾಸನೆ ಕಂಡು ಬಂದಿದ್ದು, ಗುತ್ತಿಗೆಗೆ ನೀಡಿರುವ ಹಣದ ಮೊತ್ತ ಇದಕ್ಕೆ ಪುಷ್ಟಿ ನೀಡುವಂತಿದೆ. ಯರಗೋಳ್ ಡ್ಯಾಂನಲ್ಲಿ ಮೀನುಗಾರಿಕೆಗೆ ಸಂಬಂಧಿಸಿದಂತೆ ಗುತ್ತಿಗೆ ನೀಡಲು ಮೀನುಗಾರಿಕೆ ಇಲಾಖೆ ಮೀನುಗಾರರ ಸಹಕಾರ ಸಂಘ, ಎಫ್‌ಪಿಒಗಳಿಂದ ಅರ್ಜಿಗಳನ್ನು ಆಹ್ವಾನಿಸಿತ್ತು.

ಅಧಿಕಾರಿಗಳು ಹೇಳುವುದೇನು?

ಗುತ್ತಿಗೆ ನೀಡುವಲ್ಲಿ ಯಾವುದೇ ಅಕ್ರಮ ನಡೆದಿಲ್ಲ ಎಲ್ಲವೂ ಕಾನೂನಿನ ಪ್ರಕಾರ ನಡೆದಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಕೋಲಾರ ಮೂಲದ ಕಂಪನಿಗೆ ಗುತ್ತಿಗೆ ನೀಡಲು ಸಾಧ್ಯವಿಲ್ಲದ ಕಾರಣ ಕಂಪನಿಯವರು ಬಂಗಾರಪೇಟೆ ತಾಲ್ಲೂಕಿಗೆ ಸಂಬಂಧಪಟ್ಟಂತೆ ಕಂಪನಿಯ ಕಾರ್ಯವ್ಯಾಪ್ತಿ ಬದಲಾಯಿಸಿಕೊಂಡು ಅರ್ಜಿ ಸಲ್ಲಿಸಿದ್ದರು. ಡ್ಯಾಂ ಬಲಮಂದೆ ಪಂಚಾಯಿತಿ ವ್ಯಾಪ್ತಿಯಲ್ಲಿದ್ದು, ಅಲ್ಲಿನ 20ಕ್ಕೂ ಹೆಚ್ಚಿನ ಸದಸ್ಯರನ್ನು ಕಂಪನಿಗೆ ಶೇರುದಾರರನ್ನಾಗಿಸಿಕೊಂಡು ಅರ್ಜಿ ಸಲ್ಲಿಸಿದ್ದಾರೆ. ಮೀನುಗಾರಿಕೆಗೆ ಒಂದೇ ಒಂದು ಅರ್ಜಿ ಬಂದಿದ್ದ ಕಾರಣ ಸರಕಾರದ ನಿಗದಿಯಂತೆ ಹೆಕ್ಟೇರ್‌ಗೆ 300 ರೂ.ಗಳಂತೆ ಒಟ್ಟು 25,200 ರೂ.ಗೆ ಒಂದು ವರ್ಷಕ್ಕೆ ಗುತ್ತಿಗೆ ನೀಡಲಾಗಿದೆ. ನಂತರ ಉಳಿದ 4 ವರ್ಷಗಳು ಇದೇ ಮೊತ್ತಕ್ಕೆ ವಾರ್ಷಿಕ ಶೇ 5ರಷ್ಟು ಹೆಚ್ಚಳ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದ್ದಾರೆ.

ಉದಯವಾಹಿನಿ ಚಿತ್ರ

ಯರಗೋಳ ಡ್ಯಾಂನಲ್ಲಿ ಮೀನುಗಾರಿಕೆಗೆ ನೀಡಿರುವ ಗುತ್ತಿಗೆಯಲ್ಲಿ ಭಾರಿ ಗೋಲ್ ಮಾಲ್ ನಡೆದಿದ್ದು, ಇದರಿಂದ ಸರಕಾರಕ್ಕೆ ಅಧಿಕ ಮೊತ್ತದಲ್ಲಿ ನಷ್ಟ ಉಂಟಾಗುತ್ತಿದೆ. ಸರಕಾರ ಬಹಿರಂಗ ಹರಾಜಿನ ಮೂಲಕ ಮೀನುಗಾರಿಕೆಗೆ ಡ್ಯಾಂ ನೀಡಬೇಕು. ಅಧಿಕಾರಿಗಳು ನನಗೆ ಗುತ್ತಿಗೆ ನೀಡಿದರೆ ವರ್ಷಕ್ಕೆ 5 ಲಕ್ಷ ಹಣ ಪಾವತಿಸುತ್ತೇನೆ. 5 ವರ್ಷಗಳ ಅವಧಿಗೆ ನೀಡಿದರೆ 20 ಲಕ್ಷ ಪಾವತಿಸುತ್ತೇನೆ.

-ಕಾರ್ತಿಕ್, ಭೀಮಗಾನಹಳ್ಳಿ

- **ಯರಗೋಳ್ ಡ್ಯಾಂನಲ್ಲಿ 5 ವರ್ಷಗಳಿಗೆ ಮೀನು ಸಾಕಾಣಿಕೆ ಗುತ್ತಿಗೆ**
- **ಗುತ್ತಿಗೆಯಲ್ಲಿ ಬಲಾಢ್ಯರ ಕೈವಾಡದಿಂದ ಸರ್ಕಾರಕ್ಕೆ ನಷ್ಟ ಎಂಬುದರ ಬಗ್ಗೆ ಅಧಿಕಾರಿಗಳು ಹೇಳೊದೇನು?**

ವಾಸ್ತವವಾಗಿ ಡ್ಯಾಂನಲ್ಲಿ ಬಂಗಾರಪೇಟೆ ತಾಲ್ಲೂಕಿನ ಸಂಘದವರು ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದೆ. ಆದರೆ ಮಾಹಿತಿ ಕೊರತೆಯೋ ಅಥವಾ ಇತರೆ ಯಾವುದೋ ಕಾರಣವೋ ಗೊತ್ತಿಲ್ಲ ತಾಲ್ಲೂಕಿನಿಂದ ಯಾವುದೇ ಸಂಘ ಅರ್ಜಿಯನ್ನು ಸಲ್ಲಿಸಿಲ್ಲ. ವಿಪರ್ಯಾಸವೆಂದರೆ ಕೋಲಾರ ಮೂಲದ ಸಪ್ಪಲಮ್ಮ ದೇವಿ ಮೀನು ರೈತ ಉತ್ಪಾದಕರ ಕಂಪನಿ ಅರ್ಜಿ ಸಲ್ಲಿಸಿ ಗುತ್ತಿಗೆಯನ್ನು ತನ್ನದಾಗಿಸಿಕೊಂಡಿದೆ. ಸರಕಾರದ ನಿಯಮದಂತೆ ಡ್ಯಾಂ ಇರುವ ತಾಲ್ಲೂಕಿನ ಸಂಘ ಮತ್ತು ಕಂಪನಿ ಬಿಟ್ಟು ಇತರೆ ತಾಲ್ಲೂಕಿನವರು ಅರ್ಜಿಯನ್ನು ಸಲ್ಲಿಸುವಂತಿಲ್ಲ.

ಯರಗೋಳ್ ಡ್ಯಾಂನಲ್ಲಿ ಮೀನು ಸಾಕಾಣಿಕೆಗೆ ಕೋಲಾರ ಮೂಲದವರಿಗೆ ಲೀಸ್‌ಗೆ ನೀಡಲಾಗಿದೆ. ಆದರೆ ಕಾನೂನಿನ ಪ್ರಕಾರ ಹಾಗೆ ನೀಡುವಂತಿಲ್ಲ. ಸಹಕಾರ ಸಂಘದವರು ಅರ್ಜಿಯನ್ನು ಸಲ್ಲಿಸಿಲ್ಲ ಎಂಬ ಕಾರಣಕ್ಕೆ ಕೋಲಾರ ಮೂಲದ ಎಫ್‌ಪಿಒಗೆ ಗುತ್ತಿಗೆ ನೀಡಲಾಗಿದೆ. ಟೆಂಡರ್ ಅಥವಾ ಹರಾಜಿನಲ್ಲಿ ಗುತ್ತಿಗೆ ನೀಡಿದರೆ ವರ್ಷಕ್ಕೆ 20 ಲಕ್ಷ ಆದಾಯ ಬರಲಿದೆ. ಎಫ್‌ಪಿಒ ಅಧಿಕಾರಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ ಗುತ್ತಿಗೆ ಪಡೆಯುವ ಮೂಲಕ ಅಕ್ರಮ ನಡೆಸಿದ್ದಾರೆ.

-ಹೆಸರು ಹೇಳಲು ಇಚ್ಛಿಸದ ಅಧಿಕಾರಿ

ಆದರೆ ಇಲ್ಲಿ ನಿಯಮವನ್ನು ತಮ್ಮ ಅನುಕೂಲಕ್ಕೆ ಮಾಡಿಕೊಂಡು ಕೋಲಾರದ ಜಯನಗರದಲ್ಲಿರುವ ಎಫ್‌ಪಿಒ ಬಂಗಾರಪೇಟೆ ತಾಲ್ಲೂಕಿನ ಮಾದಿಗರಹಳ್ಳಿ ಗ್ರಾಮದಲ್ಲಿ ಕಂಪನಿ ಕಾರ್ಯ ನಿರ್ವಹಿಸುತ್ತಿದೆ ಎಂದು ದಾಖಲೆಗಳನ್ನು ಸೃಷ್ಟಿಸಿ ಗುತ್ತಿಗೆಗೆ ಅರ್ಜಿ ಸಲ್ಲಿಸಿದೆ. ಅರ್ಜಿ ಸಲ್ಲಿಸಲು ನಿಗದಿ ಮಾಡಿದ್ದ ಕೊನೆ ದಿನದಂದು ಅರ್ಜಿಯನ್ನು ಸಲ್ಲಿಸಿ ಗುತ್ತಿಗೆಯನ್ನು ತಮ್ಮದಾಗಿಸಿಕೊಂಡಿದೆ.

ಕನಿಷ್ಠ 5 ಲಕ್ಷಕ್ಕೂ ಹೆಚ್ಚು ಗುತ್ತಿಗೆ ಮೊತ್ತಕ್ಕೆ ಅವಕಾಶ ಇರುವ ಸ್ಥಳದಲ್ಲಿ ಕೇವಲ ವಾರ್ಷಿಕ 25,200 ರೂ.ಗಳಂತೆ 5 ವರ್ಷಗಳ ಅವಧಿಗೆ ಮೀನುಗಾರಿಕೆ ಇಲಾಖೆ ಗುತ್ತಿಗೆ ನೀಡಿದೆ. ಗುತ್ತಿಗೆ ತಮ್ಮದಾಗಿಸಿಕೊಳ್ಳಲು ರಾಜಕಾರಣಿಗಳ ಕೃಪಾ ಕಟಾಕ್ಷವನ್ನು ಪಡೆದು ಸಪ್ಪಲಮ್ಮ ದೇವಿ ಮೀನು ರೈತ ಉತ್ಪಾದಕರ ಕಂಪನಿಯ ಆಡಳಿತ ಮಂಡಳಿಯ ಸದಸ್ಯರು ಅಧಿಕಾರಿಗಳ ಮೇಲೆ ಒತ್ತಡವನ್ನು ಹೇರಿ ಗುತ್ತಿಗೆಯನ್ನು ತಮ್ಮದಾಗಿಸಿಕೊಂಡಿದ್ದಾರೆ ಎಂಬ ಆರೋಪ ವ್ಯಾಪಕವಾಗಿ ಕೇಳಿಬರುತ್ತಿದೆ. ಯರಗೋಳ್ ಡ್ಯಾಂನಲ್ಲಿ ಮೀನುಗಾರಿಕೆಗೆ ನೀಡಿರುವ ಗುತ್ತಿಗೆಯಲ್ಲಿ ಅಕ್ರಮ ನಡೆದಿದೆ. ಡ್ಯಾಂನ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಮೀನುಗಾರಿಕೆ ಕುಟುಂಬಗಳಿದ್ದು, ಅವರ ಜೀವನೋಪಾಯಕ್ಕೆ ಮತ್ತು ಮೀನುಗಾರರ ಕೈಗೆ ಕೆಲಸ ನೀಡಲು ಎಫ್‌ಪಿಒಗೆ ನೀಡುರುವ ಗುತ್ತಿಗೆ ರದ್ದುಪಡಿಸಿ ಬಹಿರಂಗ ಹರಾಜು ಹಾಕಬೇಕೆಂದು ಕೆಲವರು ಜಿಲ್ಲಾಧಿಕಾರಿ, ಜಿಪಂ, ಮೀನುಗಾರಿಕೆ ಇಲಾಖೆಗಳಿಗೆ ಮನವಿ ಸಲ್ಲಿಸಿದ್ದಾರೆ.

ಮಿನಿ ನ್ಯೂಸ್

ಅವರೆ ತಳಿ ತರಬೇತಿ

• ಉದಯವಾಹಿನಿ, ಮಾಗಡಿ

ತಾಲ್ಲೂಕಿನ ಚಂದೂರಾಯನಹಳ್ಳಿ ಕೃಷಿ ವಿಜ್ಞಾನ ಕೇಂದ್ರದಿಂದ ತಾಲ್ಲೂಕಿನ ಹಾಲಶೆಟ್ಟಿಪಳ್ಳಿಯಲ್ಲಿ ಹೊಸ ಅವರೆ ತಳಿ ಎಚ್.ಎ.-5 ತರಬೇತಿ ಕಾರ್ಯಕ್ರಮ ನಡೆಯಿತು. ಕೇಂದ್ರದ ಸಸ್ಯ ಸಂರಕ್ಷಣೆ ವಿಜ್ಞಾನಿ ರಾಜೇಂದ್ರ ಪ್ರಸಾದ್ ಮಾತನಾಡಿ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಿಂದ ಹೆಬ್ಬಾಳ 'ಅವರೆ-5' ಎಂಬ ಹೊಸ ತಳಿ ಅಭಿವೃದ್ಧಿಪಡಿಸಿ 2022ರಲ್ಲಿ ಬಿಡುಗಡೆಗೊಳಿಸಿದೆ. ಈ ತಳಿ 75ರಿಂದ 80 ದಿನಗಳ ಅವಧಿಯಲ್ಲಿ ಹಸಿಕಾಯಿ ಕಟಾವಿಗೆ ಬರುವ ಅಲ್ಪಾವದಿ ತಳಿ ಎಂದರು.

ಹೂಗಳ ಬಣ್ಣ ಹಸಿರು: ಬಲಿತ ಕಾಯಿಗಳಲ್ಲಿ ತಿಳಿಕಂದು ಬಣ್ಣದ 2-3 ಗುಂಡನೆಯ ಬೀಜಗಳಿದ್ದು ವಿಶೇಷವಾಗಿ ನಾಟಿ ಅವರೆಗೆ ಇರುವಂತೆ ಸೊಗಡು ಹೊಂದಿದ್ದು, ಕಾಯಿಗಳು ನೋಡಲು ಆಕರ್ಷಕವಾಗಿರುತ್ತವೆ ಎಂದು ತಿಳಿಸಿದರು. ಕೇಂದ್ರದ ವಿಜ್ಞಾನಿ ಪ್ರಮೋದ್ ಮಾತನಾಡಿ, ಪ್ರತಿ ಎಕರೆಗೆ ಹಸಿಕಾಯಿ 10ರಿಂದ 12 ಕ್ವಿಂಟಲ್ ಹಾಗೂ ಕಾಳು 3ರಿಂದ 4 ಕ್ವಿಂಟಲ್ ಇಳುವರಿ ನೀಡುವ ಸಾಮರ್ಥ್ಯ ಹೊಂದಿದೆ. ಕೇವಲ ಮೂರು ತಿಂಗಳಿಗೆ ಕಾಯಿ ಕಟಾವಿಗೆ ಬರುವುದರಿಂದ ಮಾರುಕಟ್ಟೆಯಲ್ಲಿ ಹೆಚ್ಚಿನ ಲಾಭ ಪಡೆಯಬಹುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ 30 ಜನ ರೈತರಿಗೆ ಅವರೆ ಬಿತ್ತನೆ ಬೀಜ ವಿತರಿಸಲಾಯಿತು.

ರೈತಪರ ಹೋರಾಟ ಸಮಿತಿ ಪದಾಧಿಕಾರಿಗಳ ಸಭೆ

• ಉದಯವಾಹಿನಿ, ಶಿಡ್ಲಘಟ್ಟ

ತಾಲ್ಲೂಕಿನ ಜಂಗಮಕೋಟೆ ಹೋಬಳಿಯ ಸುಮಾರು 13 ಹಳ್ಳಿಗಳ ರೈತಪರ ಹೋರಾಟ ಸಮಿತಿ ನಿರಂತರ ಒಂದೂವರೆ ವರ್ಷದ ಹೋರಾಟದ ಪ್ರತಿಫಲವಾಗಿ ಈ ಭಾಗದ ಸುಮಾರು 471 ಎಕರೆ ನೀರಾವರಿ ಪ್ರದೇಶವನ್ನು ಕೈಬಿಟ್ಟಿರುವುದು ಸ್ವಾಗತಾರ್ಹ ಎಂದು ಕೆಐಎಡಿಬಿ 13 ಹಳ್ಳಿಗಳ ರೈತಪರ ಹೋರಾಟ ಸಮಿತಿಯ ರಾಮಾಂಜನೇಯ ಹೇಳಿದರು. ತಾಲ್ಲೂಕಿನ ಜಂಗಮಕೋಟೆ ಪೂಜಮ್ಮ ದೇವಾಲಯದ ಆವರಣದಲ್ಲಿ ಕೆಐಎಡಿಬಿ 13 ಹಳ್ಳಿಗಳ ರೈತಪರ ಹೋರಾಟ ಸಮಿತಿಯ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದರು. ಈ ಹಿಂದೆ ಕೆಐಎಡಿಬಿಯಿಂದ ಸೂಚನೆ ಹೊರಡಿಸಿದ್ದ 2823 ಎಕರೆ ಜಮೀನಿನ ಪೈಕಿ ಫಲವತ್ತಾದ, ನೀರಾವರಿ ಪ್ರದೇಶವಾದ 471 ಎಕರೆ ಹೊರತುಪಡಿಸಿ ಉಳಿದ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸುವ ಮೂಲಕ ತ್ವರಿತವಾಗಿ ಈ ಭಾಗದಲ್ಲಿ ಕೈಗಾರಿಕೆ ಸ್ಥಾಪಿಸಲು ಸರ್ಕಾರ ಮುಂದಾಗಬೇಕು ಎಂದರು. ಜಂಗಮಕೋಟೆ ಹೋಬಳಿಯಲ್ಲಿ ಕೆಲ ಬಲಾಢ್ಯರು ರಿಯಲ್ ಎಸ್ಟೇಟ್ ದಂದೆ ಮಾಡುವ ಮೂಲಕ ಬಡವರಿಗೆ ಕಡಿಮೆ ಹಣ ನೀಡಿ ಜಮೀನುಗಳ ಜಿಪಿಎ ಮಾಡಿಸಿಕೊಂಡು ಮೋಸ ಮಾಡಿರುತ್ತಾರೆ. ಇದನ್ನೆಲ್ಲಾ ತಪ್ಪಿಸಬೇಕಾದರೆ ಸರ್ಕಾರ ತ್ವರಿತವಾಗಿ ಕೈಗಾರಿಕೆ ಸ್ಥಾಪನೆಗಳಿಗೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಡಿಕೆಶಿ ಯಾಕಾಗಿ ದೆಹಲಿಗೆ ಹೋಗಿದ್ದಾರೋ ಗೊತ್ತಿಲ್ಲ: ಸಿಎಂ ಸಿದ್ದರಾಮಯ್ಯ

• ಉದಯವಾಹಿನಿ, ತುಮಕೂರು

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿ ಭೇಟಿ ವಿಚಾರ ನನಗೆ ಗೊತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು. ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಡಿ.ಕೆ. ಶಿವಕುಮಾರ್ ದೆಹಲಿಗೆ ಏತಕ್ಕೆ ಹೋಗಿದ್ದಾರೆ. ಹೈಕಮಾಂಡ್ ಭೇಟಿ ಬಗ್ಗೆ ಗೊತ್ತಿಲ್ಲ ಎಂದರು. ಶಾಸಕ ಕೆ.ಎನ್.ರಾಜಣ್ಣ ಅವರಿಗೆ ಮತ್ತೆ ಸಚಿವ ಸ್ಥಾನ ನೀಡಲಾಗುತ್ತದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ. ಈ ಬಗ್ಗೆ ಹೈಕಮಾಂಡ್ ಜತೆ ಚರ್ಚಿಸಲಾಗುವುದು ಎಂದು ಹೇಳಿದರು.

ಬ್ಯಾನರ್ ವಿಚಾರ: ನೌಕರರಿಗೆ ಧಮ್ಕಿ ಹಾಕಿದ್ದಕ್ಕೆ ಸಂಸದ ಖಂಡನೆ

• ಉದಯವಾಹಿನಿ, ಕೋಲಾರ

ಬ್ಯಾನರ್ ವಿಚಾರದಲ್ಲಿ ಶಿಡ್ಲಘಟ್ಟದ ಪೌರಾಯುಕ್ತರು ಹಾಗೂ ಪೌರಕಾರ್ಮಿಕರಿಗೆ ದೂರವಾಣಿ ಮೂಲಕ ಧಮ್ಕಿ ಹಾಕಿರುವ ಕಾಂಗ್ರೇಸ್ ಮುಖಂಡ ರಾಜೀವ್ ಗೌಡ ಕ್ರಮವನ್ನು ಖಂಡಿಸುತ್ತೇನೆ. ರಾಜ್ಯದಲ್ಲಿ ಪಕ್ಷ ಅಧಿಕಾರದಲ್ಲಿ ಇದೆ ಎಂದು ಏನು ಬೇಕಾದರೂ ಮಾಡಬಹುದು ಎಂಬ ಆಹಂ ಸರಿ ಅಲ್ಲ ಎಂದು ಸಂಸದ ಎಂ.ಮಲ್ಲೇಶ್ ಬಾಬು ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರಿ ನೌಕರರು ಕಾನೂನಿನಡಿ ಕೆಲಸ ಮಾಡುತ್ತಾರೆ. ಧಮ್ಕಿ ಹಾಕಿ ಕೆಲಸ ಮಾಡಿಸಿಕೊಳ್ಳುವುದು ಸರಿ ಅಲ್ಲ. ಇದು ಸಮಾಜಕ್ಕೆ ಕೆಟ್ಟ ಸಂದೇಶ ನೀಡುವಂಥದ್ದು ಎಂದರು. ರಾಜ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರವಹಿಸಬೇಕು. ಬಳ್ಳಾರಿ ಹಾಗೂ ಈಚೆಗೆ ಮಾಲೂರಿನಲ್ಲೂ ಬ್ಯಾನರ್ ಸಂಬಂಧ ಗಲಾಟೆ ಆಗಿದೆ. ರಾಜ್ಯದಲ್ಲಿ ಆಡಳಿತ ಪಕ್ಷಕ್ಕೊಂದು ಕಾನೂನು, ವಿರೋಧ ಪಕ್ಷದವರಿಗೊಂದು ಕಾನೂನು ಎಂಬಂತಾಗಿದೆ ಎಂದು ಟೀಕಾ ಪ್ರಹಾರ ನಡೆಸಿದರು.

ರಾಮನಗುಡ್ಡೆ ಕೆರೆಗೆ ನೀರು ಹರಿಸಲು ಸಿದ್ಧತೆ

• ಉದಯವಾಹಿನಿ, ಹನೂರು

ನಿರ್ಮಾಣವಾಗಿ ನಲವತ್ತು ವರ್ಷ ಕಳೆದರೂ ನೀರಿಲ್ಲದೇ ಬರಡಾಗಿದ್ದ ರಾಮನಗುಡ್ಡೆ ಕೆರೆಗೆ ಕೊನೆಗೂ ನೀರು ಹರಿಸಲು ಸಿದ್ಧತೆಗಳು ನಡೆದಿದ್ದು, ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ದೊರೆಯಲಿದೆ. ಸಾವಿರಾರು ಕೃಷಿ ಭೂಮಿಗೆ ನೀರುಣಿಸಿ ನೂರಾರು ಪ್ರಾಣಿ ಪಕ್ಷಿಗಳಿಗೆ ಜೀವಜಲವಾಗಬೇಕಿದ್ದ ರಾಮನಗುಡ್ಡೆ ಕೆರೆ ನಾಲ್ಕು ದಶಕಗಳಿಂದಲೂ ನೀರಿಲ್ಲದೆ ಒಣಗಿ ನಿಂತಿತ್ತು. ಕೆರೆ ನಿರ್ಮಾಣವಾಗುವ ಸಂದರ್ಭದಲ್ಲಿ ರೈತರಿಗೆ ಹೊಸ ಹರ್ಷ ಮೂಡಿತ್ತು. ಆದರೆ ಹನೂರು ತಾಲ್ಲೂಕಿನಲ್ಲಿ ಮಳೆ ಕೊರತೆಯಿಂದಾಗಿ ಒಂದೆರಡು ಬಾರಿ ಮಾತ್ರ ಭರ್ತಿಯಾಗಿತ್ತು. ಇದರಿಂದ ರೈತರಿಗೆ ಯಾವುದೇ ಉಪಯೋಗ ಆಗುತ್ತಿರಲಿಲ್ಲ. ಕಳೆದ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಕಾವೇರಿ ನದಿ ಮೂಲದಿಂದ ತಾಲ್ಲೂಕಿನ ಹುಬ್ಬೆಹುಣಸೆ, ರಾಮನಗುಡ್ಡೆ ಹಾಗೂ ಗುಂಡಾಲ್ ಜಲಾಶಯಕ್ಕೆ ನೀರು ತುಂಬಿಸುವುದಾಗಿ ಭರವಸೆ ನೀಡಲಾಗಿತ್ತು.

ಈ ಪೈಕಿ ಗುಂಡಾಲ್ ಜಲಾಶಯಕ್ಕೆ ನೀರು ಯೋಜನೆ ಜಾರಿಗೊಳಿಸಲಾಯಿತು. ಆದರೆ ಉಳಿದ ಎರಡು ಯೋಜನೆ ನನೆಗುದಿಗೆ ಬಿದ್ದಿತು. ಈ ಬಗ್ಗೆ ರೈತ ಹಾಗೂ ಪ್ರಗತಿಪರ ಸಂಘಟನೆಗಳು ಸಾಕಷ್ಟು ಸಲ ರಾಮನಗುಡ್ಡೆ ಹಾಗೂ ಹುಬ್ಬೆಹುಣಸೆ ಕೆರೆಗಳಿಗೆ

ಉದಯವಾಹಿನಿ ಚಿತ್ರ

ನೀರು ತುಂಬಿಸುವಂತೆ ಪ್ರತಿಭಟನೆ ನಡೆಸಿದ್ದವು.

ಕ್ಷೇತ್ರದ

ಅಂತರಾಳದಿಂದ... EDITORIAL

ಭಾರತಕ್ಕೆ ಅಪಾಯ ತಂದಿಡಲಿರುವ ದ್ವೇಷ ಭಾಷಣಗಳೆಂಬ ವೈರಸ್‌ಗಳು

ಭಾರತದಲ್ಲಿ ಅತಿ ಹೆಚ್ಚು ಉತ್ಪಾದನೆಯಾಗುತ್ತಿರುವುದು ದೇಷ ಭಾಷಣ ಎನ್ನುವುದು ಸರಕಾರೇತರ ಸಂಸ್ಥೆ ಬಿಡುಗಡೆ ಮಾಡಿದ ವರದಿಯಿಂದ ಬಹಿರಂಗವಾಗಿದೆ. ಸ್ವದೇಶಿ ಆರ್ಥಿಕತೆಯನ್ನು ಮೇಲೆತ್ತಲು ಮೇಕ್ ಇನ್ ಇಂಡಿಯಾ ಸೇರಿದಂತೆ ಕೇಂದ್ರ ಸರಕಾರ ಘೋಷಿಸಿದ ಹತ್ತು ಹಲವು ಯೋಜನೆಗಳು ವಿಫಲಗೊಂಡಿವೆಯಾದರೂ, ದ್ವೇಷ ಭಾಷಣ ಉತ್ಪಾದನೆಯಲ್ಲಿ ಮಾತ್ರ ಅಗ್ರ ಸ್ಥಾನದಲ್ಲಿದೆ.

ಉತ್ಪಾದನೆಯಾಗುತ್ತಿರುವ ದ್ವೇಷವನ್ನು ರಫ್ತು ಮಾಡುವ ಅವಕಾಶವಿದ್ದಿದ್ದರೆ ಭಾರತದ ವಿದೇಶ ವಿನಿಮಯದಲ್ಲಿ ಭಾರೀ ಹೆಚ್ಚಳವಾಗುತ್ತಿತ್ತು ಅಮೆರಿಕದ ಟ್ರಂಪ್ ಈ ಉತ್ಪನ್ನಕ್ಕೆ ಭಾರೀ ಸುಂಕ ವಿಧಿಸಬೇಕಾದ ಸ್ಥಿತಿ ನಿರ್ಮಾಣವಾಗಿ ಬಿಡುತ್ತಿತ್ತು.

ಈ ದ್ವೇಷ ಉತ್ಪಾದನೆಯ ನೇತೃತ್ವವನ್ನು ಕೇಂದ್ರ ಸರಕಾರವೇ ವಹಿಸಿಕೊಂಡಿದ್ದು, ಜನಪ್ರತಿನಿಧಿಗಳೇ ದ್ವೇಷದ ಕೃಷಿಗಾಗಿ ಹಗಲು ರಾತ್ರಿ ದುಡಿಯುತ್ತಿದ್ದಾರೆ. ಸೆಂಟರ್ ಫಾರ್ ದಿ ಸ್ಟಡಿ ಆರ್ಗನೈಸ್ಡ್ ಹೇಟ್(ಸಿಎಸ್‌ಒಎಚ್ ಅಧೀನದಲ್ಲಿರುವ ಇಂಡಿಯಾ ಹೇಟ್ ಲ್ಯಾಬ್ ಬಿಡುಗಡೆ ಮಾಡಿದ 2025ರ ವರದಿಯ ಪ್ರಕಾರ, ಭಾರತದಲ್ಲಿ ದ್ವೇಷ ಭಾಷಣಗಳ ಪ್ರಮಾಣ ಆತಂಕಕಾರಿಮಟ್ಟದಲ್ಲಿ ಹೆಚ್ಚುತ್ತಿದೆ. ಈ ದ್ವೇಷ ಭಾಷಣಗಳು ಸಾಮರಸ್ಯ, ಅಂತರಿಕ ಭದ್ರತೆ ಹಾಗೂ ಪ್ರಜಾಪ್ರಭುತ್ವದ ಸ್ವರೂಪಕ್ಕೆ ಧಕ್ಕೆಯುಂಟು ಮಾಡುತ್ತಿದೆ. ವರದಿಯ ಪ್ರಕಾರ, 2025ರಲ್ಲಿ ದೇಶಾದ್ಯಂತ ಒಟ್ಟು 1,318 ದ್ವೇಷ ಭಾಷಣದ ಘಟನೆಗಳು ದಾಖಲಾಗಿವೆ. ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಭಾರತದಲ್ಲಿ ಇದು ಅತ್ಯಧಿಕವಾಗಿದೆ. 2023ರಲ್ಲಿ 658 ದ್ವೇಷ ಭಾಷಣದ ಘಟನೆಗಳು ದಾಖಲಾಗಿದ್ದವು. ಎಲ್ಲಕ್ಕಿಂತ ಮುಖ್ಯವಾಗಿ ಒಟ್ಟು ದ್ವೇಷ ಭಾಷಣಗಳಲ್ಲಿ ಶೇ. 98 ರಷ್ಟು ಅಂದರೆ 1,289 ಘಟನೆಗಳು ಮುಸ್ಲಿಮ್ ಸಮುದಾಯವನ್ನು ಗುರಿಯಾಗಿಸಿಕೊಂಡಿವೆ. ಕ್ರಿಶ್ಚಿಯನ್ ಸಮುದಾಯದ ವಿರುದ್ಧದ ದ್ವೇಷ ಭಾಷಣಗಳು ಹಿಂದಿನ ಅವಧಿಗೆ ಹೋಲಿಸಿದರೆ ಶೇ 41ರಷ್ಟು ಹೆಚ್ಚಾಗಿದ್ದು, 162 ಪ್ರಕರಣಗಳು ದಾಖಲಾಗಿವೆ ಎಂದು ವರದಿ ತಿಳಿಸಿದೆ. ಒಟ್ಟು ಘಟನೆಗಳಲ್ಲಿ ಶೇ. 88ರಷ್ಟು ಬಿಜೆಪಿ ಅಥವಾ ಎನ್‌ಡಿಎ ಮೈತ್ರಿಕೂಟದ ಆಡಳಿತ ವಿರುವ ರಾಜ್ಯಗಳಲ್ಲಿ ನಡೆದಿದ್ದರೆ, ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ಇಂತಹ ಘಟನೆಗಳು ಶೇ. 34ರಷ್ಟು ಇಳಿಕೆಯಾಗಿರುವುದನ್ನೂ ವರದಿ ಬೆಟ್ಟು ಮಾಡಿದೆ. ಈ ದ್ವೇಷದ ಕೃಷಿಯ ಹೆಚ್ಚಳಕ್ಕೆಂದೇ ಇಲ್ಲಿ ಮತಾಂತರ ಕಾಯ್ದೆ ಜಾನುವಾರು ಹತ್ಯೆ ಕಾಯ್ದೆಗಳನ್ನು ಜಾರಿಗೊಳಿಸಲಾಯಿತು. ಲವ್‌ಜಿಹಾದ್, ಲ್ಯಾಂಡ್ ಜಿಹಾದ್, ಜನಸಂಖ್ಯಾ ಜಿಹಾದ್‌ನಂತಹ ಕಾಲ್ಪನಿಕ ಪಿತೂರಿಗಳ ಗೊಬ್ಬರಗಳನ್ನು ಬಳಸಿ ಇಲ್ಲಿ ದ್ವೇಷದ ಬೆಳೆಯನ್ನು ಯಥೇಚ್ಛವಾಗಿ ಬೆಳೆಯಲಾಗಿದೆ. ಸುಮಾರು 656ರ ಪ್ರಕರಣಗಳಲ್ಲಿ ಈ ವಿಷಯಗಳನ್ನು ಬಳಸಿಕೊಂಡು ಹಿಂಸೆಗೆ ಕರೆ ನೀಡಲಾಗಿದೆ. ಸುಮಾರು 308 ಭಾಷಣಗಳಲ್ಲಿ ಹಿಂಸಾಚಾರಕ್ಕೆ ಕರೆ ನೀಡಲಾಗಿದ್ದರೆ, 136 ಭಾಷಣಗಳಲ್ಲಿ ಸಾರ್ವಜನಿಕವಾಗಿ ಶಸ್ತ್ರಾಸ್ತ್ರಗಳನ್ನು ಹಿಡಿಯುವಂತೆ ಪ್ರಚೋದಿಸಲಾಗಿದೆ. 120 ಭಾಷಣಗಳಲ್ಲಿ ಅಲ್ಪಸಂಖ್ಯಾತ ಸಮುದಾಯಗಳ ವ್ಯಾಪಾರ ವಹಿವಾಟುಗಳನ್ನು ಬಹಿಷ್ಕರಿಸುವಂತೆ ಕರೆ ನೀಡಲಾಗಿದೆ. ಸಾಮಾಜಿಕ ಮಾಧ್ಯಮಗಳು ದ್ವೇಷ ವೈರಸ್ ಹರಡಲು ಅತ್ಯುತ್ತಮ ವಾಹಕಗಳಾಗಿವೆ ಎಂದು ವರದಿ ಅಭಿಪ್ರಾಯ ಪಡುತ್ತದೆ. ಎಲ್ಲೋ ಯಾವುದೋ ಮೂಲೆಯಲ್ಲಿ ಮಾಡಿದ ಭಾಷಣ ಆ ಪ್ರದೇಶ ಮತ್ತು ಆ ಸಂದರ್ಭಕ್ಕಷ್ಟೇ ಸೀಮಿತವಾಗಿ ಉಳಿಯುವುದಿಲ್ಲ. ಸಾಮಾಜಿಕ ಮಾಧ್ಯಮಗಳ ಮೂಲಕ ಅದು ಇಡೀ ದೇಶಕ್ಕೆ ಸಾಂಕ್ರಾಮಿಕ ವೈರಸ್‌ನಂತೆ ಹರಡುತ್ತದೆ ಮತ್ತು ಈ ದ್ವೇಷವನ್ನು ಹರಡುವವರು ಕೇವಲ ತಳಸ್ತರದ ಕೋಮುವಾದಿ ಸಂಘಟನೆಗಳ ಮುಖಂಡರಲ್ಲ ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು 71 ಭಾಷಣಗಳ ಮೂಲಕ ದ್ವೇಷ ಭಾಷಣಗಳಿಗಾಗಿ ಅಗ್ರಸ್ಥಾನದಲ್ಲಿದ್ದಾರೆ. ವಿಪರ್ಯಾಸವೆಂದರೆ, ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರೇ ದ್ವೇಷ ಭಾಷಣಗಳಿಗಾಗಿ ಮಾಧ್ಯಮಗಳಲ್ಲಿ ಸುದ್ದಿಯಾದರು, ದೇಶ ಆರ್ಥಿಕತೆಯಲ್ಲಿ ಹಿನ್ನಡೆ ಅನುಭವಿಸುತ್ತಿದ್ದಂತೆಯೇ ರಾಜಕಾರಣಿಗಳು ಭಾವನಾತ್ಮಕ ವಿಷಯಗಳಿಗೆ ಮೊರೆಹೋಗುವುದು ಅನಿವಾರ್ಯವಾಗುತ್ತದೆ. ಕಳೆದ ಕೆಲವು ವರ್ಷಗಳಿಂದ ದೇಶ ಅನುಭವಿಸುತ್ತಿರುವ ಆರ್ಥಿಕ ಹಿನ್ನಡೆಗೂ, ಹೆಚ್ಚುತ್ತಿರುವ ದ್ವೇಷ ಭಾಷಣಗಳಿಗೂ ನೇರ ಸಂಬಂಧವಿದೆ. ವರ್ತಮಾನದ ದ್ವೇಷ ಭಾಷಣಗಳು ಭವಿಷ್ಯದ ನರಮೇಧಗಳ ಬೀಜಗಳು ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ದ್ವೇಷ ಭಾಷಣ ಕೇವಲ ಆ ವೇದಿಕೆಗೆ ಸೀಮಿತವಾಗಿ ಉಳಿಯುವುದಿಲ್ಲ, ಅದು ಬೀಜವಾಗಿ ಜನ ಸಾಮಾನ್ಯರ ಎದೆಗೆ ಬಿದ್ದು ಮೊಳಕೆಯೊಡೆದು ಗಿಡ ಮರವಾಗಿ ವಿಷದ ಹೂ ಹಣ್ಣು ಬಿಟ್ಟು ಒಂದು ದಿನ ಭಾರೀ ನರಮೇಧಕ್ಕೆ ಕಾರಣವಾಗುತ್ತದೆ. ದೇಶದಲ್ಲಿ ಹೆಚ್ಚುತ್ತಿರುವ ಗುಂಪು ಥಳಿತ, ಗುಂಪು ಹತ್ಯೆಯಂತಹ ಪ್ರಕರಣಗಳಿಗೆ ಪರೋಕ್ಷವಾಗಿ ಗೊಬ್ಬರ ಸುರಿಯುತ್ತಿರುವುದು ಈ ದ್ವೇಷ ಭಾಷಣಗಳೇ ಆಗಿವೆ. ಒಬ್ಬ ನಾಯಕನ ದ್ವೇಷದ ಮಾತುಗಳು ಯಾವುದೋ ಅಮಾಯಕ ವ್ಯಕ್ತಿಯ ಎದೆಗಿಳಿದು ಅದು ಅಲ್ಲಿ ಬೇರನ್ನು ಇಳಿ ಬಿಡುತ್ತವೆ. ಭಾಷಣ ಮಾಡಿದ ನಾಯಕ ಅದನ್ನು ಮರೆತು ಬಿಡಬಹುದು. ಆದರೆ ಅದು ಜನರ ಮನಸ್ಸು ಹೃದಯದಲ್ಲಿ ಆಶ್ರಯ ಪಡೆದು ಬೆಳೆಯ ತೊಡಗುತ್ತದೆ. ಅಮೆರಿಕದ ಹೋಲೋಕಾಸ್ಟ್ ಮೆಮೋರಿಯಲ್ ಮ್ಯೂಸಿಯಂ ಪ್ರಕಟಿಸಿರುವ ವಾರ್ಷಿಕ ಜಾಗತಿಕ ಅಧ್ಯಯನ ವರದಿಯ ಪ್ರಕಾರ ಭಾರತವು ಮುಂದಿನ ಎರಡು ವರ್ಷಗಳಲ್ಲಿ ನಾಗರಿಕರ ವಿರುದ್ಧ ಸಾಮೂಹಿಕ ಹಿಂಸಾಚಾರ ಮತ್ತು ಜನಾಂಗೀಯ ದೌರ್ಜನ್ಯಗಳ ಗಂಭೀರ ಅಪಾಯಕ್ಕೆ ಸಿಲುಕಬಹುದು. ಹತ್ಯಾಕಾಂಡ ನಡೆಯುವ ಸಾಧ್ಯತೆಯಿರುವ 168 ದೇಶಗಳ ಪಟ್ಟಿಯಲ್ಲಿ ಭಾರತವು ನಾಲ್ಕನೇ ಸ್ಥಾನದಲ್ಲಿದೆ. ಇಂತಹದೊಂದು ಅಪಾಯಕ್ಕೆ ಈ ದೇಶವನ್ನು ತಳ್ಳುತ್ತಿರುವವರು ಸ್ವತಃ ಈ ದೇಶವನ್ನು ಆಳುತ್ತಿರುವವರೇ ಎನ್ನುವುದು ದೊಡ್ಡ ವಿಪರ್ಯಾಸವಾಗಿದೆ. ದ್ವೇಷ ಭಾಷಣಗಳು ಈ ದೇಶವನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಲಿ ತೆಗೆದುಕೊಳ್ಳಲಿರುವ ಅತ್ಯಂತ ಅಪಾಯಕಾರಿ ವೈರಸ್‌ಗಳಾಗಿವೆ. ಈ ವೈರಸ್‌ಗಳಿಗೆ ಪರಿಣಾಮಕಾರಿ ಲಸಿಕೆಯನ್ನು ತಕ್ಷಣ ಸಂಶೋಧಿಸದೇ ಇದ್ದರೆ ಭಾರತಕ್ಕೆ ಯಾವ ಭವಿಷ್ಯವೂ ಇಲ್ಲ.

> **ಎಲ್ಲೋ ಯಾರೋ ಮಾಡಿದ ಭಾಷಣಗಳನ್ನು ಈ ದೇಶದ ಉದ್ದಗಲಕ್ಕೆ ತಲುಪಿಸುವ ಯಶಸ್ವೀ ಕೆಲಸವನ್ನು ಸಾಮಾಜಿಕ ಮಾಧ್ಯಮಗಳು ಮಾಡಿಕೊಂಡು ಬಂದಿವೆ. 1,318 ಘಟನೆಗಳಲ್ಲಿ 1,278 ಘಟನೆಗಳು ಸಾಮಾಜಿಕ ಮಾಧ್ಯಮಗಳಲ್ಲಿ ನೇರವಾಗಿ ಪ್ರಸಾರಗೊಂಡಿವೆ ಎಂದು ವರದಿ ಹೇಳುತ್ತದೆ.**

• ಹಿಂದಿನ ಸಂಚಿಕೆಯಿಂದ

120 ನೆಯ ಅಧ್ಯಾಯ

ಇಗೆ ಸುಗ್ರೀವನು ರಾಮಲಕ್ಷ್ಮಣರನ್ನೂ ತನ್ನ ಪ್ರಧಾನರಾದ ಹನುಮಂತನೇ ಮೊದಲಾದ ನಾಲ್ವರು ಕಪಿನಾಯಕರನ್ನೂ ಕರೆದುಕೊಂಡು ಕಿಷ್ಕಂಧಾಪಟ್ಟಣಕ್ಕೆ ಹೋದನು. ಅಲ್ಲಿ ಹನುಮಂತನೇ ಮೊದಲಾದವರನ್ನು ಕೂಡಿಕೊಂಡು ಪ್ರಳಯಕಾಲದ ಮೇಘವು ಗುಡುಗುವಂತೆ ಬೊಬ್ಬಿಟ್ಟು ಕೂಗಿ ಮೇಘಮಂಡಲವು ಒಡೆಯುವಂತೆ ಅತಿಭಯಂಕರವಾದ ಧ್ವನಿಯಿಂದ ವಾಲಿಯನ್ನು ಯುದ್ಧಕ್ಕೆ ಕರೆದನು. ಸುಗ್ರೀವನು ಬಾಲಸೂರ್ಯನಂತೆ ತೇಜಸ್ಸುಳ್ಳವನಾಗಿಯೂ ಕೊಬ್ಬಿದ ಸಿಂಹರಾಜನಂತೆ ಸಂಚಾರವುಳ್ಳವನಾಗಿಯೂ ಮೆರೆಯುತ್ತ ಮಹಾದಕ್ಷನಾದ ಶ್ರೀರಾಮನನ್ನು ನೋಡಿ ಶ್ರೀರಾಮ, ಸುತ್ತಲೂ ಶತ್ರುವಾನರರು ಬರದಂತೆ ಹಾಕಿದ ಉರುಳುಬಲೆಗಳುಳ್ಳ ಸುವರ್ಣಮಯವಾದ ಕೊತ್ತಳಗಳುಳ್ಳ ಹಾಗೂ ರೆಕ್ಕೆಯಗಳೇ ಮೊದಲಾದ ದುರ್ಗಸಂವರಣಗಳಿಂದ ಸಜ್ಜು ಮಾಡಲ್ಪಟ್ಟ ಕಿಷ್ಕಿಂಧಾಪಟ್ಟಣಕ್ಕೆ ನಾವು ಬಂದೆವು. ಕಾಲವು ಯೋಗ್ಯ ಸಮಯದಲ್ಲಿ ಲತೆಯನ್ನು ಫಲಪುಷ್ಪಗಳಿಂದ ಸಮೃದ್ಧವನ್ನಾಗಿ ಮಾಡುವಂತೆ ನೀನು ಈಗ ನಿನ್ನ ಪ್ರತಿಜ್ಞೆಯನ್ನು ಸಫಲವಾಗಿ ಮಾಡು ಎಂದು ಹೇಳಿದನು.

ಶ್ರೀರಾಮನು ಸುಗ್ರೀವ, ಈ ದಿನ ನೀನು ನಾಗಪುಷ್ಪಿಲತೆಯಂದ ಹಿತನಾಗಿದ್ದೀಯೆ. ಲಕ್ಷ್ಮಣನು ಈ ಹಾರವನ್ನು ನಿನ್ನ ಕೊರಳಿಗೆ ಹಾಕಿರುವುದರಿಂದ ನಕ್ಷತ್ರಮಾಲೆಯಿಂದ ಪರಿವೃತನಾದ ಸೂರ್ಯನಂತೆ ಬೆಳಗುತ್ತಿದ್ದೀಯೆ. ಇಂದು ನಿನಗೆ ವಾಲಿಯಿಂದ ಬಂದ ಭಯವನ್ನು ಒಂದು ಬಾಣದಿಂದ ಪರಿಹರಿಸುತ್ತೇನೆ. ನೀನು ನಿನ್ನ ಶತ್ರುವಾದ ವಾಲಿಯನ್ನು ತೋರಿಸಿದ ಮಾತ್ರದಲ್ಲಿಯೇ ನನ್ನ ಬಾಣದಿಂದ ಆತನು ಗಾಯಪಡೆದು ಬಿದ್ದು ಧೂಳಲ್ಲಿ ಹೊರಳುವುದನ್ನು ಕಾಣುವೆ. ಇಂದು ನನ್ನ ದೃಷ್ಟಿಗೋಚರನಾದ ವಾಲಿಯು ಹತನಾಗದೆ ಜೀವದಿಂದಿದ್ದರೆ ನೀನು ನನ್ನ ಮೇಲೆ ಕೋಪಿಸು. ಈ ಮೊದಲು ನಾನು ಒಂದೇ ಬಾಣದಿಂದ ಏಳು ಮರಗಳನ್ನು ಒಂದೇ ಬಾರಿ ಹೊಡೆದು ಕೆಡಹಿದುದನ್ನು ಕಂಡ ನೀನು ರಾಮನು ವಾಲಿಯನ್ನು ಕೊಲ್ಲುವುದರಲ್ಲಿ ಸಂಶಯವಿಲ್ಲವೆಂದು ನಿಶ್ಚಯಿಸಿಕೊಂಡಿದ್ದೆ. ಎಂಥ ಆಪತ್ತು ಬಂದರೂ ನಾನು ಆಡಿದ ಮಾತನ್ನು ತಪ್ಪುವವನಲ್ಲ. ಸುಗ್ರೀವ ನೀನು ಈಗ ಯುದ್ಧಕ್ಕೆ ಕೂಗಿ ಕರೆದದ್ದು ವಾಲಿಯ ನಾಶಕ್ಕೆ ಸೂಚಕವಾಗಿದೆ. ಈಗ ಇನ್ನೊಮ್ಮೆ ಆರ್ಭಟಿಸಿ ಕೂಗಿ ಕರೆ. ಯುದ್ಧಪ್ರಿಯನಾದ ವಾಲಿಯುವೇಗದಿಂದ ಬರುವನು. ಆತನು ನಿನ್ನ ಪರಾಕ್ರಮವನ್ನು ಬಲ್ಲನು. ಪರಾಕ್ರಮವುಳ್ಳವರು ಸ್ತ್ರೀಯರ ಸಮೀಪದಲ್ಲಿರುವಾಗ ಶತ್ರುಗಳ ಧ್ವನಿಯನ್ನು ಕೇಳಿ ಸಹಿಸಲಾರರು ಎಂದು ಹೇಳಿದನು. ಆ ಬಳಿಕ ಸುಗ್ರೀವನು ಪುನಃ ಮೇಘಮಂಡಲವು ಒಡೆಯುವಂತೆ ಬೊಬ್ಬಿಟ್ಟು ಕೂಗಿದನು. ಅದನ್ನು ಕೇಳಿ ಕಾಮುಕನಾದ ಅರಸನ ದುರ್ನೀತಿಯಿಂದ ಆತನ ರಾಜ್ಯದಲ್ಲಿರುವ ಕುಲಾಂಗನೆಯರು ಭಯಪಟ್ಟು ಓಡುವಂತೆಯೂ ಯುದ್ಧರಂಗದಲ್ಲಿ ಮುರಿದ ರಾವುತರ ಕುದುರೆಗಳು ಪಲಾಯನ ಮಾಡುವಂತೆಯೂ ಆ ವನದಲ್ಲಿದ್ದ ಮೃಗಗಳು ಓಡಿಹೋದವು.

ಮುಂದುವರಿಯುವುದು...

ಇತ್ತೀಚಿನ ಷೇರು ಮಾರುಕಟ್ಟೆಯ ಏರು-ಇಳಿತ

ವಿಶ್ವಾಸ್.ಡಿ.ಗೌಡ

ಇತ್ತೀಚಿನ ದಿನಗಳಲ್ಲಿ ಭಾರತೀಯ ಷೇರು ಮಾರುಕಟ್ಟೆ ಹೂಡಿಕೆದಾರರ ಗಮನವನ್ನು ಸೆಳೆಯುವಂತೆ ತೀವ್ರ ಏರು-ಇಳಿತಗಳ ಮಿಶ್ರ ಚಿತ್ರವನ್ನು ನೀಡುತ್ತಿದೆ. ಕೆಲ ದಿನಗಳು ಸೂಚ್ಯಂಕಗಳು ಬಲವಾಗಿ ಏರಿದಂತೆ ಕಾಣಿಸಿದರೆ, ಮತ್ತೊಮ್ಮೆ ಅಚಾನಕ್ ಮಾರಾಟದ ಒತ್ತಡದಿಂದ ತ್ವರಿತವಾಗಿ ಕೆಳಕ್ಕೆ ಜಾರುವುದು ಸಹಜವಾಗಿದೆ. ಈ ಬದಲಾವಣೆಗಳ ಹಿಂದೆ ದೇಶೀಯ-ಜಾಗತಿಕ ಕಾರಣಗಳು ಹಾಗೂ ಕಂಪನಿಗಳ ಫಲಿತಾಂಶಗಳು, ವಿದೇಶಿ ಹೂಡಿಕೆದಾರರ (FII) ಖರೀದಿ ಮಾರಾಟ, ಹಾಗೂ ರೂಪಾಯಿ ಚಲನೆ ಹಾಗೂ ಬಡ್ಡಿದರ ನಿರೀಕ್ಷೆಗಳು ಮತ್ತು ಕಚ್ಚಾತೈಲದ ಬೆಲೆಗಳಂತಹ ಅಂಶಗಳು ಪ್ರಮುಖ ಪಾತ್ರ ವಹಿಸುತ್ತವೆ. ಹೀಗಾಗಿ ಮಾರುಕಟ್ಟೆ ಏಕೆ ಹೀಗೆ ಅಲುಗಾಡುತ್ತಿದೆ ಎಂಬ ಪ್ರಶ್ನೆ ಸಾಮಾನ್ಯ ಹೂಡಿಕೆದಾರನ ಮನಸ್ಸಿನಲ್ಲಿ ಮೂಡುವುದು ಸಹಜ.

ಮಾರುಕಟ್ಟೆ ಏರು-ಇಳಿತಕ್ಕೆ ಕಾರಣಗಳೇನು?
ಮಾರುಕಟ್ಟೆಯ ಏರು-ಇಳಿತವನ್ನು ಅರ್ಥಮಾಡಿಕೊಳ್ಳಲು ಮೊದಲಿಗೆ ಅದರ ಚಾಲಕರನ್ನು ತಿಳಿಯಬೇಕು.

(1) ತ್ರೈಮಾಸಿಕ ಫಲಿತಾಂಶಗಳು : ದೊಡ್ಡ ಕಂಪನಿಗಳ ಲಾಭ-ಆದಾಯ ನಿರೀಕ್ಷೆಗಿಂತ ಉತ್ತಮ ಅಥವಾ ಕೆಟ್ಟದಾಗಿದ್ದರೆ, ಒಂದೇ ದಿನದಲ್ಲಿ ನಿರ್ದಿಷ್ಟ ವಲಯದ ಷೇರುಗಳು ತೀವ್ರವಾಗಿ ಏರಿಳಿತಗೊಳ್ಳುತ್ತವೆ. ಉದಾಹರಣೆಗೆ ವಲಯದ ದೊಡ್ಡ ಕಂಪನಿಗಳ ಫಲಿತಾಂಶಗಳು ಉತ್ತಮವಾಗಿದ್ದರೆ ನಿಫ್ಟಿ ಮೇಲಕ್ಕೆ ಒತ್ತಡ ಪಡೆಯಬಹುದು.

(2) FII–DII ಹಣದ ಹರಿವು: ವಿದೇಶಿ ಸಂಸ್ಥೆಗಳು ಮಾರಾಟ ಹೆಚ್ಚಿಸಿದಾಗ ಮಾರುಕಟ್ಟೆಗೆ ಒತ್ತಡ; ದೇಶೀಯ ಸಂಸ್ಥೆಗಳು ಖರೀದಿಗೆ ಮುಂದಾದಾಗ ಸೂಚ್ಯಂಕಕ್ಕೆ ಬೆಂಬಲ.

(3) ಜಾಗತಿಕ ಮಾರುಕಟ್ಟೆ ಸೂಚನೆಗಳು: ಅಮೆರಿಕದ ಫೆಡ್ ಬಡ್ಡಿದರ ನಿರೀಕ್ಷೆಗಳು, ಜಾಗತಿಕ ರಾಜಕೀಯ ಉದ್ವಿಗ್ನತೆ, ಅಂತಾರಾಷ್ಟ್ರೀಯ ಸೂಚ್ಯಂಕಗಳ ಚಲನೆ-ಇವೆಲ್ಲಾ ಭಾರತದಲ್ಲೂ ಸೆಂಟಿಮೆಂಟ್ ಬದಲಾಯಿಸುತ್ತವೆ.

ರೂಪಾಯಿ-ಕಚ್ಚಾತೈಲ: ರೂಪಾಯಿ ದುರ್ಬಲವಾದಾಗ, ಆಮದು ವೆಚ್ಚ ಹೆಚ್ಚುತ್ತದೆ; ತೈಲ ಬೆಲೆ ಏರಿದರೆ ದರವೃದ್ಧಿ ನಿರೀಕ್ಷೆ. ಇಂತಹ ಅಂಶಗಳು ಮಾರುಕಟ್ಟೆಯ ಮೇಲೆ ತಕ್ಷಣದ ಪ್ರಭಾವ ಬೀರುತ್ತವೆ. ವಾಲಾಟಿಲಿಟಿ Volatility:India VIX ಹೆಚ್ಚಾಗಿರುವ ಸಂದರ್ಭದಲ್ಲಿ, ಒಂದೇ ದಿನದಲ್ಲಿ ಹೆಚ್ಚಿನ ಏರು-ಇಳಿತ ಸಂಭವಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಅತಿ ವೇಗದ ನಿರ್ಧಾರಗಳ ಬದಲು ಶಿಸ್ತು ಮುಖ್ಯವಾಗುತ್ತದೆ.

ನಿಫ್ಟಿ ಎಂದರೇನು? ಏಕೆ ಅದು ಮುಖ್ಯ
Nifty 50 ಭಾರತದ ಪ್ರಮುಖ ಸೂಚ್ಯಂಕಗಳಲ್ಲಿ ಒಂದು. ವಿವಿಧ ಕ್ಷೇತ್ರಗಳ (Banking, IT, FMCG, Auto, Energy ಇತ್ಯಾದಿ) ದೊಡ್ಡ 50 ಕಂಪನಿಗಳ ಪ್ರದರ್ಶನವನ್ನು ಒಟ್ಟಿಗೆ ತೋರಿಸುವ ಸೂಚ್ಯಂಕ ಇದಾಗಿದೆ. ನಿಫ್ಟಿ ಏರಿದರೆ ಸಾಮಾನ್ಯವಾಗಿ ಮಾರುಕಟ್ಟೆಯಲ್ಲಿ ಬಲವಾದ ಮನೋಭಾವ ಇದೆ ಎಂದು ಅರ್ಥ; ಇಳಿದರೆ ಅಶಾಂತಿ ಅಥವಾ ಮಾರಾಟದ ಒತ್ತಡ ಇದೆ ಎಂದು ಸೂಚಿಸುತ್ತದೆ. ಹೀಗಾಗಿ, ಹೂಡಿಕೆದಾರರು ತಮ್ಮ ಸ್ಟಾಕ್ ಆಯ್ಕೆ ಮಾಡುವಾಗ ನಿಫ್ಟಿಯ ದಿಕ್ಕು, ಅದರ ಬೆಂಬಲ ಪ್ರತಿರೋಧ ಮಟ್ಟಗಳು, ಮತ್ತು ವಲಯಗಳ ಚಲನೆ ಗಮನಿಸುವುದು ಉಪಯುಕ್ತ.

ಇಂಟ್ರಾಡೇ ಟ್ರೇಡಿಂಗ್: ಅವಕಾಶ ಮತ್ತು ಅಪಾಯ ಇಂಟ್ರಾಡೇ ಎಂದರೆ ಒಂದೇ ದಿನದೊಳಗೆ ಖರೀದಿ ಮಾಡಿ, ಅದೇ ದಿನ ಮಾರಾಟ ಮಾಡಿ ಲಾಭ ಪಡೆಯಲು ಪ್ರಯತ್ನಿಸುವ ವ್ಯವಹಾರ. ಇದರಲ್ಲಿ ಲಾಭವಿದೆ ಎಂದು ಕಾಣಿಸಿದರೂ, ಅಪಾಯವೂ ಹೆಚ್ಚಿದೆ.

ಇಂಟ್ರಾಡೇಯ ಲಾಭಗಳು: ತ್ವರಿತ ಲಾಭದ ಅವಕಾಶ ಕಡಿಮೆ ಅವಧಿಯಲ್ಲಿ ಕ್ಯಾಪಿಟಲ್ ರೋಟೇಶನ್ ಕೆಲ ಬ್ರೋಕರ್‌ಗಳು ಇಂಟ್ರಾಡೇಗೆ ಮಾರ್ಜಿನ್ ಸೌಲಭ್ಯ ನೀಡುತ್ತಾರೆ

ಇಂಟ್ರಾಡೇಯ ಅಪಾಯಗಳು: ವಾಲಾಟಿಲಿಟಿ ಹೆಚ್ಚಾದ ದಿನಗಳಲ್ಲಿ ನಷ್ಟ ವೇಗವಾಗಿ ಹೆಚ್ಚಬಹುದು ಸ್ಟಾಪ್ ಲಾಸ್ ಇಲ್ಲದೆ ಟ್ರೇಡ್ ಮಾಡಿದರೆ ದೊಡ್ಡ ನಷ್ಟ ಸಾಧ್ಯ. ಚಾರ್ಜುಗಳು, ಬ್ರೋಕರೆಜ್ ಹಾಗೂ ಸ್ಲಿಪೇಜ ಲಾಭವನ್ನು ಕಡಿಮೆ ಮಾಡಬಹುದು ನಿರಂತರ ಗಮನ ತ್ವರಿತ ನಿರ್ಧಾರ ಅಗತ್ಯ. ಇಂಟ್ರಾಡೇ ಮಾಡುವವರು ಒಂದು ಟ್ರೇಡ್‌ಗೆ ಎಷ್ಟು ನಷ್ಟ ಸಹಿಸಬಹುದು ಎಂಬ ನಿಯಮವನ್ನು ಮುಂಚಿತವಾಗಿ ನಿಗದಿಪಡಿಸಬೇಕು.

ಡೆಲಿವರಿ ಟ್ರೇಡಿಂಗ್: ದೀರ್ಘಾವಧಿಯ ದೃಷ್ಟಿಕೋನ ಡೆಲಿವರಿ ಎಂದರೆ ಷೇರುಗಳನ್ನು ಖರೀದಿ ಮಾಡಿ ಡಿಮ್ಯಾಟ್ ಖಾತೆಯಲ್ಲಿ ಇಟ್ಟು ಸಮಯದೊಂದಿಗೆ ಬೆಲೆ ಏರಿಕೆಯಿಂದ ಲಾಭ ಪಡೆಯುವ ವಿಧಾನ. ಇದು ಹೂಡಿಕೆದಾರರಿಗೆ ಹೆಚ್ಚು ಸುರಕ್ಷಿತವಾಗಿ ಕಾಣಿಸುತ್ತದೆ, ಏಕೆಂದರೆ ಇಲ್ಲಿ ದಿನದೊಳಗಿನ ತೀವ್ರ ಅಲುಗಾಟದ ಒತ್ತಡ ಕಡಿಮೆ.

ಡೆಲಿವರಿಯ ಲಾಭಗಳು: ಗುಣಮಟ್ಟದ ಕಂಪನಿಗಳಲ್ಲಿ ದೀರ್ಘಾವಧಿ ಸಂಪತ್ತು ನಿರ್ಮಾಣ ಕಡಿಮೆ ಮ

ಬಸ್ ಸಂಚಾರಕ್ಕೆ ಉದ್ಘಾಟನೆ

ಉದಯವಾಹಿನಿ ಚಿತ್ರ

• ಉದಯವಾಹಿನಿ ಆಳಂದ

ಪಟ್ಟಣದಲ್ಲಿ ತಿಂಗಳಿಂದ ನಡೆಯುತ್ತಿರುವ ಮುಖ್ಯ ರಸ್ತೆ ಅಗಲೀಕರಣ ಕಾಮಗಾರಿಯಿಂದ ನೇರವಾಗಿ ಬಾಧಿತರಾದ ಸಂತ್ರಸ್ತರ ಮಧ್ಯೆ ಕಾಣಿಸಿಕೊಳ್ಳದೇ ದೂರವಿದ್ದ ಶಾಸಕ, ನೀತಿ ಆಯೋಗದ ರಾಜ್ಯ ಉಪಾಧ್ಯಕ್ಷ ಬಿ.ಆರ್. ಪಾಟೀಲ ಅವರು ಏಕಾಏಕಿ ಪಟ್ಟಣದ ಬಸ್ ನಿಲ್ದಾಣಕ್ಕೆ ಭೇಟಿ ನೀಡಿ ಹೊಸ ಬಸ್ ಸಂಚಾರಕ್ಕೆ ಚಾಲನೆ ನೀಡಿದರು. ರಸ್ತೆ ಅಗಲೀಕರಣ ಆರಂಭವಾಗಿ ತಿಂಗಳು ಸಮೀಪಿಸುತ್ತಿದ್ದರೂ, ಪರಿಹಾರ ಗೊಂದಲ, ಅಂಗಡಿ ತೆರವು, ಬಡ ವ್ಯಾಪಾರಿಗಳ ಸಂಕಷ್ಟಗಳ ನಡುವೆಯೇ ಶಾಸಕರ ಗೈರುಹಾಜರಾತಿ ಕುರಿತು ಸಾರ್ವಜನಿಕ ವಲಯದಲ್ಲಿ ಅಸಮಾಧಾನ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲೇ ಅವರ ಆಳಂದ ಭೇಟಿ ವಿಶೇಷ ಗಮನ ಸೆಳೆದಿದೆ. ಮುಖ್ಯ ರಸ್ತೆ ಅಗಲೀಕರಣದಿಂದ ಆಸ್ತಿ ಕಳೆದುಕೊಂಡ ಸಂತ್ರಸ್ತರಿಗೆ ಪರಿಹಾರ ನೀಡುವ ಬಗ್ಗೆ ಪತ್ರಕರ್ತರು ಪ್ರಶ್ನಿಸಿದಾಗ, ಶಾಸಕರು ಸ್ಪಷ್ಟ ಭರವಸೆಯ ಬದಲು, ಜನರ ಬೇಡಿಕೆ ಸರಿಯಾಗಿದೆ. ಸರ್ಕಾರದಿಂದ ಪರಿಹಾರ ಬಂದರೆ ಸಂತ್ರಸ್ತರಿಗೆ ಕೊಡಲು ಪ್ರಯತ್ನಿಸಲಾಗುವುದು ಎನ್ನುವ ಪ್ರತಿಕ್ರಿಯೆ ನೀಡಿದರು.

ಈ ಮೊದಲು ಪಟ್ಟಣದ ಬಸ್ ನಿಲ್ದಾಣದಲ್ಲಿ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸ್ಥಳೀಯ ಘಟಕಕ್ಕೆ ಬಿಡುಗಡೆಯಾದ ಎರಡು ಹೊಸ ಬಸ್‌ಗಳಿಗೆ ಶಾಸಕರು ಪೂಜೆ ಸಲ್ಲಿಸಿ, ಸಂಚಾರಕ್ಕೆ ಅಧಿಕೃತವಾಗಿ ಚಾಲನೆ ನೀಡಿದರು. ಜಿಲ್ಲಾ ಕೇಂದ್ರ ಕಲಬುರಗಿಗೆ ಸಂಚರಿಸುವ ಸಾರ್ವಜನಿಕರು, ವ್ಯಾಪಾರಿಗಳ ಬೇಡಿಕೆಯನ್ನು ಮನಗಂಡು ಹೊಸ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಹೇಳಿದರು.

ಮಂಡಳಿ ರಚನೆಯಾದರೂ ಬಿಡುಗಡೆಯಾಗಿಲ್ಲ ಬಿಡಿಗಾಸು, 500 ಕೋಟಿ ಅನುದಾನದ ನಿರೀಕ್ಷೆಯಲ್ಲಿ ಕೆಡಿಬಿ

ಕರಾವಳಿ ಅಭಿವೃದ್ಧಿ ಮಂಡಳಿಗೆ ಬೇಕಿದೆ 'ಹಣ ಬಲ'

• ಉದಯವಾಹಿನಿ ಮಂಗಳೂರು

ಕರಾವಳಿಯ ಅಭಿವೃದ್ಧಿಗೆ ಇಂಬು ತುಂಬುವ ಉದ್ದೇಶದಿಂದ ಸ್ಥಾಪನೆಯಾದ ಕರಾವಳಿ ಅಭಿವೃದ್ಧಿಮಂಡಳಿ ಸದ್ಯ ಖಾಲಿ ಬಿಂದಿಗೆ. 2023ರ ಕರಾವಳಿ ಅಭಿವೃದ್ಧಿ ಮಂಡಳಿ ಕಾಯ್ದೆಯ ಬಲದೊಂದಿಗೆ ಈ ಮಂಡಳಿ ರೂಪುಗೊಂಡಿದ್ದರೂ, ಅದಕ್ಕೆ ತಕ್ಕಂತೆ ಅನುದಾನವನ್ನು ಸರ್ಕಾರ ಒದಗಿಸದಿರುವುದರಿಂದ ಇದು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಕರಾವಳಿಯ ಮೂರು ಜಿಲ್ಲೆಗಳ ವ್ಯಾಪ್ತಿ ಹೊಂದಿರುವ ಈ ಮಂಡಳಿ 2026-27ನೇ ಸಾಲಿನ ಬಜೆಟ್ ಮೇಲೆ ದೊಡ್ಡ ನಿರೀಕ್ಷೆಯನ್ನೇ ಇಟ್ಟುಕೊಂಡಿದೆ.

ಬಜೆಟ್ ಮೇಲೆ ದೊಡ್ಡ ನಿರೀಕ್ಷೆ

ಕರಾವಳಿ ಅಭಿವೃದ್ಧಿಮಂಡಳಿಯನ್ನು ಸ್ಥಾಪಿಸಿ, ಅದಕ್ಕೆ ಐದು ವರ್ಷಗಳಲ್ಲಿ ರೂ.2500 ಕೋಟಿ ಅನುದಾನ ಒದಗಿಸುವುದಾಗಿ ಕಾಂಗ್ರೇಸ್ ಪಕ್ಷವು ಕರಾವಳಿಗೆ ಪ್ರತ್ಯೇಕವಾಗಿ ರೂಪಿಸಿದ್ದ ಪ್ರಣಾಳಿಕೆಯಲ್ಲಿ ಘೋಷಿಸಿತ್ತು. ರಾಜ್ಯದಲ್ಲಿ ಕಾಂಗ್ರೇಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಕರಾವಳಿ ಅಭಿವೃದ್ಧಿ ಮಂಡಳಿಯ ರಚನೆ ಆಗಿದೆ. ಆದರೆ, ಭರವಸೆ ನೀಡಿದ ಪ್ರಕಾರ ಮಂಡಳಿಗೆ ಬಿಡಿಗಾಸೂ ಬಿಡುಗಡೆ ಆಗಿಲ್ಲ. ಈ ಹಿಂದೆ ಜಾರಿಯಲ್ಲಿದ್ದ ಕರಾವಳಿ ಅಭಿವೃದ್ಧಿ ಪ್ರಾಧಿಕಾರ'ಕ್ಕೆ ಬಿಡುಗಡೆಯಾದ ಅನುದಾನದಲ್ಲೇ ಮಂಡಳಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗಲಾಗುತ್ತಿದೆ.

ರಾಜ್ಯ ಸರ್ಕಾರವು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ)ಗೆ ವಾರ್ಷಿಕ ರೂ. 5 ಸಾವಿರ ಕೋಟಿ ಅನುದಾನವನ್ನು ಪ್ರತ್ಯೇಕವಾಗಿ ಒದಗಿಸುವಂತೆ ಕರಾವಳಿ ಅಭಿವೃದ್ಧಿ ಮಂಡಳಿಗೂ ಬಜೆಟ್‌ನಲ್ಲೇ ಅನುದಾನ ಕಾಯ್ದಿರಿಸಬೇಕು. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿ ಚಟುವಟಿಕೆ ಹಮ್ಮಿಕೊಳ್ಳಲು ವಾರ್ಷಿಕ ಕನಿಷ್ಠ ರೂ. 500 ಕೋಟಿ ಅನುದಾನವಾದರೂ ಸಿಗಬೇಕು ಎಂಬ ನಿರೀಕ್ಷೆ ಕೆಡಿಬಿಯದು.

ಉದಯವಾಹಿನಿ ಚಿತ್ರ

ಕರಾವಳಿ ಅಭಿವೃದ್ಧಿಗಾಗಿ ಮಂಡಳಿಯು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುತ್ತಿದ್ದೇವೆ. 2026-27ನೇ ಸಾಲಿನ ಬಜೆಟ್‌ನಲ್ಲಿ ಮಂಡಳಿಗೆ ಅಗತ್ಯ ಅನುದಾನ ಒದಗಿಸಬೇಕೆಂದು ಕೋರಿದ್ದೇವೆ. -ಎಂ.ಎ.ಗಫೂರ್, ಅಧ್ಯಕ್ಷ, ಕರಾವಳಿ ಅಭಿವೃದ್ಧಿ ಮಂಡಳಿ

ಕರಾವಳಿಯಲ್ಲಿ ಸುಸ್ಥಿರ ಪರಿಸರ ಪ್ರವಾಸೋದ್ಯಮ, ಮೀನುಗಾರಿಗೆ ಹಾಗೂ ಅದಕ್ಕೆ ಪೂರಕವಾಗಿ ರಸ್ತೆ ಸಂಪರ್ಕ ಜಾಲವನ್ನು ಅಭಿವೃದ್ಧಿಪಡಿಸುವುದು, ಜಲಸಂಪನ್ಮೂಲ ಸಂರಕ್ಷಣೆ ಮೊದಲಾದ ಪ್ರಾಥಮಿಕ ಗುರಿಗಳನ್ನು ಮಂಡಳಿಯು ಹೊಂದಿದೆ. 340 ಕಿ.ಮೀ ಉದ್ದದ ಕಡಲ ಕಿನಾರೆಯನ್ನು ಹೊಂದಿದ್ದರೂ ನಮ್ಮ ರಾಜ್ಯವು ಅದನ್ನು ಪ್ರವಾಸೋದ್ಯಮಕ್ಕಾಗಿ ದುಡಿಸಿಕೊಂಡಿಲ್ಲ. ಇಲ್ಲಿನ ಕರಾವಳಿಯುದ್ದಕ್ಕೂ ಇರುವ ಅಳಿವೆಗಳು, ಕಾಂಡ್ಲಾ ಪ್ರದೇಶಗಳು, ಹಿನ್ನೀರಿನ ಪ್ರದೇಶಗಳು, ಕುದ್ರು (ದ್ವೀಪಗಳನ್ನು ಪ್ರವಾಸಿ ಚಟುವಟಿಕೆಗಾಗಿ ಬಳಸಿಕೊಳ್ಳಲು ಹೇರಳ ಅವಕಾಶಗಳಿವೆ. ಇದಕ್ಕಾಗಿ ಅನೇಕ ಮೂಲಸೌಕರ್ಯಗಳನ್ನು ರೂಪಿಸಬೇಕಿದೆ. ಇದಕ್ಕಾಗಿಯೇ ಮಂಡಳಿಯು ಮಾಸ್ಟರ್ ಪ್ಲಾನ್ ಅನ್ನು ಸಿದಪಡಿಸುತ್ತಿದೆ ಎನ್ನುತ್ತಾರೆ ಮಂಡಳಿಯ ಅಧ್ಯಕ್ಷ ಎಂ.ಎ.ಗಫೂರ್.

ಹಲವು ನದಿ ಹೊಳೆಗಳಲ್ಲಿ ಸಮುದ್ರದ ಉಪ್ಪು ನೀರು ತಡೆ ಅಣೆಕಟ್ಟೆಗಳು ಇನ್ನೂ ನಿರ್ಮಾಣವಾಗಿಲ್ಲ. ಹಲವೆಡೆ ಜೆಟ್ಟಿಗಳನ್ನು ನಿರ್ಮಿಸುವ ಅಗತ್ಯವೂ ಇದೆ. ಕಾಂಡ್ಲಾವನಗಳನ್ನು ಬೆಳೆಸಬೇಕಿದೆ. ಅಭಿವೃದ್ಧಿಪಡಿಸಬಹುದಾದ ಪ್ರವಾಸಿ ತಾಣಗಳನ್ನು ಸಂಪರ್ಕಿಸಲು ರಸ್ತೆ ಜಾಲದ ಅಗತ್ಯವೂ ಇದೆ.

ಕಡಲ ಕಿನಾರೆಯುದ್ದರೂ ಕನಿಷ್ಠ 18 ಅಡಿ ಅಗದ ರಸ್ತೆಯನ್ನು ನಿರ್ಮಿಸಬೇಕಿದೆ. ಇಂತಹ ಹತ್ತು ಹಲವಾರು ಚಿಂತನೆಗಳು ಮಂಡಳಿಯ ಕಾರ್ಯ ಯೋಜನೆಯಲ್ಲಿವೆ ಎಂದು ಅವರು ವಿವರಿಸಿದರು. ಕರಾವಳಿ ಜಿಲ್ಲೆಗಳ ಮಲೆನಾಡು ಪ್ರದೇಶಗಳ ಕೆಲ ಕುಗ್ರಾಮಗಳಲ್ಲಿ ಜನರು ಕಾಲು ಸಂಕದ ವ್ಯವಸ್ಥೆಯೂ ಇಲ್ಲದೇ ಮಳೆಗಾಲದಲ್ಲಿ ಸಮಸ್ಯೆ ಎದುರಿಸುತ್ತಿದ್ದಾರೆ. ಇಂತಹ ಕಡೆ ಸುಸಜ್ಜಿತ ಕಾಲು ಸಂಕಗಳನ್ನು ನಿರ್ಮಿಸುವ ಚಿಂತನೆಯೂ ಮಂಡಳಿ ಮುಂದಿದೆ.

ಮಂಡಳಿಯೇ ನೋಡಲ್ ಏಜೆನ್ಸಿಯಾಗಲಿ

'ಕರಾವಳಿ ತೀರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಇಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರಗಳ ಕೆಲ ನಿಯಮಗಳು ಹಾಗೂ ಕರಾವಳಿ ನಿಯಂತ್ರಣ ವಲಯದ ನಿಯಮಾವಳಿಗಳು ತೊಡಕಾಗಿವೆ. ಪ್ರತ್ಯೇಕ ಪ್ರಾಧಿಕಾರಗಳಿಂದ ಅನುಮತಿ ಪಡೆಯುವುದಕ್ಕೆ ಹರಸಾಹಸ ಪಡಬೇಕಾದ ಸ್ಥಿತಿ ಇದೆ. ಅನುಮತಿ ನೀಡುವ ಪ್ರಕ್ರಿಯೆ ನಿಭಾಯಿಸಲು ಏಕಗವಾಕ್ಷಿ ವ್ಯವಸ್ಥೆ ರೂಪಿಸಬೇಕು. ಪ್ರವಾಸೋದ್ಯಮ ಉದ್ದೇಶಕ್ಕೆ ಪಡೆಯಬೇಕಾದ ಎಲ್ಲಾ ಯೋಜನೆಗಳಿಗೆ ಕರಾವಳಿ ಅಭಿವೃದ್ಧಿ ಮಂಡಳಿಯನ್ನು ನೋಡಲ್ ಏಜೆನ್ಸಿಯನ್ನಾಗಿ ಮಾಡಬೇಕು ಎಂಬುದು ನಮ್ಮ ಬೇಡಿಕೆ. ಅದಕ್ಕೆ ಸರ್ಕಾರವೂ ಒಲವು ತೋರಿದೆ' ಎಂದು ಎಂ.ಎ.ಗಫೂರ್ ತಿಳಿಸಿದರು.

ಸ್ಥಳ ಪರಿಶೀಲನೆ ನಡೆಸಿದ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್

• ಉದಯವಾಹಿನಿ ಹೊಸಪೇಟೆ

ವಿಶ್ವವಿಖ್ಯಾತ ಹಂಪಿ ಉತ್ಸವವನ್ನು ಈ ಬಾರಿ ಫೆಬ್ರವರಿ 13, 14 ಮತ್ತು 15 ರಂದು ಅತ್ಯಂತ ವೈಭವದಿಂದ ಆಚರಿಸಲು ನಿರ್ಧರಿಸಲಾಗಿದ್ದು ಮುಖ್ಯ ವೇದಿಕೆ ಸೇರಿದಂತೆ ಐದು ವೇದಿಕೆಗಳಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಇಲಾಖೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ತಿಳಿಸಿದರು.

ಅವರು ಹಂಪಿಗೆ ಭೇಟಿ ನೀಡಿ ಹಂಪಿ ಉತ್ಸವ ನಡೆಯುವ ಮುಖ್ಯ ವೇದಿಕೆ ಸ್ಥಳ ಪರಿಶೀಲನೆ ನಡೆಸಿ ವಾಹನಗಳ ನಿಲುಗಡೆ ಸ್ಥಳ ಪರಿಶೀಲನೆ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ಉತ್ಸವದ ದಿನಾಂಕಗಳನ್ನು ಅಧಿಕಾರಿಗಳೊಂದಿಗೆ ಚರ್ಚಿಸಿದ ನಂತರ ದಿನಾಂಕಗಳನ್ನು ಅಂತಿಮಗೊಳಿಸಲಾಗಿದೆ. ಫೆಬ್ರವರಿ 13 ರಂದು ಮುಖ್ಯಮಂತ್ರಿಗಳು ಹಂಪಿ ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಈ ಬಾರಿ ಕೇವಲ ಮುಖ್ಯ ವೇದಿಕೆಗೆ ಸೀಮಿತವಾಗದೆ, ಒಟ್ಟು ಐದು ವಿವಿಧ ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು

ಉದಯವಾಹಿನಿ ಚಿತ್ರ

ಜರುಗಲಿವೆ. ಕಾರ್ಯಕ್ರಮಗಳ ಬಗ್ಗೆ ಜನರಿಗೆ ಮಾಹಿತಿ ನೀಡಲು ವ್ಯಾಪಕ ಪ್ರಚಾರ ಕೈಗೊಳ್ಳಲು ಸೂಚಿಸಲಾಗಿದೆ.

ಹೊಸ ವಿನ್ಯಾಸ: ಕಳೆದ ಎರಡು ವರ್ಷಗಳಿಗಿಂತ ಈ ಬಾರಿ ವೇದಿಕೆಯ ವಿನ್ಯಾಸ ಮತ್ತು ಸ್ಮಾರಕಗಳ ಮಾದರಿಗಳು ವಿಭಿನ್ನವಾಗಿ ಮತ್ತು ಆಕರ್ಷಕವಾಗಿರಲಿವೆ.

ಪಾರ್ಕಿಂಗ್ ವ್ಯವಸ್ಥೆ: ಕಳೆದ ವರ್ಷದಂತೆ ಈ ಬಾರಿ ರೈತರೊಂದಿಗೆ ಚರ್ಚಿಸಿ ಹೆಚ್ಚಿನ ಪಾರ್ಕಿಂಗ್ ಸ್ಥಳಾವಕಾಶಕ್ಕೆ ಒಪ್ಪಿಗೆ ಪಡೆಯಲಾಗುತ್ತದೆ. ರೈತರ ಬೆಳೆ ನಷ್ಟವಾದಲ್ಲಿ ಅದಕ್ಕೆ ಪರಿಹಾರವನ್ನು ನೀಡಿ ಉತ್ಸವಕ್ಕೆ ಪಾರ್ಕಿಂಗ್‌ಗೆ ಬಳಕೆ ಮಾಡಿಕೊಂಡು ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲಾಗುತ್ತದೆ ಎಂದರು.

ರಸ್ತೆ ದುರಸ್ತಿ: ಹಗರಿಬೊಮ್ಮನಹಳ್ಳಿಯಿಂದ ಶಿವಮೊಗ್ಗ ರಸ್ತೆ ಸೇರಿದಂತೆ ಉತ್ಸವಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳು ಹದಗೆಟ್ಟಿರುವ ಬಗ್ಗೆ ದೂರುಗಳು ಬಂದಿದ್ದು, ಅವುಗಳನ್ನು ಕೂಡಲೇ ದುರಸ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಈ ನಾಡಹಬ್ಬವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡುತ್ತೇನೆ ಎಂದರು.

ಕಲಾವಿದರ ಆಯ್ಕೆ

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕಲಾವಿದರನ್ನು ಆಹ್ವಾನಿಸುವ ಕುರಿತು ಪ್ರಸ್ತಾವನೆಗಳನ್ನು ಸಲ್ಲಿಲಾಗಿದ್ದು, ಶೀಘ್ರದಲ್ಲೇ ಅಂತಿಮ ಪಟ್ಟಿ ಬಿಡುಗಡೆಯಾಗಲಿದೆ. ಅಶ್ವಿನಿ ಪುನೀತ್ ರಾಜ್‌ಕುಮಾರ್, ಧ್ರುವಸರ್ಜಾ ಸೇರಿದಂತೆ ಹಲವು ಗಣ್ಯರನ್ನು ಆಹ್ವಾನಿಸುವ ಕುರಿತು ಚರ್ಚಿಸಲಾಗಿದೆ. ಕಳೆದ ಬಾರಿಯಂತೆ ಈ ಬಾರಿಯೂ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುವುದು.

ವಿದ್ಯಾರ್ಥಿಗಳು ಪ್ರಾಮಾಣಿಕತೆ, ವಿಧೇಯತೆ ರೂಢಿಸಿಕೊಳ್ಳಿ

• ಉದಯವಾಹಿನಿ ಮಂಗಳೂರು

ಇಲ್ಲಿನ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಿರುವ ಎಂಜಿನಿಯರಿಂಗ್ ಹಾಗೂ ಕಾನೂನು ಪದವಿ ಕೋರ್ಸ್ ಗಳನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಶುಕ್ರವಾರ ಉದ್ಘಾಟಿಸಿದರು. ಶೈಕ್ಷಣಿಕ ಸಾಧನೆಯ ಜೊತೆಗೆ ಪರಿಶ್ರಮ, ಪ್ರಾಮಾಣಿಕತೆ, ವಿಧೇಯತೆ ಮೈಗೂಡಿಸಿಕೊಳ್ಳಬೇಕು. ಜ್ಞಾನದ ಹಂಬಲ ವಿದ್ಯಾರ್ಥಿಗಳಲ್ಲಿ ಇರಬೇಕು. ವಿದ್ಯಾರ್ಥಿ ದೆಸೆಯಲ್ಲಿ ಪಡೆದ ಜ್ಞಾನ ದೇಶದ ಶ್ರೇಯೋಭಿವೃದ್ಧಿಗೆ ವಿನಿಯೋಗವಾಗಬೇಕು ಎಂದರು.

ಹಿಂದೆ ನಲಂದಾ, ತಕ್ಷಶಿಲಾ ವಿಶ್ವವಿದ್ಯಾಲಯಗಳು ಜ್ಞಾನದ ದಾಹ ತಣಿಸುವ ಜೊತೆಗೆ ಭಾರತೀಯ ಸಂಸ್ಕೃತಿಯನ್ನು ಧಾರೆಯೆರೆಯುತ್ತಿದ್ದವು. ವಿದೇಶಿ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ಇಲ್ಲಿಗೆ ಬರುತ್ತಿದ್ದರು. ಈ ಪರಂಪರೆಯ ಪುನರುತ್ಥಾನ ಆಗಬೇಕು. ಶಿಕ್ಷಣವು ಮಾನಸಿಕ ವಿಕಾಸ, ವ್ಯಕ್ತಿತ್ವ ನಿರ್ಮಾಣಕ್ಕೆ ಪೂರಕವಾದ ತಳಪಾಯ ಒದಗಿಸಬೇಕು ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದರು. ಸೇಂಟ್ ಅಲೋಶಿಯಸ್ ಶಿಕ್ಷಣ ಸಂಸ್ಥೆಯು ಶೈಕ್ಷಣಿಕ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದು, ಗುಣಮಟ್ಟದ ಶಿಕ್ಷಣ ನೀಡುತ್ತಿದೆ ಎಂದು ಶ್ಲಾಘಿಸಿದರು. ಕಾನೂನು ಶಿಕ್ಷಣವು ಸಾಮಾಜಿಕ ನ್ಯಾಯ, ಸಂವಿಧಾನ

ಉದಯವಾಹಿನಿ ಚಿತ್ರ

ರಕ್ಷಣೆ, ಮಾನವ ಹಕ್ಕು ರಕ್ಷಣೆಯ ಬಗ್ಗೆ ಅರಿವು ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಕಾನೂನು ವಿದ್ಯಾರ್ಥಿಗಳು ಈ ಜ್ಞಾನವನ್ನು ಪಡೆದು ಸಂವಿಧಾನ ರಕ್ಷಕರಾಗಬೇಕು. ಪ್ರಧಾನಿಯವರ ಡಿಜಿಟಲ್ ಇಂಡಿಯಾ, ಆತ್ಮ ನಿರ್ಭರ ಭಾರತ, ಸ್ಟಾರ್ಟ್ ಅಪ್ ಗಳ ಸ್ಥಾಪನೆಗೆ ಎಂಜಿನಿಯರಿಂಗ್ ಪದವೀಧರರು ಕೊಡುಗೆ ನೀಡಬೇಕು ಎಂದು ಹೇಳಿದರು.

ಸಂಸದ ಕ್ಯಾ. ಬ್ರಿಜೇಶ್ ಚೌಟ ಮಾತನಾಡಿ, ಶೈಕ್ಷಣಿಕ ಕ್ಷೇತ್ರದಲ್ಲಿ ಅಲೋಶಿಯಸ್ ಶಿಕ್ಷಣ ಸಂಸ್ಥೆಯ ಕೊಡುಗೆ ದೊಡ್ಡದು. ಮಂಗಳೂರು 2.0 ಬಗ್ಗೆ ಯೋಚಿಸಬೇಕಾಗಿದ್ದು, ಸ್ಥಳೀಯ ಅಭಿವೃದ್ಧಿ ಜೊತೆಗೆ ಸ್ಥಳೀಯ ವಾಗಿ ಉದ್ಯೋಗ ಸೃಷ್ಟಿಸಿ, ಈ ನೆಲವನ್ನು ಇನ್ನಷ್ಟು ಸಮೃದ್ಧಗೊಳಿಸಬೇಕಾಗಿದೆ ಎಂದರು.

ಕಾಮಗಾರಿ ಗುಣಮಟ್ಟದಿಂದ ಕೂಡಿರಲಿ: ಶಾಸಕ

• ಉದಯವಾಹಿನಿ ಸಂತೇಮರಹಳ್ಳಿ

ಸಮೀಪದ ಕುದೇರು ಗ್ರಾಮದ ಪರಿಶಿಷ್ಟ ಸಮುದಾಯ ಬೀದಿಯಲ್ಲಿ ಎಸ್‌ಸಿಎಸ್‌ಪಿ ಯೋಜನೆಯಡಿ ಕಾಂಕ್ರೀಟ್ ರಸ್ತೆ ಹಾಗೂ ಬಾಕ್ಸ್ ಚರಂಡಿ ಕಾಮಗಾರಿಗೆ ಶಾಸಕ ಎ.ಆರ್. ಕೃಷ್ಣಮೂರ್ತಿ ಈಚೆಗೆ ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಅವರು ಮಾತನಾಡಿ, ಗ್ರಾಮದ ಪರಿಶಿಷ್ಟ ಸಮುದಾಯ ಬೀದಿಯಲ್ಲಿ 10 ವರ್ಷಗಳ ಹಿಂದೆ ಕಾಂಕ್ರೀಟ್ ರಸ್ತೆ ಕಾಮಗಾರಿಯನ್ನು ಗುತ್ತಿಗೆದಾರ ಕಳಪೆ ಮಾಡಿದ್ದು, ಜನರು ದೂಳಿನಿಂದ ತೊಂದರೆ ಅನುಭವಿಸುವಂತಾಗಿತ್ತು. ಈ ಹಿನ್ನೆಲೆಯಲ್ಲಿ ಸಮುದಾಯದ ಮಂಟೇಸ್ವಾಮಿ ದೇವಸ್ಥಾನದ ಆವರಣದಿಂದ ಮುಖ್ಯ ರಸ್ತೆ ವರೆಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ರೂ.30 ಲಕ್ಷ ವೆಚ್ಚದಲ್ಲಿ ಕಾಮಗಾರಿ ನಡೆಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಕಾಮಗಾರಿಯನ್ನು ಕೆಆರ್‌ಐಡಿಎಲ್ ಸಂಸ್ಥೆಗೆ ವಹಿಸಲಾಗಿದೆ. ಕಾಮಗಾರಿ ನಡೆಯುವ ಸಂದರ್ಭದಲ್ಲಿ ಸಮುದಾಯ ಮುಖಂಡರು ಯಾವುದೇ ಸಮಸ್ಯೆಗಳು ಉಂಟಾಗದ ರೀತಿಯಲ್ಲಿ ಗುಣಮಟ್ಟದ ಕಾಮಗಾರಿ ನಡೆಯುವಂತೆ ನೋಡಿಕೊಳ್ಳಬೇಕು ಎಂದರು.

ಉದಯವಾಹಿನಿ ಚಿತ್ರ

ಗ್ರಾಮದಲ್ಲಿ ರೂ. 25 ಲಕ್ಷ ವೆಚ್ಚದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಮಾಡುವ ನಿಟ್ಟಿನಲ್ಲಿ 3 ತಿಂಗಳ ಹಿಂದೆ ಭೂಮಿ ಪೂಜೆ ನೆರವೇರಿಸಲಾಗಿದೆ. ಇನ್ನು ಕೂಡ ಸಮುದಾಯ ಭವನ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಅಂಬೇಡ್ಕರ್ ಸಂಘದವರು ಹಾಗೂ ಮುಖಂಡರು ಮುಂದಾಗದೇ ಇರುವುದು ಬೇಸರದ ಸಂಗತಿಯಾಗಿದೆ ಎಂದರು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುಶೀಲ, ಸದಸ್ಯ ಕೆ.ಎಂ.ಅಶೋಕ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಮಹದೇವಯ್ಯ, ಕೆ.ಎಂ.ರಾಜೇಂದ್ರಸ್ವಾಮಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ವಾಸುಪಾಲ್, ಯಜಮಾನರಾದ ಗುರುಸಿದ್ದಯ್ಯ, ರಂಗಪ್ಪ, ಮುಖಂಡರಾದ ನಾಗರಾಜು ಇದ್ದರು.

ಕಾಳಿ ನದಿ: ಸೇತುವೆ ನಿರ್ಮಾಣಕ್ಕೆ ಅಡಿಪಾಯದ ಸವಾಲು

• ಉದಯ

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	09:00 ರಿಂದ 10:30
ಗುಳಿಕ ಕಾಲ	ಬೆಳಿಗ್ಗೆ	06:00 ರಿಂದ 07:30
ಯಮಗಂಡ ಕಾಲ	ಮಧ್ಯಾಹ್ನ	01:30 ರಿಂದ 03:00

ಮೇಷ ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ನೀವು ಹಣಕಾಸಿನ ಲಾಭ ತರುವ ಅದ್ಭುತವಾದ ಹೊಸ ಕಲ್ಪನೆಗಳನ್ನು ಪ್ರಸ್ತುತಪಡಿಸುತ್ತೀರಿ.

ವೃಷಭ ನಿಮ್ಮ ಜೀವನದ ಕಳಪೆ ಆರೋಗ್ಯದಿಂದಾಗಿ, ನಿಮ್ಮ ಹಣವನ್ನು ಇಂದು ಖರ್ಚು ಮಾಡಬಹುದು, ಆದರೆ ನೀವು ಅದರ ಬಗ್ಗೆ ಚಿಂತಿಸಬೇಕಾಗಿಲ್ಲ ಏಕೆಂದರೆ ಹಣವನ್ನು ಉಳಿಸಲಾಗಿದೆ.

ಮಿಥುನ ನೀವು ವಿರಾಮದ ಸಂತೋಷವನ್ನು ಅನುಭವಿಸಲಿದ್ದೀರಿ. ಸಾಲಗಾರನು ನಿಮಗೆ ಹೇಳದೆ ನಿಮ್ಮ ಖಾತೆಗೆ ಹಣವನ್ನು ಸೇರಿಸಬಹುದು. ಇದರ ಬಗ್ಗೆ ತಿಳಿದು ನೀವು ಆಶ್ಚರ್ಯಚಕಿತರಾಗಬಹುದು.

ಕರ್ಕಾಟಕ ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ.

ಸಿಂಹ ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸಲು ಗಂಭೀರ ಪ್ರಯತ್ನಗಳನ್ನು ಮಾಡಿ. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು.

ಕನ್ಯಾ ನಿಮ್ಮ ಸುತ್ತಲಿನ ಸುಮಾರು ತುಂಬ ಬೇಡಿಕೆಯಿಡುತ್ತಾರೆಂದು ನಿಮಗನಿಸುತ್ತದೆ ನಿಮಗೆ ಸಾಧ್ಯವಿರುವುದಕ್ಕಿಂತ ಹೆಚ್ಚು ಮಾಡಲು ಒಪ್ಪಿಕೊಳ್ಳಬೇಡಿ, ಇತರರನ್ನು ಸಂತೋಷಪಡಿಸಲು ನಿಮ್ಮ ಮೇಲೆ ಒತ್ತಡ ಹಾಕಬೇಡಿ.

ತುಲಾ ಭಯವೆಂಬ ದೈತ್ಯನ ಜೊತೆ ಹೋರಾಡಲು ಸಿದ್ಧವಾಗುತ್ತಿದ್ದ ಹಾಗೆ ನಿಮ್ಮ ಆಲೋಚನೆಗಳನ್ನು ಸಕಾರಾತ್ಮಕವಾಗಿ ರೂಪಿಸಿಕೊಳ್ಳಿ. ಇಲ್ಲದಿದ್ದಲ್ಲಿ ನೀವು ಈ ರಾಕ್ಷಸನಿಗೆ ಒಬ್ಬ ಜಡ ಮತ್ತು ನಿಷ್ಕರುಣೆಯ ಬಲಿಯಾಗುತ್ತೀರಿ.

ವೃಶ್ಚಿಕ ನೀವು ಭಯವೆಂಬ ದೈತ್ಯನ ಜೊತೆ ಹೋರಾಡಲು ಸಿದ್ಧವಾಗುತ್ತಿದ್ದ ಹಾಗೆ ನಿಮ್ಮ ಆಲೋಚನೆಗಳನ್ನು ಸಕಾರಾತ್ಮಕವಾಗಿ ರೂಪಿಸಿಕೊಳ್ಳಿ. ಇಲ್ಲದಿದ್ದಲ್ಲಿ ನೀವು ಈ ರಾಕ್ಷಸನಿಗೆ ಒಬ್ಬ ಜಡ ಮತ್ತು ನಿಷ್ಕರುಣೆಯ ಬಲಿಯಾಗುತ್ತೀರಿ.

ಧನಸ್ಸು ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ತ್ಯರಾಗಿರುತ್ತೀರಿ. ನಿಮ್ಮನ್ನು ಸಂತೋಷವಾಗಿಡುವುದನ್ನೇನಾದರೂ ಮಾಡಿ, ಆದರೆ ಇತರರ ವ್ಯವಹಾರಗಳಿಂದ ದೂರವಿರಿ.

ಮಕರ ನಿಮ್ಮ ದಯಾಳು ಪ್ರಕೃತಿ ಇಂದು ಅನೇಕ ಸಂತೋಷದ ಕ್ಷಣಗಳನ್ನು ತರುತ್ತದೆ. ನೀವು ತ್ವರಿತ ಹಣ ಪಡೆಯುವ ಬಯಕೆ ಹೊಂದಿರುತ್ತೀರಿ. ನಿಮ್ಮ ವ್ಯಕ್ತಿತ್ವ ಹೊಸ ಸ್ನೇಹಿತರನ್ನು ಗಳಿಸಲು ಸಹಾಯ ಮಾಡುತ್ತದೆ.

ಕುಂಭ ಆರೋಗ್ಯ ಸಮಸ್ಯೆಯಿಂದಾಗಿ ಒಂದು ಪ್ರಮುಖ ಕೆಲಸಕ್ಕೆ ಹೋಗಲು ಸಾಧ್ಯವಾಗದಿರುವುದರಿಂದ ಕೆಲವು ಹಿನ್ನಡೆ ಎದುರಿಸುವ ಸಾಧ್ಯತೆಯಿದೆ. ಆದರೆ ನಿಮ್ಮನ್ನು ಮೇಲೆತ್ತಲು ನಿಮ್ಮ ತಾರ್ಕಿಕತೆಯನ್ನು ಬಳಸಿ.

ಮೀನ ಸಂಗಾತಿಯೊಡನೆ ಚಲನಚಿತ್ರ – ರಂಗಭೂಮಿ ಅಥವಾ ಊಟ ನಿಮ್ಮನ್ನು ಒಂದು ಶಾಂತ ಮತ್ತು ಅದ್ಭುತವಾದ ಮನಸ್ಥಿತಿಯಲ್ಲಿರುತ್ತದೆ ನಿಮ್ಮ ಹಳೆಯ ಯಾವುದೇ ರೋಗ ಇಂದು ನಿಮ್ಮನ್ನು ಕಾಡಬಹುದು.

12 ದಿನಗಳಾದರೂ ದುರಸ್ತಿಯಾಗದ ಹಿಪ್ಪರಗಿ ಬ್ಯಾರೇಜ್ ಗೇಟ್

• ಉದಯವಾಹಿನಿ ರಬಕವಿ ಬನಹಟ್ಟಿ

ಸಮೀಪದ ಹಿಪ್ಪರಗಿ ಬ್ಯಾರೇಜ್‌ನ 22 ನೇ ಗೇಟ್‌ನಲ್ಲಿ ಹನ್ನೆರಡು ದಿನಗಳಾದರೂ ಗೇಟ್ ದುರಸ್ತಿ ಕಾರ್ಯ ಪೂರ್ಣ ಪ್ರಮಾಣದಲ್ಲಿ ಆಗದೆ ಇರುವ ಪರಿಣಾಮವಾಗಿ ಸ್ಥಳೀಯ ಅಧಿಕಾರಿಗಳು ನೀರನ್ನು ತಡೆ ಹಿಡಿಯಲು ಸತತ ಪ್ರಯತ್ನ ಮಾಡುತ್ತಿದ್ದಾರೆ. ಈಗ ನೀರು ಹರಿದು ಹೋಗದಂತೆ ದೊಡ್ಡ ದೊಡ್ಡ ಮರಳಿನ ಚೀಲಗಳನ್ನು ಅಳವಡಿಸುವ ಕಾರ್ಯಕ್ಕೆ ಅಧಿಕಾರಿಗಳು ಮುಂದಾಗಿದ್ದು, ಬೃಹತ್ ಕ್ರೇನ್ ಮೂಲಕ ಮರಳಿನ ಚೀಲಗಳನ್ನು ಅಳವಡಿಸುವ ಕಾರ್ಯ ನಡೆದಿದೆ. ಆರಂಭದಲ್ಲಿ ಪ್ರತಿದಿನ ಒಂಬತ್ತು ಸಾವಿರ ಕ್ಯುಸೆಕ್

ಉದಯವಾಹಿನಿ ಚಿತ್ರ

ನೀರು ಹರಿದು ಹೋಗಿತ್ತು. ಈಗ ನೂರು ಕ್ಯುಸೆಕ್‌ನಷ್ಟು ನೀರು ಹೋಗುತ್ತಿದೆ. ಒಟ್ಟು 6 ಟಿಎಂಸಿ ಸಾಮರ್ಥ್ಯದ ಬ್ಯಾರೇಜ್‌ನಲ್ಲಿ ಗೇಟ್ ಕಿತ್ತು ಹೋದಾಗ 5.2 ಟಿಎಂಸಿ ನೀರಿನ ಸಂಗ್ರಹವಿತ್ತು. ಆದರೆ ಈಗ 2.5 ಕ್ಕಿಂತ ಹೆಚ್ಚು ಟಿಎಂಸಿ ನೀರು ಖಾಲಿಯಾಗಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ, ತೇರದಾಳ, ಮುಧೋಳ ಮತ್ತು ವಿಜಯಪುರ ಜಿಲ್ಲೆಯ ಅಥಣಿ, ಕುಡಚಿ ರಾಯಬಾಗ ತಾಲ್ಲೂಕಿನ ನೂರಕ್ಕೂ ಹೆಚ್ಚು ನಗರ ಮತ್ತು ಗ್ರಾಮೀಣ ಪ್ರದೇಶದ ಜನ ಮತ್ತು ಜಾನುವಾರುಗಳಿಗೆ ನೀರಿನ ಸಮಸ್ಯೆಯಾಗಲಿದೆ. ಅದೇ ರೀತಿಯಾಗಿ ನದಿ ತೀರದ ತೋಟ ಮತ್ತು ಹೊಲಗಳಲ್ಲಿ ಬೆಳೆದ ಅಪಾರ ಪ್ರಮಾಣದ ಬೆಳೆಗಳಿಗೂ ತೊಂದರೆಯಾಗಲಿದೆ ಎಂದು ಗ್ರಾಮಸ್ಥರು ಆತಂಕಗೊಂಡಿದ್ದಾರೆ.

ಜಿಲ್ಲೆಯ ಬಹುಪಾಲು ಪ್ರದೇಶವನ್ನು ಆವರಿಸಿ ರೈತರ ಬಾಳಿಗೆ ಬಿಳಿ ಬಂಗಾರವಾಗಿ ಮಿಂಚಿದ್ದ ಹತ್ತಿ

ಹತ್ತಿ ಸಾಮ್ರಾಜ್ಯ ಪತನ; ಪಾಳುಬಿದ್ದ ಮಾರುಕಟ್ಟೆ

• ಉದಯವಾಹಿನಿ ಹಾವೇರಿ

ರಾಜ್ಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಮಾರುಕಟ್ಟೆಗಳಲ್ಲಿ ಹೆಸರು ಮಾಡಿದ್ದ ಹಾವೇರಿಯ ಹತ್ತಿ ಮಾರುಕಟ್ಟೆ', ಇದೀಗ ತನ್ನ ನೈಜ ಕಳೆಯನ್ನು ಕಳೆದುಕೊಂಡು ಪಾಳು ಬಿದ್ದ ರೀತಿಯಲ್ಲಿ ಅವಸಾನದತ್ತ ಹೆಜ್ಜೆ ಇರಿಸುತ್ತಿದೆ. ಹತ್ತಿ ಕಣಜವೆಂದು ಖ್ಯಾತಿ ಪಡೆದಿದ್ದ ಉತ್ತರ ಕರ್ನಾಟಕದ ಹೆಬ್ಬಾಗಿಲು ಹಾವೇರಿಯ ರೈತರು, ಹತ್ತಿ ಬೆಳೆಯಿಂದ ವಿಮುಖರಾಗಿ ಮೆಕ್ಕೆಜೋಳದತ್ತ ಮುಖ ಮಾಡಿದ್ದಾರೆ. ಒಂದುಕಾಲದಲ್ಲಿ ಜಿಲ್ಲೆಯ ಬಹುಪಾಲು ಪ್ರದೇಶವನ್ನು ಆವರಿಸಿ ರೈತರ ಬಾಳಿಗೆ 'ಬಿಳಿ ಬಂಗಾರ'ವಾಗಿ ಮಿಂಚಿದ್ದ ಹತ್ತಿ, ಇದೀಗ ಜಿಲ್ಲೆಯ ರೈತರಿಂದ ಕೈ ತಪ್ಪುತ್ತಿದೆ.

ಜಿಲ್ಲೆಯಲ್ಲಿ ಹತ್ತಿ ಹೆಚ್ಚಾಗಿ ಬೆಳೆಯುತ್ತಿದ್ದ ಕಾಲದಲ್ಲಿ, ಹಾವೇರಿಯ ಗುತ್ತಲ ರಸ್ತೆಯ ವೃತ್ತದಿಂದ ಎಪಿಎಂಸಿ

ಬಯಲು ಸೀಮೆಯಲ್ಲಿ ಮೆಟ್ಟಿನಿಂತಿದ್ದ ಹತ್ತಿ ಸಾಮ್ರಾಜ್ಯ

ಏಕ ದಳ, ದ್ವಿದಳ, ಆಹಾರ ಧಾನ್ಯ ಬೆಳೆಯಲ್ಲಿ ಮಾತ್ರ ಆಸಕ್ತಿ ತೋರುತ್ತಿದ್ದ ಹಾವೇರಿ ಜಿಲ್ಲೆಯ ರೈತರು, ವಾಣಿಜ್ಯ ಬೆಳೆಯಾದ ಹತ್ತಿ ಬೆಳೆಯತ್ತ ಒಲವು ತೋರಿಸಿದ್ದರು. ಬಯಲು ಸೀಮೆ ಪ್ರದೇಶ ಹೆಚ್ಚಿರುವ ಹಾವೇರಿಯ ಹಲವು ಕಡೆಗಳಲ್ಲಿ 'ಬಿಳಿ ಬಂಗಾರ'ದ ಫಸಲು. ರೈತರಲ್ಲಿ ಮೋಡಿ ಮಾಡಿತ್ತು. ಕ್ರಮೇಣ ಇಡೀ ಜಿಲ್ಲೆಯೇ ಹತ್ತಿ ಕಣಜವಾಗಿ ಮಾರ್ಪಟ್ಟಿತ್ತು.

ಮಾರುಕಟ್ಟೆವರೆಗಿನ ರಸ್ತೆಯ ಎರಡೂ ಬದಿಯಲ್ಲೂ ಹತ್ತಿ ಹಂಡಿಗೆಗಳು ಕಣ್ಣಿಗೆ ಕಾಣುತ್ತಿದ್ದವು. ರಸ್ತೆಯಲ್ಲೆಲ್ಲ ಹತ್ತಿ ಹಾರಾಡುತ್ತಿತ್ತು. ಹತ್ತಿ ಮಾರುಕಟ್ಟೆಯ ವ್ಯಾಪಾರಿಗಳು, ಹಮಾಲಿಗಳು ಹಾಗೂ ಕೂಲಿ ಕಾರ್ಮಿಕರಿಗೆ ಊಟಕ್ಕೂ ಸಮಯವಿಲ್ಲದಂತೆ ಕೆಲಸವಿತ್ತು. ಇದೇ ರಸ್ತೆ ಇದೀಗ, ಹತ್ತಿ ಹಂಡಿಗೆ ಇಲ್ಲದೇ ಖಾಲಿ ಖಾಲಿಯಾಗಿದೆ. ಹತ್ತಿ ವ್ಯಾಪಾರಿಗಳು, ವ್ಯಾಪಾರವಿಲ್ಲದೇ ಒಂದೊಂದು ಮಳಿಗೆಗಳನ್ನು ಮುಚ್ಚುತ್ತಿದ್ದಾರೆ.150 ಮಳಿಗೆ ಇದ್ದ ಮಾರುಕಟ್ಟೆಯಲ್ಲಿ ಈಗ ಕೇವಲ 10 ಮಳಿಗೆಗಳು ಮಾತ್ರ ಉಳಿದುಕೊಂಡಿವೆ. ಮಳಿಗೆ ಬಂದ ಮಾಡಿದ ಹಲವರು, ಬೇರೆ ಉದ್ಯೋಗ ಮಾಡುತ್ತಿದ್ದಾರೆ.

ಒಂದು ಕಾಲದಲ್ಲಿ ಕೃಷಿ ಕ್ಷೇತ್ರದಲ್ಲಿ ಬಿಳಿ ಬಂಗಾರವಾಗಿದ್ದ ಹತ್ತಿ. ಈಗಾಗಲೇ ಜಿಲ್ಲೆಯಿಂದ ವಿಮುಖವಾಗುವ ಹಂತಕ್ಕೆ ಬಂದಿದೆ. ಅಲ್ಲಲ್ಲಿ ಕೆಲ ರೈತರು ಮಾತ್ರ ಹತ್ತಿ ಬೆಳೆಯುತ್ತಿದ್ದು, ಅವರು ಸಹ ಹಾವೇರಿಯ ಬದಲು ಬೇರೆ ಬೇರೆ ಮಾರುಕಟ್ಟೆಗೆ

ಉದಯವಾಹಿನಿ ಚಿತ್ರ

ಹತ್ತಿ ಕೊಡೊಯ್ದು ಮಾರುತ್ತಿದ್ದಾರೆ. ಇದೇ ಕಾರಣಕ್ಕೆ ಹಾವೇರಿ ಗುತ್ತಲ ರಸ್ತೆಯಲ್ಲಿರುವ ಹತ್ತಿ ಮಾರುಕಟ್ಟೆ ಬಿಕೊ ಎನ್ನುತ್ತಿದೆ.

ಅಂದಿನ ಕಾಲದಲ್ಲಿ ನಿತ್ಯವೂ ಹತ್ತಿ ಹಂಡಿಗೆಗಳಿಂದ ತುಂಬಿರುತ್ತಿದ್ದ ಮಾರುಕಟ್ಟೆಯಲ್ಲಿ ಇದೀಗ, ನೋಡಲು ಸಹ ಹಂಡಿಗೆ ಸಿಗದ ಸ್ಥಿತಿ ನಿರ್ಮಾಣವಾಗಿದೆ. ಮಾರುಕಟ್ಟೆಯ ಬಹುತೇಕ ಮಳಿಗೆಗಳಿಗೆ ಬೀಗ ಹಾಕಲಾಗಿದ್ದು, ಸ್ವಚ್ಛತೆ ಮಾಡುವವರಿಲ್ಲದೇ ಅದರ ಮುಂದೆ ಕಸದ ರಾಶಿ ಬಿದ್ದಿದೆ. ಮಾರುಕಟ್ಟೆಯಲ್ಲಿರುವ ಕೆಲ ಮಳಿಗೆಯವರು ಮಾತ್ರ ಪ್ರತಿ ಸೋಮವಾರ ಹಾಗೂ ಗುರುವಾರಕ್ಕೊಮ್ಮೆ ಮಾತ್ರ ಬಾಗಿಲು ತೆರೆಯುತ್ತಿದ್ದಾರೆ. ಈ ಅವಧಿಯಲ್ಲಿಯೂ ಹತ್ತಿ ಹಂಡಿಗೆಗಳ ಸಂಖ್ಯೆ ಎರಡಂಕಿಯೂ ದಾಟುತ್ತಿಲ್ಲ. ಕಡಿಮೆ ಹಂಡಿಗೆ' ಎಂಬ ಕಾರಣಕ್ಕೆ ಹಮಾಲರು ಸಹ ಮಾರುಕಟ್ಟೆಗೆ ಬರುತ್ತಿಲ್ಲ. ಮಾಲೀಕರೇ ರೈತರ ಹಂಡಿಗೆಗಳನ್ನು ಹೊತ್ತು. ಮಳಿಗೆಯೊಳಗೆ ಇಟ್ಟುಕೊಂಡು ಮರು ಮಾರಾಟಕ್ಕಾಗಿ ಜಾತಕ ಪಕ್ಷಿ ರೀತಿಯಲ್ಲಿ ಕಾಯುತ್ತಿದ್ದಾರೆ. ಮಳಿಗೆಯ ನಿರ್ವಹಣೆಗೆ ಮಾಡಿದ ಖರ್ಚು ಸಹ ವಾಪಸು ಬರುತ್ತಿಲ್ಲವೆಂಬ ಅಳಲು ಮಾಲೀಕರದ್ದಾಗಿದೆ. ಹತ್ತಿ ಇಲ್ಲದ ಮಾರುಕಟ್ಟೆ ಖಾಸಗಿ ವಾಹನಗಳ ನಿಲುಗಡೆಗೆ ಜಾಗವಾಗಿದೆ. ಕಿಡಿಗೇಡಿಗಳ ಮದ್ಯದ ಪಾರ್ಟಿ ಹಾಗೂ ಅಕ್ರಮ ಚಟುವಟಿಕೆಗಳ ಅಡ್ಡೆಯಾಗಿದೆ.

ಕಾರ್ಮಿಕರ ಕೊರತೆ, ನಿರ್ವಹಣೆ ವೆಚ್ಚ ಹೆಚ್ಚಳ: ಕೃಷಿ ಕ್ಷೇತ್ರದಲ್ಲಿಯೂ ಕಷ್ಟುಪಟ್ಟು ಹೆಚ್ಚು ಸಮಯ ಕಾದು ಲಾಭ ಪಡೆಯುವ ರೈತರ ಸಂಖ್ಯೆ ಕಡಿಮೆಯಾಗುತ್ತಿದೆ. ಹಲವು ಕಾರಣಗಳಿಂದ ಕೃಷಿ ಮಾಡಲು ಕಾರ್ಮಿಕರೂ ಸಿಗುತ್ತಿಲ್ಲ. ಇದರಿಂದಾಗಿ ರೈತರು, ಕಡಿಮೆ ಸಮಯದಲ್ಲಿ ಯಾವುದೇ ಕೆಲಸವಿಲ್ಲದೇ ಕೈಗೆ ಬರುವ ಬೆಳೆಗಳತ್ತ ವಾಲಿದ್ದಾರೆ.

ಹತ್ತಿ ಬೆಳೆಯಬೇಕಾದರೆ ನಿರ್ವಹಣೆ ವೆಚ್ಚ ಹೆಚ್ಚು, ಕಾರ್ಮಿಕರು ಬೇಕು. ಆದರೆ, ಹಣ ಹಾಗೂ ಕಾರ್ಮಿಕರ ಕೊರತೆಯಿಂದಾಗಿ ರೈತರು ಹತ್ತಿ ಬೆಳೆಯಿಂದ ವಿಮುಖರಾಗುತ್ತಿದ್ದಾರೆ. ಹತ್ತಿ ಬೆಳೆಯುವ ಜಾಗದಲ್ಲಿ ಮೆಕ್ಕೆಜೋಳ ಬಂದಿದ್ದು, ಇದೀಗ ಹಾವೇರಿಯಲ್ಲೆಲ್ಲ ಮೆಕ್ಕೆಜೋಳವೇ ಜೋರಾಗಿದೆ. ಹತ್ತಿ ಬೆಳೆ ಇಲ್ಲದಿದ್ದರಿಂದ ಜಿನ್ನಿಂಗ್ ಮಿಲ್‌ಗಳು ಬಾಗಿಲು ಮುಚ್ಚಿವೆ. ಕೆಲ ಜಿನ್ನಿಂಗ್ ಮಿಲ್‌ಗಳು ಮಾತ್ರ ಅಲ್ಲಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದು, ಹತ್ತಿ ಖರೀದಿಸಲು ಪಡಿಪಾಟಲು ಅನುಭವಿಸುತ್ತಿವೆ.

47 ವರ್ಷದಿಂದ ನಾನು ಹತ್ತಿ ವ್ಯಾಪಾರ ಮಾಡುತ್ತಿದ್ದೇನೆ. ಅಂದು ಯಾರಾದರೂ ಬಂದರೆ ಮಾತನಾಡಲು ಸಮಯ ಇರುತ್ತಿರಲಿಲ್ಲ. ಮಳಿಗೆಯಲ್ಲೇ ಮಲಗುವಷ್ಟು ಕೆಲಸ ಇರುತ್ತಿತ್ತು. ಆದರೆ, ಈಗ ಮಳಿಗೆಯಲ್ಲಿ ಯಾರೂ ಇಲ್ಲ. ಆಗಾಗ ರೈತರು ಬಂದರಷ್ಟೇ ನಮಗೆ ಹತ್ತಿ ಸಿಗುತ್ತದೆ. ಮಳಿಗೆ ಇರುವುದರಿಂದ, ಮನೆಯಲ್ಲಿ ಕುಳಿತುಕೊಳ್ಳಲು ಮನಸ್ಸಾಗುವುದಿಲ್ಲ. ಅದಕ್ಕಾಗಿ ಮಳಿಗೆಗೆ ಬಂದು ಕುಳಿತು, ಹಳೇ ದಿನಗಳನ್ನು ನೆನಪು ಮಾಡಿಕೊಳ್ಳುತ್ತೇನೆ' ಎಂದು ಹತ್ತಿ ವ್ಯಾಪಾರಿ ಶಿವಯೋಗಪ್ಪ ಮತ್ತೀಹಳ್ಳಿ ಹೇಳಿದರು.ಅಂದು ಲಕ್ಷ್ಮಿ ತಳಿ ಹತ್ತಿ, ಎಕರೆಗೆ 20 ಕ್ವಿಂಟಲ್ ಇಳುವರಿ ಕೊಡುತ್ತಿತ್ತು. ಗುತ್ತಲ, ಮೈಲಾರ ಭಾಗದಲ್ಲಿ ಡಿಸಿಎಚ್ 32 ಹತ್ತಿ ಹೆಸರು ಮಾಡಿತ್ತು. ಇಂದಿಗೂ ಕೆಲ ರೈತರು ಈ ಹತ್ತಿ ಬೆಳೆಯುತ್ತಾರೆ. ಜಯಂಧರ ಹತ್ತಿ, ಬಿಟಿ. ಸಾಲು ಸಾಲು ತಳಿಗಳು ಬಂದವು. ಆದರೆ, ಹತ್ತಿ ಕೃಷಿಗೆ ಕಾರ್ಮಿಕರ ಕೊರತೆ ಎದುರಾಯಿತು. ನಂತರ, ರೈತರು ಒಬ್ಬೊಬ್ಬರೇ ಹತ್ತಿ ಬೆಳೆಯುವುದನ್ನು ಬಂದ್ ಮಾಡಿದರು. ಈಗ ಹತ್ತಿ ಬೆಳೆಯನ್ನು ಅಲ್ಲಲ್ಲಿ ಹುಡುಕುವ ಸ್ಥಿತಿ ಬಂದಿದೆ' ಎಂದರು.

ಬೀಜಗಳ ಆಯ್ಕೆ, ಗೊಬ್ಬರ, ಕಳೆ, ಔಷಧಿ

ಹೀಗೆ ನಾನಾ ರೀತಿಯಲ್ಲಿ ಹತ್ತಿ ಬೆಳೆಯ ಪೋಷಣೆ ಮಾಡಬೇಕು. ಆಗಾಗ ಬರುವ ರೋಗಗಳಿಗೂ ಉಪಚಾರ ಮಾಡಬೇಕು. ಇದಕ್ಕೆ ಹೆಚ್ಚು ಹಣ ಹಾಗೂ ಸಮಯ ಬೇಕು. ಇದೇ ಕಾರಣಕ್ಕೆ ರೈತರು, ಹತ್ತಿ ಬೆಳೆಯಿಂದ ವಿಮುಖವಾಗುತ್ತಿದ್ದಾರೆ. ಕಡಿಮೆ ಖರ್ಚು ಹಾಗೂ ಕಡಿಮೆ ಕೆಲಸವಿರುವ ಮೆಕ್ಕೆಜೋಳ ಬೆಳೆಯಲು ಆಸಕ್ತಿ ತೋರುತ್ತಿದ್ದಾರೆ.

ಕದಳಿ ವೇದಿಕೆ: ಇಂದು ದತ್ತಿ ಉಪನ್ಯಾಸ

• ಉದಯವಾಹಿನಿ ಬಸವನಬಾಗೇವಾಡಿ

ತಾಲ್ಲೂಕಾ ಶರಣ ಸಾಹಿತ್ಯ ಪರಿಷತ್ತಿನ ಮಹಿಳಾ ಘಟಕ ಕದಳಿ ವೇದಿಕೆ ಆಶ್ರಯದಲ್ಲಿ ತಾಲ್ಲೂಕಿನ ನರಸಲಗಿಯ ಎಂ ಡಿ ಎಸ್ ಪಿ ಮಾಧ್ಯಮಿಕ ಶಾಲೆ ಆವರಣದಲ್ಲಿ ಮುತ್ತಗಿ ಹಾಗೂ ಮುಳವಾಡ ಸ್ಮರಣಾರ್ಥ ಬೆಳಿಗ್ಗೆ ದತ್ತಿ ಉಪನ್ಯಾಸ ಹಮ್ಮಿಕೊಳ್ಳಲಾಗಿದೆ.

ಹೆಚ್‌ಎಸ್ ಬಿರಾದಾರ, ಪಾರ್ವತಮ್ಮ ಗೌಡತಿ ಪಾಟೀಲ, ಎ ಎಂ ನರಸರಡ್ಡಿ, ಎಸ್‌ಎಂ ಮಾಡಗಿ, ಪ್ರೊ ಪಿ ಎಲ್ ಹಿರೇಮಠ, ವೀರೇಶ ಗುಡ್ಲಮನಿ ಹಾಗೂ ಶರಣು ಬಸ್ತಾಳ ಉಪಸ್ಥಿತರಿರುತ್ತಾರೆ. ಉಪನ್ಯಾಸವನ್ನು ಸುಜಾತ ಯಡ್ರಾಮಿ ನೀಡಲಿದ್ದಾರೆ ಎಂದು ಕದಳಿ ವೇದಿಕೆ ಅಧ್ಯಕ್ಷೆ ಸಾವಿತ್ರಿ ಕಲ್ಯಾಣಶೆಟ್ಟಿ ತಿಳಿಸಿದ್ದಾರೆ.

ನರಿಬೋಳ: ನಲ್ಲಿಯ ಮೂಲಕ ಬರುತ್ತಿರುವ ಭೀಮಾ ನದಿಯ ಕಲುಷಿತ ನೀರು

• ಉದಯವಾಹಿನಿ ಕಲಬುರಗಿ

ಜೇವರ್ಗಿ ತಾಲ್ಲೂಕಿನ ನರಿಬೋಳದಲ್ಲಿ ಬಹಳಷ್ಟು ಜನ ಕುಡಿಯುವುದಕ್ಕೆ ನಲ್ಲಿಯಿಂದ ಬರುವಂತಹ ನದಿಯ ನೀರನ್ನೆ ಉಪಯೋಗಿಸುತ್ತಾರೆ. ಆದರೆ ನಲ್ಲಿಯಲ್ಲಿ ಬರುತ್ತಿರುವ ನೀರು ಪೂರ್ತಿ ಹಸಿರು ಬಣ್ಣಕ್ಕೆ ತಿರುಗಿದ್ದು, ಗ್ರಾಮಸ್ಥರು ಅನಿವಾರ್ಯವಾಗಿ ಇದೇ ನೀರನ್ನೇ ಕುಡಿಯಬೇಕಾದ ಪರಿಸ್ಥಿತಿ ಎದುರಾಗಿದೆ. ಕುಲಷಿತ ನಿರನ್ನು ಕುಡಿದು ಜನರ ಆರೋಗ್ಯದಲ್ಲಿ ಎರುಪೇರಾದರೆ ಪಂಚಾಯತ್ ಅಧಿಕಾರಿಗಳು, ಸಂಭದಿಸಿದ ಅಧಿಕಾರಿಗಳೆ ಜವಾಬ್ದಾರಿ ಆಗಬೇಕಾಗುತ್ತದೆ. ಆದ್ದರಿಂದ ಅಧಿಕಾರಿಗಳು ಕೂಡಲೆ ಎಚ್ಚೆತ್ತು ಶುದ್ದವಾದ ನೀರು ಪೂರೈಕೆಗೆ ಕ್ರಮ ಕೈಗೊಳ್ಳಬೇಕು. ಈ ಬಗ್ಗೆ ನಿರ್ಲಕ್ಷಿಸಿದರೆ ಸಂಭಂದಿಸಿದ ಅಧಿಕಾರಿಗಳ ವಿರುದ್ದ ಜಿಲ್ಲಾದಿಕಾರಿಗಳಿಗೆ ದೂರು ಸಲ್ಲಿಸಿ ಕ್ರಮಕ್ಕೆ ಆಗ್ರಹಿಸಬೆಕಾಗುತ್ತದೆ ಎಂದು ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್. ಪಾಟೀಲ ನರಿಬೋಳ ಎಚ್ಚರಿಸಿದ್ದಾರೆ.

ಕಳವಾದ 173 ಮೊಬೈಲ್ ಪತ್ತೆ ಹಚ್ಚಿ ವಾರುಸುದಾರರಿಗೆ ಹಸ್ತಾಂತರ

• ಉದಯವಾಹಿನಿ ಕಲಬುರಗಿ

ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಕಳವಾದ, ಮರೆತು ಹೋದ ಹಾಗೂ ಕಾಣೆಯಾದ ಸುಮಾರು 173 ಮೊಬೈಲ್‌ಗಳನ್ನು ಪತ್ತೆ ಹಚ್ಚಿ ಅವುಗಳನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಎಸ್‌ಪಿ ಕಚೇರಿಯಲ್ಲಿ ಎಸ್‌ಪಿ ಅಡ್ಡೂರು ಶ್ರೀನಿವಾಸಲು ವಾರಸುದಾರರಿಗೆ ಮೊಬೈಲ್ ಫೋನ್‌ಗಳನ್ನು ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಕಳವಾದ, ಮರೆತು ಹೋದ ಹಾಗೂ ಕಾಣೆಯಾದ ಮೊಬೈಲ್‌ಗಳ ಬಗ್ಗೆ ಅವುಗಳ ವಾರಸುದಾರರು ಕೇಂದ್ರ ಸರ್ಕಾರದ ದೂರ ಸಂಪರ್ಕ ಇಲಾಖೆ ಜಾರಿಗೆ ತಂದಿರುವ ಸೆಂಟ್ರಲ್ ಇಕ್ವಿಪಮೆಂಟ್ ಐಡೆಂಟಿಟಿ ರೆಜಿಸ್ಟರ್ (ಸಿಇಐಆರ್) ಪೋರ್ಟಲ

ಭಾರತದಲ್ಲಿ ಸೇಡು, ಪ್ರತಿಕಾರ ಭಾವನೆ ಹೆಚ್ಚುತ್ತಿದೆ ; ಗೋಪಾಲಕೃಷ್ಣ ಗಾಂಧಿ



ಜೈಪುರ: ಸಮಕಾಲೀನ ಭಾರತದ ಕರಾಳ ಚಿತ್ರಣವನ್ನು ಚಿತ್ರಿಸುತ್ತಾ, ಪಶ್ಚಿಮ ಬಂಗಾಳದ ಮಾಜಿ ರಾಜ್ಯಪಾಲ ಗೋಪಾಲ ಕೃಷ್ಣ ಗಾಂಧಿ ಅವರು ಕೋಪ, ಪ್ರತೀಕಾರ, ಸೇಡು ಈಗ ಸಾರ್ವಜನಿಕ ಭಾಷಣದಲ್ಲಿ ಪ್ರಾಬಲ್ಯ ಹೊಂದಿದೆ ಎಂದು ಎಚ್ಚರಿಸಿದರು. ಜೈಪುರ ಸಾಹಿತ್ಯ ಉತ್ಸವದ 19 ನೇ ಆವೃತ್ತಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಚಾಲ್ತಿಯಲ್ಲಿರುವ ಮನಸ್ಥಿತಿ ಕ್ಷಮೆಯಾಚನೆ ಮತ್ತು ಮರುಪಾವತಿಗಾಗಿ ಬೇಡಿಕೆಗಳಿಂದ ಗುರುತಿಸಲ್ಪಟ್ಟಿದೆ ಎಂದು ಹೇಳಿದರು. ಶುಕ್ರವಾರ ಭಾರತದಲ್ಲಿ ಪ್ರಬಲ ಭಾವನೆ ಕೋಪ, ಪ್ರತೀಕಾರ. ಅದು ಒಂದು ಅಥವಾ ಎರಡು ತಲೆಮಾರುಗಳ ಹಿಂದೆ ಹಾಗೆ ಇರಲಿಲ್ಲ ಎಂದಿದ್ದಾರೆ. ಎದುರಾಳಿಯೊಂದಿಗೆ ಬಹುತೇಕ ಘರ್ಷಣೆಗೆ ಬರುವ ಬಯಕೆಯು ನಿರ್ಣಾಯಕ ಭಾವನೆಯಾಗಿದೆ ಎಂದು ದಿ ಅನ್‌ಡೈಯಿಂಗ್ ಲೈಟ್ ಎ ಪರ್ಸನಲ್ ಹಿಸ್ಟರಿ ಆಫ್ ಇಂಡಿಪೆಂಡೆಂಟ್ ಇಂಡಿಯಾ ಲೇಖಕರು ಶಾಂತ ತುರ್ತು ಭಾವನೆಯೊಂದಿಗೆ ಹೇಳಿದರು.

ಸ್ಲ್ಯಾಮ್ ಪದವನ್ನು ಆಗಾಗ್ಗೆ ಬಳಸುವುದರೊಂದಿಗೆ ಪತ್ರಿಕೆಗಳು ಈ ಬದಲಾವಣೆಯನ್ನು ಪ್ರತಿಬಿಂಬಿಸುತ್ತವೆ ಎಂದು 80 ವರ್ಷ ವಯಸ್ಸಿನವರು ಗಮನಿಸಿದರು ಸ್ಲ್ಯಾಮ್, ಸ್ಲ್ಯಾಮ್ ಜೊತೆಗೆ ಸ್ಲ್ಯಾಮ್ ನಮ್ಮ ಕಾಲದ ಮೂರು ಪ್ರಮುಖ ಪದಗಳಾಗಿವೆ ಎಂದು ಒತ್ತಿ ಹೇಳಿದರು.ನೀವು ಹೆಚ್ಚಾಗಿ ಓದುವ ಪದ ಸ್ಲ್ಯಾಮ್ ಮಮತಾ ಅಮಿತ್ ಶಾ ಅವರನ್ನು ಟೀಕಿಸಿದರು, ಅಮಿತ್ ಶಾ ಮಮತಾ ಅವರನ್ನು ಟೀಕಿಸಿದರು, ಟಿಎಂಸಿ ಕಾಂಗ್ರೆಸ್ ಅನ್ನು ಟೀಕಿಸಿತು, ಕಾಂಗ್ರೆಸ್ ಬಿಜೆಪಿಯನ್ನು ಟೀಕಿಸಿತು. ಸ್ಲ್ಯಾಮ್, ಸ್ಲ್ಯಾಮ್, ಸ್ಲ್ಯಾಮ್ ಸ್ಲ್ಯಾಮ್‌ಮಾರಾಟದ ವಸ್ತುವಾಗಿದ್ದರೆ, ಅದು ಇಂದು ವೇಗವಾಗಿ ಚಲಿಸುವ ಉತ್ಪನ್ನಗಳಲ್ಲಿ ಒಂದಾಗುತ್ತಿತ್ತು, ಎಂದು ಅವರು ಕಿಕ್ಕಿರಿದ ಪ್ರೇಕ್ಷಕರಿಗೆ ಹೇಳಿದರು, ಅವರಲ್ಲಿ ಹಲವರು ಚಪ್ಪಾಳೆ ತಟ್ಟಿ ತಮ್ಮ ಒಪ್ಪಿಗೆ ಸೂಚಿಸಿದರು. ಸೇಡು ಮತ್ತು ದ್ವೇಷ ಸೋದರಸಂಬಂಧಿಗಳು ಎಂದು ಗಾಂಧಿಯವರು ಮತ್ತಷ್ಟು ಎಚ್ಚರಿಸಿದರು, ಮತ್ತು ಸಾರ್ವಜನಿಕ ಅಭಿಪ್ರಾಯ ಮತ್ತು ಅಭಿಪ್ರಾಯ ರಚನೆಯ ರಂಗದಲ್ಲಿ ದ್ವೇಷವು ಸುಲಭವಾಗಿ ಮಾರಾಟವಾಗುವ ಸರಕಾಗಿ ಹೊರಹೊಮ್ಮಿದೆ.ಪಶ್ಚಿಮ ಬಂಗಾಳದ ಮಾಜಿ ರಾಜ್ಯಪಾಲರು ಸಾರ್ವಜನಿಕ ಅಭಿಪ್ರಾಯದ ಮಾರುಕಟ್ಟೆಯಲ್ಲಿ, ಮಾರಾಟದಲ್ಲಿರುವ ಅತಿದೊಡ್ಡ ಸರಕು ದ್ವೇಷ, ದ್ವೇಷ ಮತ್ತು ವೈರತ್ವ ಎಂದು ಹೇಳಿದರು. ಹಿಂದಿ ಪದ ಬದ್ಲಾ ಈಗ ನಾವು ಸಾಮಾನ್ಯವಾಗಿ ಕೇಳುವ ಮತ್ತೊಂದು ಪದವಾಗಿದೆ ಹಮ್ ಬದ್ಲಾ ಲೆಂಗೆ, ಬದ್ಲಾ ಲೆಂಗೆ ಎಂದು ಅವರು ಹೇಳಿದರು. ಆದರೆ ಶಬ್ದಕೋಶದ ಪ್ರಬಲ ಶೀರ್ಷಿಕೆಗಳನ್ನು ಮೀರಿ, ಸಾರ್ವಜನಿಕ ಮತ್ತು ವೈಯಕ್ತಿಕ ಭಾಷಣಗಳಲ್ಲಿ ಪ್ರಾಮಾಣಿಕತೆ, ಕ್ಷಮೆ ಮತ್ತು ಕ್ಷಮೆಯನ್ನು ಕಳೆದುಕೊಂಡಿದೆ ಎಂದು ಗಾಂಧಿಯವರು ಅಭಿಪ್ರಾಯಪಟ್ಟರು.

ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಪಾಕ್ ಸೇನೆ ದಾಳಿ

ಭಯೋತ್ಪಾದನೆ ಏರಿಕೆಯಿಂದ ಪಾಕ್‌ನಲ್ಲಿ ಮಾಡಿದ್ದುಣ್ಣೋ ಮಹಾರಾಯ ಸ್ಥಿತಿ

ಇಸ್ಲಾಮಾಬಾದ್: ವಾಯುವ್ಯ ಪಾಕಿಸ್ತಾದಲ್ಲಿ ಟಿಟಿಪಿ ಉಗ್ರರ ಮೇಲೆ ನಿರಂತರವಾಗಿ ದಾಳಿ ನಡೆಸುತ್ತಿರುವ ಪಾಕ್ ಸೇನೆ ಇತ್ತೀಚೆಗೆ ಮತ್ತೆ ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಭಯೋತ್ಪಾದಕರನ್ನು ಮಟ್ಟಹಾಕಲು ಕಾರ್ಯಚರಣೆ ನಡೆಸಿದ್ದು 13 ಮಂದಿ ಭಯೋತ್ಪಾದಕರನ್ನು ಹತ್ಯೆ ಮಾಡಿದೆ.

TTP ಉಗ್ರರ ಮೇಲೆ ಪಾಕ್ ಸೇನೆ ದಾಳಿ: ಪಾಕಿಸ್ತಾನದ ವಾಯುವ್ಯ ಭಾಗದಲ್ಲಿನ ಖೈಬರ್ ಪಖ್ತುಂಖ್ವಾ ಪ್ರದೇಶದಲ್ಲಿ ಜ.13, ಜ.14ರಂದು ರಾತ್ರಿ ಸಮಯದಲ್ಲಿ ಪಾಕ್ ಭದ್ರತಾ ಪಡೆಗಳು ಕಾರ್ಯಚರನೆ ನಡೆಸಿದ್ದು, 2 ಪ್ರತ್ಯೇಕ ಕಾರ್ಯಚರಣೆಗಳಲ್ಲಿ ತೆಹ್ರೀಕ್-ಎ-ತಾಲಿಬಾನ್ ಪಾಕಿಸ್ತಾನ್‌ಗೆ ಸೇರಿದ ಫಿತ್ನಾ ಅಲ್ ಖಿವಾರಿಜ್ ಗುಂಪಿನ 13 ಂದಿ ಉಗ್ರರನ್ನು ಹತ್ಯೆ ಮಾಡಲಾಗಿದೆ ಎಂದು ಪಾಕಿಸ್ತಾನ ಸೇನೆಯ ಮಾಧ್ಯಮ ವಿಭಾಗವಾದ ಇಂಟರ್-ಸರ್ವಿಸಸ್ ಪಬ್ಲಿಕ್ ರಿಲೇಶನ್ಸ್ ಈ ಮಾಹಿತಿಯನ್ನು ಪ್ರಕಟಿಸಿದೆ.

- ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಪಾಕ್ ಸೇನಾ ಕಾರ್ಯಚರನೆಯಲ್ಲಿ 13 ಉಗ್ರರ ಹತ್ಯೆ
- ಸೇನಾ ಹಿಡಿತವಿದ್ದರೂ ದಿನದಿಂದ ದಿನಕ್ಕೆ ಪಾಕ್‌ನಲ್ಲಿ ಹೆಚ್ಚುತ್ತಿದೆ ಭಯೋತ್ಪಾದಕ ಘಟನೆಗಳು
- ಭಯೋತ್ಪಾದನೆಯ ಪ್ರಾಯೋಜಕ ಪಾಕ್‌ಗೆ ತನ್ನದೇ ಔಷಧಿಯ ರುಚಿ ತೋರಿಸುತ್ತಿರುವ ಪಾಕ್ ಭಯೋತ್ಪಾದಕ ಸಂಘಟನೆಗಳು

ISPR ಹೇಳಿಕೆ ಪ್ರಕಾರ, ವಾಯುವ್ಯ ಪ್ರಾಂತ್ಯದ ಬನ್ನೂ ಜಿಲ್ಲೆಯಲ್ಲಿ ಗುಪ್ತಚರ ಮಾಹಿತಿ ಆಧರಿಸಿ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ 8 ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದ್ದು, ಇದರ ಬೆನ್ನಲ್ಲೇ, ಕುರ್ರಂ ಜಿಲ್ಲೆಯಲ್ಲಿ ನಡೆದ ಮತ್ತೊಂದು ಕಾರ್ಯಾಚರಣೆಯಲ್ಲಿ 5 ಮಂದಿ ಭಯೋತ್ಪಾದಕರನ್ನು ಹೊಡೆದುರುಳಿಸಲಾಗಿದೆ. ಹೀಗೆ ಎರಡು ಪ್ರತ್ಯೇಕ ಕಾರ್ಯಚರಣೆಗಳಲ್ಲಿ ಒಟ್ಟು 13 ಮಂದಿಯನ್ನು ಹತಗೊಳಿಸಲಾಗಿದೆ. ಈ ಪ್ರದೇಶಗಳಲ್ಲಿ ಯಾವುದೇ ಇತರ ಭಯೋತ್ಪಾದಕರ ಸುಳಿವು ಸಿಗದಂತೆ ಮಾಡಲು ಕಾರ್ಯಚರಣೆ ಅನ್ನು ಮುಂದುವರೆಸಲಾಗಿದೆ ಎಂದು ಹೇಳಿದೆ. ಇತ್ತೀಚಿನ ಕ್ರಮಗಳು ಈ ವಾರದ ಆರಂಭದಲ್ಲಿ ಬಲೂಚಿಸ್ತಾನದ ಕಲಾತ್ ಜಿಲ್ಲೆಯಲ್ಲಿ ನಡೆದ ಕಾರ್ಯಾಚರಣೆಯನ್ನು ಮುಂದುವರೆದ ಭಾಗವಾಗಿದ್ದು, ಆ ಕಾರ್ಯಾಚರಣೆಯಲ್ಲಿ 4 ಜನ ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿತ್ತು.

ಪಾಕ್‌ನಲ್ಲಿ ಭಯೋತ್ಪಾದಕ ಘಟನೆಗಳ ಹೆಚ್ಚಳ: ಭಯೋತ್ಪಾಕದನೆ ಪ್ರಾಯೋಜಕ ಪಾಕಿಸ್ತಾನದಲ್ಲಿ ಸೇನೆಯ ಒತ್ತಡ ಹೆಚ್ಚುತ್ತಿದ್ದರೂ ಸಹ ಭಯೋತ್ಪಾದಕರ ಬಲ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದ್ದು, ತಮ್ಮ ಔಷಧಿಯ ರುಚಿಯನ್ನು ತಾವೇ ಅನುಭವಿಸುವಂತಹ ಪರಿಸ್ಥಿತಿಗೆ ತಲುಪಿದ್ದಾರೆ. ಪಾಕ್ ಇನ್‌ಸ್ಟಿಟ್ಯೂಟ್ ಫಾರ್ ಪೀಸ್ ಸ್ಟಡೀಸ್ ಇತ್ತೀಚೆಗೆ ಬಿಡುಗಡೆ ಮಾಡಿದ ವರದಿಯ ಪ್ರಕಾರ, 2025ರಲ್ಲಿ ಪಾಕಿಸ್ತಾನದಲ್ಲಿ ಭಯೋತ್ಪಾದಕ ದಾಳಿಗಳು ಶೇ. 34 ರಷ್ಟು ಹೆಚ್ಚಾಗಿವೆ.

ಭಯೋತ್ಪಾದನೆಗೆ ಸಂಬಂಧಿಸಿದ ಸಾವು-ನೋವುಗಳು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡಾ 21 ರಷ್ಟು ಏರಿಕೆಯಾಗಿವೆ. ಕಳೆದ ವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ್ದ ISPR ನಿರ್ದೇಶಕ ಜನರಲ್ ಅಹ್ಮದ್ ಷರೀಫ್‌ಚೌಧರಿ 2025ರಲ್ಲಿ ಮಾತ್ರ ಪಾಕಿಸ್ತಾನದ ಕಾನೂನು ಜಾರಿ ಸಂಸ್ಥೆಗಳು 75,175 ಗುಪ್ತಚರ-ಆಧಾರಿತ ಕಾರ್ಯಾಚರಣೆಗಳನ್ನು ನಡೆಸಿವೆ. ಇವುಗಳಲ್ಲಿ 14,658 ಕಾರ್ಯಾಚರಣೆಗಳು ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ, 58,778 ಬಲೂಚಿಸ್ತಾನದಲ್ಲಿ, 1,739 ದೇಶದ ಇತರ ಭಾಗಗಳಲ್ಲಿ ನಡೆದಿವೆ ಎಂದು ವಿವರಿಸಿದರು. ಅಲ್ಲದೆ, ಪಾಕಿಸ್ತಾನದಲ್ಲಿ ಕಳೆದ ವರ್ಷ 5,397 ಭಯೋತ್ಪಾದಕ ಘಟನೆಗಳನ್ನು ದಾಖಲಾಗಿದ್ದು, ಇದರಲ್ಲಿ ಶೇ. 71 ರಷ್ಟು ಪ್ರಕರಣಗಳು ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಸಂಭವಿಸಿದರೆ, ಬಲೂಚಿಸ್ತಾನದಲ್ಲಿ ಶೇ. 29 ರಷ್ಟು ದಾಖಲಾಗಿವೆ. ಪಾಕಿಸ್ತಾನವು ತನ್ನ ಪಶ್ಚಿಮ ಪ್ರದೇಶಗಳಲ್ಲಿ ನಿರಂತರ ಭಯೋತ್ಪಾದಕ ಬೆದರಿಕೆಗಳನ್ನು ಎದುರಿಸುತ್ತಿರುವ ಕಾರಣ, ಕಾರ್ಯಾಚರಣೆಗಳು ಮುಂದುವರಿಯಲಿವೆ ಎಂದು ಸೇನೆ ತಿಳಿಸಿದೆ ಎಂದು ಚೌಧರಿ ಹೇಳಿದ್ದರು. ಏನೆ ಆಗಲಿ ಬೇರೆ ದೇಶಗಳನ್ನು ಹಾಳು ಮಾಡಲು ಪಾಕಿಸ್ತಾನ ಬಳಸುತ್ತಿರುವ ಭಯೋತ್ಪಾದನೆಯ ಅಸ್ತ್ರವೀಗ ತನ್ನದೇ ಕೈತನ್ನು ಸುಡುತ್ತಿದ್ದು, ಭಯೋತ್ಪಾದನೆ ಸಂಘಟನೆಗಳ ಹೆಚ್ಚಳದ ಜೊತೆಜೊತೆಗೆ ಭಯೋತ್ಪಾದನೆಯ ಘಟನೆಗಳು ಹೆಚ್ಚಾಗುತ್ತಿದ್ದು, ಸದ್ಯ ಪಾಕಿಸ್ತಾನದ ಪರಿಸ್ಥಿತಿ ಮಾತ್ರ ಮಾಡಿದ್ದುಣ್ಣೋ ಮಹಾರಾಯ ಎಂಬಂತಾಗಿದೆ.

ತನ್ನದೇ ಔಷಧಿಯ ರುಚಿ

ಪಾಕಿಸ್ತಾನ ಸೇನೆಯು ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ 13 ಟಿಟಿಪಿ ಉಗ್ರರನ್ನು ಹತ್ಯೆ ಮಾಡಿದೆ. ಬನ್ನೂ, ಕುರ್ರಂ ಜಿಲ್ಲೆಗಳಲ್ಲಿ ನಡೆದ ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಈ ಯಶಸ್ಸು ಸಾಧಿಸಲಾಗಿದೆ. ಪಾಕಿಸ್ತಾನವು ಭಯೋತ್ಪಾದನೆ ವಿರುದ್ಧದ ತನ್ನ ಕಾರ್ಯಾಚರಣೆಗಳನ್ನು ಮುಂದುವರೆಸಿದೆ, ಆದರೆ ದೇಶದಲ್ಲಿ ಭಯೋತ್ಪಾದಕ ಘಟನೆಗಳು ಹೆಚ್ಚುತ್ತಿದ್ದು, ಪಾಕ್‌ಗೆ ತನ್ನದೇ ಔಷಧಿಯ ರುಚಿ ಸಿಗುತ್ತಿದೆ.

13 TTP ಉಗ್ರರ ಬಲಿ

ಜಲ್ಲಿಕಟ್ಟು ಕ್ರೀಡೆಗೆ ಚಾಲನೆ ನೀಡಿದ ಉದಯನಿಧಿ

ಮಧುರೈ: ತಮಿಳುನಾಡು ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಇಂದು ಮಧುರೈ ಬಳಿಯ ಪಳಮೇಡುವಿನ ಮಂಜಮಲೈ ನದಿಪಾತ್ರದಲ್ಲಿ ಜಲ್ಲಿಕಟ್ಟು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಅವನಿಯಪುರಂನಲ್ಲಿ ನಡೆದ ಮೂರು ಪ್ರಮುಖ ಪೊಂಗಲ್ ಕಾರ್ಯಕ್ರಮಗಳಲ್ಲಿ ಎರಡನೆಯದು ಪಳಮೇಡುವಿನಲ್ಲಿ ಪ್ರಾರಂಭವಾದಾಗ, ಮಧುರೈನಲ್ಲಿ ಜಲ್ಲಿಕಟ್ಟು ಕ್ರೀಡೆಯು ಉತ್ತುಂಗಕ್ಕೇರಿತು. ಇಂದಿನ ಕಾರ್ಯಕ್ರಮದಲ್ಲಿ 1,000 ಕ್ಕೂ ಹೆಚ್ಚು ಎತ್ತುಗಳು ಮತ್ತು ಸುಮಾರು 500 ಎತ್ತು ಪಳಗಿಸುವವರು ಭಾಗವಹಿಸಿದ್ದರು.

2,000 ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯ ಬೃಹತ್ ನಿಯೋಜನೆಯು ಜನಸಂದಣಿಯನ್ನು ನಿರ್ವಹಿಸುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಇಂದಿನ ಕಾರ್ಯಕ್ರಮದಲ್ಲಿ ಎತ್ತು ಪಳಗಿಸುವವರು ಮತ್ತು ಅತ್ಯುತ್ತಮ ಬುಲ್‌ನ ಮಾಲೀಕರು ಡಿಎಂಕೆ ನಾಯಕತ್ವದ ಪ್ರಾಯೋಜಕತ್ವದ ಕ್ರಮವಾಗಿ ಕಾರು ಮತ್ತು ಟ್ರ್ಯಾಕ್ಟರ್ ಅನ್ನು ಗೆಲ್ಲಲಿದ್ದಾರೆ. ಜನವರಿ 15 ರಂದು ಖುತುವಿನ ಆರಂಭಿಕ ಪಂದ್ಯವು ವಲಯಂಕುಳಂನ ಬಾಲಮುರುಗನ್ ಚಾಂಪಿಯನ್ ಆಗಿ ಹೊರಹೊಮ್ಮುವುದರೊಂದಿಗೆ ಮುಕ್ತಾಯವಾಯಿತು. ಬಾಲಮುರುಗನ್ ಮುಖ್ಯಮಂತ್ರಿ ಪ್ರಶಸ್ತಿಯನ್ನು ಗೆಲ್ಲಲು 22 ಎತ್ತುಗಳನ್ನು ಪಳಗಿಸಿದರು. ಅವನಿಯಪುರಂನ ಜಿ ಆರ್ ಕಾರ್ತಿಕ್ 17 ಹೋರಿಗಳನ್ನು ಪಳಗಿಸುವ ಮೂಲಕ ಎರಡನೇ ಸ್ಥಾನ ಪಡೆದರು ಮತ್ತು ಮೋಟಾರ್ ಸೈಕಲ್ ಗೆದ್ದರು. ಎಲ್ಲಾ ಹೋರಿಗಳನ್ನು ಪಳಗಿಸುವವರಿಂದ ಮೊಂಡುತನದಿಂದ ತಪ್ಪಿಸಿಕೊಂಡ ನಂತರ ವಿರುಮಂಡಿ ಬ್ರದರ್ಸ್‌ಗೆ ಸೇರಿದ ಹೋರಿಯನ್ನು ಅತ್ಯುತ್ತಮವೆಂದು ಘೋಷಿಸಲಾಯಿತು. ಅವರಿಗೆ ಟ್ರ್ಯಾಕ್ಟರ್ ನೀಡಲಾಯಿತು. ಮೊದಲ ದಿನದ ಈವೆಂಟ್ ಅನ್ನು ಮೇಲ್ವಿಚಾರಣೆ ಮಾಡುವ ವೈದ್ಯಕೀಯ ತಂಡಗಳು (27 ಹೋರಿಗಳು ಮತ್ತು 9 ಪ್ರೇಕ್ಷಕರು ಸೇರಿದಂತೆ) 57 ಜನರು ಗಾಯಗೊಂಡಿದ್ದಾರೆ ಎಂದು ವರದಿ ಮಾಡಿದೆ. ಹನ್ನೊಂದು ವ್ಯಕ್ತಿಗಳನ್ನು ವಿಶೇಷ ಆರೈಕೆಗಾಗಿ ಮಧುರೈ ಸರ್ಕಾರಿ ರಾಜಾಜಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಜಲ್ಲಿಕಟ್ಟುವಿನ ಗ್ರ್ಯಾಂಡ್ ಫಿನಾಲೆ ಜನವರಿ 17 ರಂದು ಅಲಂಗನಲ್ಲೂರಿನಲ್ಲಿ ನಡೆಯಲಿದ್ದು, ಮುಖ್ಯಮಂತ್ರಿ ಎಂ ಕೆ ಸ್ಟಾಲಿನ್ ಉದ್ಘಾಟಿಸಲಿದ್ದಾರೆ.ಕಾರ್ಯಕ್ರಮದ ಸಿದ್ಧತೆಗಳ ಭಾಗವಾಗಿ, ವಾಡಿವಾಸಲ್ (ಪ್ರವೇಶ ಬಿಂದು) ಬಲಪಡಿಸಲಾಗಿದೆ ಮತ್ತು ಗಮನಾರ್ಹ ಸಂಖ್ಯೆಯ ಅಂತರರಾಷ್ಟ್ರೀಯ ಪ್ರವಾಸಿಗರಿಗೆ ಅವಕಾಶ ಕಲ್ಪಿಸಲು ವಿಶೇಷ ಗ್ಯಾಲರಿಗಳನ್ನು ಸ್ಥಾಪಿಸಲಾಗಿದೆ.

ಅಯ್ಯಪ್ಪ ಚಿನ್ನ ಕಳುವು ಆರೋಪಿ ಶಂಕರ ದಾಸ್ ಒಬ್ಬ ಆದರ್ಶ ಕಮ್ಯುನಿಸ್ಟ್

ತಿರುವನಂತಪುರಂ: ಶಬರಿಮಲೆ ಚಿನ್ನ ನಷ್ಟ ಪ್ರಕರಣಗಳಲ್ಲಿ ಬಂಧಿಸಲ್ಪಟ್ಟ ಟಿಡಿಬಿ ಮಾಜಿ ಸದಸ್ಯ ಕೆ ಪಿ ಶಂಕರ ದಾಸ್ ಒಬ್ಬ ಆದರ್ಶ ಕಮ್ಯುನಿಸ್ಟ್ ಎಂದು ಸಿಪಿಐ ರಾಜ್ಯ ಕಾರ್ಯದರ್ಶಿ ಬಿನೋಯ್ ವಿಶ್ವಂ ಹೇಳಿದ್ದಾರೆ. ದಾಸ್ ಉದ್ದೇಶಪೂರ್ವಕವಾಗಿ ಯಾವುದೇ ತಪ್ಪು ಮಾಡುವುದಿಲ್ಲ ಎಂದು ಪಕ್ಷದಲ್ಲಿರುವ ಎಲ್ಲರಿಗೂ ತಿಳಿದಿದೆ ಎಂದು ವಿಶ್ವಂ ಸುದ್ದಿಗಾರರಿಗೆ ತಿಳಿಸಿದರು. ಅವರು ಆದರ್ಶ ಕಮ್ಯುನಿಸ್ಟ್, ಆದರೆ, ಅವರು ಯಾವುದೇ ಅಜಾಗರೂಕ ತಪ್ಪು ಮಾಡಿದ್ದಾರೆಯೇ ಎಂದು ನಮಗೆ ತಿಳಿದಿಲ್ಲ. ಆದ್ದರಿಂದ, ತನಿಖೆ ಮುಂದುವರಿಯಲಿ ಎಂದು ಅವರು ಹೇಳಿದರು.

ಅದೇ ಸಮಯದಲ್ಲಿ, ತನಿಖೆಯ ಸಮಯದಲ್ಲಿ ಯಾರಾದರೂ ತಪ್ಪು ಮಾಡಿದ್ದಾರೆಂದು ಕಂಡುಬಂದರೆ ಅವರನ್ನು ಸಿಪಿಐ, ಎಲ್‌ಡಿಎಫ್ ರಕ್ಷಿಸುವುದಿಲ್ಲ ಎಂದು ಅವರು ಹೇಳಿದರು. ದ್ವಾರಪಾಲಕ ವಿಗ್ರಹಗಳು, ಶ್ರೀಕೋವಿಲ್ ಬಾಗಿಲು ಚೌಕಟ್ಟುಗಳಿಂದ ಚಿನ್ನ ಕಳೆದುಹೋದ ಎರಡು ಪ್ರಕರಣಗಳಲ್ಲಿ ದಾಸ್ ಅವರನ್ನು ಇಲ್ಲಿನ ಖಾಸಗಿ ಆಸ್ಪತ್ರೆಯಿಂದ ಬಂಧಿಸಲಾಯಿತು.ಕೇರಳ ಹೈಕೋರ್ಟ್ ನೇಮಿಸಿದ ವಿಶೇಷ ತನಿಖಾ ತಂಡ ತನಿಖೆ ನಡೆಸುತ್ತಿದೆ.ಅವರು ಪ್ರಸ್ತುತ ಆಸ್ಪತ್ರೆಯಲ್ಲಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಎಸ್‌ಐಟಿ ಇಬ್ಬರು ಮಾಜಿ ಟಿಡಿಬಿ ಅಧ್ಯಕ್ಷರು ಸೇರಿದಂತೆ 12 ಜನರನ್ನು ಬಂಧಿಸಿದೆ.

ಮತದಾರರ ಹೆಸರು ನಾಪತ್ತೆ : ಚುನಾವಣಾ ಸೋಲಿನ ಬೆನ್ನಲ್ಲೇ ರಾವತ್ ರೋಧನೆ

ಮುಂಬೈ: ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಮತ ಚಲಾಯಿಸಿದ ಸಾವಿರಾರು ಜನರ ಹೆಸರುಗಳು ಕಾಣೆಯಾಗಿದ್ದು ಇವಿಎಂ ಯಂತ್ರ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಉದ್ಧವ್ ಶಿವಸೇನೆ ಬಣದ ನಾಯಕ ಸಂಜಯ್ ರಾವತ್ ಆರೋಪ ಮಾಡಿದ್ದಾರೆ. ಬೃಹನ್‌ಮುಂಬೈ ಮಹಾನಗರಪಾಲಿಕೆ ಚುನಾವಣೆಯ ಮತ ಎಣಿಕೆ ನಡೆಯುತ್ತಿರುವ ಸಮಯದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಮುಂಬೈನಂತಹ ನಗರದಲ್ಲಿ ನಡೆಯುತ್ತಿರುವ ಮತದಾನದ ಮಾದರಿ ಗಂಭೀರ ವಿಷಯವಾಗಿದೆ ಎಂದಿದ್ದಾರೆ.

ವಿಧಾನಸಭಾ ಚುನಾವಣೆಯಲ್ಲಿ ಶಿವಸೇನೆ, ಎಂಎನ್‌ಎಸ್, ಕಾಂಗ್ರೆಸ್‌ಗೆ ಮತ ಚಲಾಯಿಸಿದ ಸಾವಿರಾರು ಜನರ ಹೆಸರುಗಳು ಕಾಣೆಯಾಗಿದೆ ಎಂದು ಅವರು ಇದೇ ಸಂದರ್ಭದಲ್ಲಿ ದೂರಿದರು. ಇವಿಎಂ ಯಂತ್ರ ಸರಿಯಾಗಿ ಕೆಲಸ ಮಾಡುವುದಿಲ್ಲ. ಚುನಾವಣಾ ಆಯೋಗ ನಮ್ಮ ಮಾತನ್ನು ಕೇಳಲು ಸಿದ್ಧವಾಗಿಲ್ಲ. ನಿನ್ನೆ ಹಿರಿಯ ಬಿಜೆಪಿ ನಾಯಕರು ಮತ್ತು ಚುನಾವಣಾ ಆಯೋಗದ ಸಿಬ್ಬಂದಿ ನಡುವೆ ಸಭೆ ನಡೆದಿದೆ. ನೀತಿ ಸಂಹಿತೆ ಇನ್ನೂ ಜಾರಿಯಲ್ಲಿರುವಾಗ ಈ ಸಭೆ ಹೇಗೆ ನಡೆದಿದೆ ಎಂದು ಅವರು ಪ್ರಶ್ನೆ ಮಾಡಿದ್ದಾರೆ. ಚುನಾವಣೆ ಪೂರ್ಣಗೊಳ್ಳುವ ಮೊದಲೇ ಚುನಾವಣೋತ್ತರ ಸಮೀಕ್ಷೆಗಳು ಪ್ರಕಟವಾಗಿವೆ. ಬಿಜೆಪಿ ಆಗಲೇ ತನ್ನ ವಿಜಯವನ್ನು ಆಚರಿಸಲು ಪ್ರಾರಂಭಿಸಿದು ಏಕೆ ಎಂದು ರಾವತ್ ಕಿಡಿಕಾರಿದರು.

ಗಡಿಯಾಚೆಗಿನ ವಿರೋಧಿ ಶಕ್ತಿ ಎದುರಿಸಲು ಕಾಶೀರ ಸಿದ್ಧ

ಜಮ್ಮು: ಗಡಿಯಾಚೆಯಿಂದ ಬರುವ ಶತ್ರು ಪಡೆಗಳು ಸೇರಿದಂತೆ ವಿರೋಧಿ ಶಕ್ತಿಗಳು ಜಮ್ಮು, ಕಾಶ್ಮೀರದಲ್ಲಿ ತೊಂದರೆ ಸೃಷ್ಟಿಸಲು ಪ್ರಯತ್ನಿಸಿದರೆ ಅದನ್ನು ಎದುರಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜಮ್ಮು, ಕಾಶ್ಮೀರದ ಮುಖ್ಯ ಕಾರ್ಯದರ್ಶಿ ಅಟಲ್ ಡಲ್ಲೂ ಹೇಳಿದ್ದಾರೆ. ಒಳನುಸುಳುವಿಕೆ ಪ್ರಯತ್ನಗಳಿಂದ ಹಿಡಿದು ಹವಾಮಾನ ಸಂಬಂಧಿ

15 ಕೋಟಿ ರೂ. ಸಂಭಾವನೆ ಬಿಟ್ಟ ಕಾರ್ತಿಕ್

ಕಾರ್ತಿಕ್ ಆರ್ಯನ್ ಅಭಿನಯದ ಹೊಸ ಸಿನಿಮಾ ತು ಮೇರಿ ಮೇ ತೇರ ಮೇ ತೇರ ತು ಮೇರಿ ಸೋತಿದೆ. ಈ ಸಿನಿಮಾಗೆ ಬಂಡವಾಳ ಹೂಡಿದ ಕರಣ್ ಜೋಹರ್ ಅವರಿಗೆ ಬಹುಕೋಟಿ ರೂ. ನಷ್ಟ ಆಗಿದೆ. ಆದ್ದರಿಂದ ಕಾರ್ತಿಕ್ ಆರ್ಯನ್ 15 ಕೋಟಿ ರೂಪಾಯಿ ಸಂಬಳ ಬಿಟ್ಟುಕೊಟ್ಟಿದ್ದಾರೆ ಎಂದು ವರದಿ ಆಗಿದೆ.

ನಟ ಕಾರ್ತಿಕ್ ಆರ್ಯನ್ ಅವರು ಬ್ಯಾಕ್ ಟು ಬ್ಯಾಕ್ ಸಿನಿಮಾಗಳನ್ನು ಮಾಡುತ್ತಿದ್ದಾರೆ. 2025ರ ಡಿಸೆಂಬರ್‌ನಲ್ಲಿ ಅವರು ನಟಿಸಿದ ತು ಮೇರಿ ಮೇ ತೇರ ಮೇ ತೇರ ತು ಮೇರಿ ಸಿನಿಮಾ ಬಿಡುಗಡೆ ಆಯಿತು. ಕಾರ್ತಿಕ್ ಆರ್ಯನ್ ಅವರಿಗೆ ಜೋಡಿಯಾಗಿ ಅನನ್ಯಾ ಪಾಂಡೆ ಅವರು ಅಭಿನಯಿಸಿದ್ದರು. ಬಾಕ್ಸ್ ಆಫೀಸ್‌ನಲ್ಲಿ ಈ ಸಿನಿಮಾ ನಿರೀಕ್ಷಿತ ಪ್ರಮಾಣದ ಕಲೆಕ್ಷನ್ ಮಾಡಲಿಲ್ಲ. ಆದರಿಂದಾಗಿ ನಿರ್ಮಾಪಕರಿಗೆ ನಷ್ಟ ಆಗಿದೆ. ಹಾಗಾಗಿ ತಮ್ಮ ಪಾಲಿನ 15 ಕೋಟಿ ರೂಪಾಯಿ ಸಂಭಾವನೆಯನ್ನು ಬಿಟ್ಟುಕೊಡಲು ಕಾರ್ತಿಕ್ ಆರ್ಯನ್ ಅವರು ನಿರ್ಧರಿಸಿದ್ದಾರೆ ಎನ್ನಲಾಗಿದೆ. ಧರ್ಮ ಪ್ರೊಡಕ್ಷನ್ಸ್ ಮೂಲಕ ಕರಣ್ ಜೋಹರ್ ಅವರು ತು ಮೇರಿ ಮೇ ತೇರ ಮೇ ತೇರ ತು ಮೇರಿ ಸಿನಿಮಾವನ್ನು ನಿರ್ಮಿಸಿದ್ದಾರೆ.

ಕಾರ್ತಿಕ್ ಆರ್ಯನ್ ಮತ್ತು ಅನನ್ಯಾ ಪಾಂಡೆ ಜೊತೆಯಲ್ಲಿ ನೀನಾ ಗುಪ್ತಾ, ಜಾಕಿ ಶ್ರಾಫ್ ಕೂಡ ಪ್ರಮುಖ ಪಾತ್ರಗಳನ್ನು ಮಾಡಿದ್ದಾರೆ. ಡಿಸೆಂಬರ್ 25ರಂದು ರಿಲೀಸ್ ಆದ ಈ ಚಿತ್ರಕ್ಕೆ ಪ್ರೇಕ್ಷಕರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ಅಂದಾಜು 90 ಕೋಟಿ ರೂಪಾಯಿ ಬಜೆಟ್‌ನಲ್ಲಿ 'ತು ಮೇರಿ ಮೇ ತೇರ ಮೇ ತೇರ ತು ಮೇರಿ' ಸಿನಿಮಾ ನಿರ್ಮಾಣ ಆಗಿತ್ತು. ಆದರೆ ಬಾಕ್ಸ್ ಆಫೀಸ್‌ನಲ್ಲಿ ಈ ಚಿತ್ರ ಗಳಿಸಿದ್ದು 30 ಕೋಟಿ ರೂಪಾಯಿ ಮಾತ್ರ. ಇದರಿಂದಾಗಿ ನಿರ್ಮಾಪಕ ಕರಣ್ ಜೋಹರ್ ಅವರು ನಷ್ಟ ಅನುಭವಿಸಿದ್ದಾರೆ. ನಿರ್ಮಾಪಕರ ನಷ್ಟ ಕಡಿಮೆ ಮಾಡಲು ಕಾರ್ತಿಕ್ ಆರ್ಯನ್ ಅವರು 15 ಕೋಟಿ ರೂಪಾಯಿ ಸಂಭಾವನೆ ಬಿಟ್ಟುಕೊಟ್ಟಿದ್ದಾರೆ ಎಂದು ವರದಿ ಆಗಿದೆ.

2021ರಲ್ಲಿ ಕಾರ್ತಿಕ್ ಆರ್ಯನ್ ಮತ್ತು ಕರಣ್ ಜೋಹರ್ ನಡುವೆ ಮನಸ್ತಾಪ ಉಂಟಾಗಿತ್ತು. ಆದರೆ 2023ರ ವೇಳೆಗೆ ಅವರ ನಡುವಿನ ಮುನಿಸು ಕಡಿಮೆ ಆಯಿತು. ಆ ಬಳಿಕ ಅವರು ಮತ್ತೆ ಜೊತೆಯಾಗಿ ಸಿನಿಮಾ ಮಾಡಲು ಆರಂಭಿಸಿದರು. ಆದರೆ 'ತು ಮೇರಿ ಮೇ ತೇರ ಮೇ ತೇರ ತು ಮೇರಿ' ಚಿತ್ರದ ಸೋಲಿನಿಂದಾಗಿ ಅವರಿಬ್ಬರ ನಡುವೆ ಪುನಃ ಕಿರಿಕ್ ಆರಂಭ ಆಗಿದೆ ಎಂಬ ಗಾಸಿಪ್ ಹಬ್ಬಿತ್ತು. ಆ ವದಂತಿಯನ್ನು ಅವರ ಆಪ್ತ ಮೂಲಗಳು ತಳ್ಳಿಹಾಕಿವೆ.



ಬಂಡವಾಳ ಹೂಡಿದ್ದ ಕರಣ್

ಮಾಡೋದು ಹಿಂದಿ ಸಿನಿಮಾ, ಆದ್ರೆ ಮರಾಠಿ ಮೇಲೆ ಪ್ರೀತಿ



ಹಿಂದಿಯಲ್ಲಿ ಮಾತನಾಡಿ ಎಂದಿದ್ದಕ್ಕೆ ಅಮಿರ್ ಖಾನ್ ಅವರು 'ಇದು ಮಹಾರಾಷ್ಟ್ರ' ಎಂದು ಹೇಳಿದ್ದಾರೆ. ಈ ಸಂದರ್ಭದ ವಿಡಿಯೋ ಸಖತ್ ವೈರಲ್ ಆಗಿದೆ. ನೆಟ್ಟಿಗರು ಪರ ಹಾಗೂ ವಿರೋಧದ ಕಮೆಂಟ್ ಮಾಡುತ್ತಿದ್ದಾರೆ. ಆಮಿರ್ ಖಾನ್ ಅವರ ಹೇಳಿಕೆಯಿಂದ ಹಿಂದಿ ವರ್ಸಸ್ ಮರಾಠಿ ಎಂಬ ಚರ್ಚೆಗೆ ಕಿಡಿ ಹೊತ್ತಿಕೊಂಡಂತೆ ಆಗಿದೆ.

ಬಾಲಿವುಡ್ ನಟ ಆಮಿರ್ ಖಾನ್ ಅವರ ಹೆಸರು ಈಗ ಹೊಸ ವಿವಾದದಲ್ಲಿ ಸಿಲುಕಿಕೊಂಡಿದೆ. ದೇಶದ ಹಲವು ಕಡೆಗಳಲ್ಲಿ ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳ ನಡುವೆ ಘರ್ಷಣೆ ನಡೆಯುತ್ತಿದೆ. ಮಹಾರಾಷ್ಟ್ರ ಕೂಡ ಇದಕ್ಕೆ ಹೊರತಾಗಿಲ್ಲ. ಮರಾಠಿ ಮಾತನಾಡಿಲ್ಲ ಎಂದು ಕೆಲವರು ಗಲಾಟೆ ಮಾಡಿದ ಪ್ರಕರಣಗಳು ಹಲವು ಬಾರಿ ದಾಖಲಾಗಿವೆ. ಈಗ ಆಮಿರ್ ಖಾನ್ ಅವರ ನೀಡಿದ ಒಂದು ಹೇಳಿಕೆ ವೈರಲ್ ಆಗಿದೆ. ಅದರಿಂದಾಗಿ ಮತ್ತೆ ಮರಾಠಿ ವರ್ಸಸ್ ಹಿಂದಿ ಚರ್ಚೆಗೆ ಕಿಡಿ ಹೊತ್ತಿಸಿದಂತಾಗಿದೆ.

ಮುಂಬೈ ಕಾರ್ಪೋರೇಷನ್ ಚುನಾವಣೆಯಲ್ಲಿ ಆಮಿರ್ ಖಾನ್ ಅವರು ಮತ ಚಲಾಯಿಸಿದರು. ಮತ ಹಾಕಿದ ಬಳಿಕ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು. ಮೊದಲು ಮರಾಠಿಯಲ್ಲಿ ಮಾತನಾಡಿದರು. ಬಳಿಕ ಹಿಂದಿಯಲ್ಲೂ ಹೇಳಿಕೆ ನೀಡುವಂತೆ ಮಾಧ್ಯಮದವರು ಮನವಿ ಮಾಡಿದರು. ಆದರೆ ಆಮಿರ್ ಖಾನ್ ಅವರು ಹಿಂದಿಯಲ್ಲಿ ಹೇಳಬೇಕಾ ಇದು ಮಹಾರಾಷ್ಟ್ರ ಎಂದು ಹೇಳಿದರು. ನಿಮ್ಮ ಹೇಳಿಕೆ ದೆಹಲಿಯಲ್ಲಿ ಕೂಡ ಪ್ರಸಾರ ಆಗುತ್ತದೆ' ಎಂದು ಮಾಧ್ಯಮದವರು ಹೇಳಿದ ಬಳಿಕ ಆಮಿರ್ ಖಾನ್ ಅವರು ಹಿಂದಿಯಲ್ಲಿ ಮಾತನಾಡಿದರು. 'ಓಹ್ ದೆಹಲಿಯಲ್ಲೂ ಪ್ರಚಾರ ಆಗುತ್ತಾ ಮತದಾನಕ್ಕೆ ಬಹಳ ಚೆನ್ನಾಗಿ ವ್ಯವಸ್ಥೆ ಮಾಡಿದ್ದಾರೆ.

ಸಂಪ್ರದಾಯ ಮುರಿದ ಸಾಯಿ ಪಲ್ಲವಿ

ನಟಿ ಸಾಯಿ ಪಲ್ಲವಿ ದಕ್ಷಿಣ ಭಾರತದ ಸ್ಟಾರ್ ನಟಿ. ಇತ್ತೀಚೆಗೆ ಅವರು ಬಾಲಿವುಡ್‌ಗೂ ಪದಾರ್ಪಣೆ ಮಾಡಿದ್ದಾರೆ. 'ರಾಮಾಯಣ' ಸಿನಿಮಾಕ್ಕೆ ಮುಂಚೆ ಅವರು ಆಮಿರ್ ಖಾನ್ ಪುತ್ರನ ಸಿನಿಮಾನಲ್ಲಿ ನಟಿಸಿದ್ದರು, ಅದರ ಟೀಸರ್ ಇದೀಗ ಬಿಡುಗಡೆ ಆಗಿದೆ. ಅಂದಹಾಗೆ ತಮ್ಮ ಮೊದಲ ಬಾಲಿವುಡ್ ಸಿನಿಮಾನಲ್ಲಿ ತಾವೇ ಪಾಲಿಸಿಕೊಂಡು ಬಂದಿದ್ದ ಸಂಪ್ರದಾಯ ಮುರಿದಿದ್ದಾರೆ ನಟಿ. ನಟಿ ಸಾಯಿ ಪಲ್ಲವಿ ದಕ್ಷಿಣದ ಸ್ಟಾರ್ ನಟಿ. ತಮ್ಮ ಅದ್ಭುತ ನಟನೆ, ನೃತ್ಯ ಮತ್ತು ಸೌಂದರ್ಯದಿಂದ ಕೋಟ್ಯಂತರ ಅಭಿಮಾನಿಗಳನ್ನು ಗಳಿಸಿದ್ದಾರೆ. ಸಾಯಿ ಪಲ್ಲವಿ ತಮ್ಮ ಸಿನಿಮಾಗಳಿಂದ ಮಾತ್ರವಲ್ಲ ತಮ್ಮ ವ್ಯಕ್ತಿತ್ವದಿಂದಲೂ ಗಮನ ಸೆಳೆಯುತ್ತಾರೆ. ಇತರೆ ಸಮಕಾಲೀನ ನಟಿಯರಂತೆ ಗ್ಲಾಮರಸ್ ಮಾತ್ರ, ಮರ ಸುತ್ತುವ ಪಾತ್ರಗಳಲ್ಲಿ ಮಾತ್ರ ನಟಿಸದೆ ಸಮಾಜಕ್ಕೆ ಸಂದೇಶ ನೀಡುವ, ನಟನೆಗೆ ಒತ್ತು ಇರುವ ಪಾತ್ರಗಳನ್ನು ಮಾತ್ರವೇ ಆಯ್ಕೆ ಮಾಡಿಕೊಳ್ಳುತ್ತಾರೆ.

ಇದೀಗ ಸಾಯಿ ಪಲ್ಲವಿ ಮೊದಲ ಬಾರಿ ಬಾಲಿವುಡ್‌ಗೆ ಕಾಲಿಟ್ಟಿದ್ದು, ಮೊದಲ ಹೆಜ್ಜೆಯಲ್ಲೇ ಪ್ರೇಕ್ಷಕರಿಗೆ ಮೋಡಿ ಮಾಡಿದ್ದಾರೆ. ಜೊತೆಗೆ ಮೊದಲ ಬಾಲಿವುಡ್ ಸಿನಿಮಾ ಮೂಲಕ ಇಷ್ಟು ವರ್ಷ ಪಾಲಿಸಿಕೊಂಡು ಬಂದ ಸಂಪ್ರದಾಯವೊಂದನ್ನು ಮುರಿದಿದ್ದಾರೆ. ಸಾಯಿ ಪಲ್ಲವಿ ಹಿಂದಿಯ ರಾಮಾಯಣ ಸಿನಿಮಾನಲ್ಲಿ ಸೀತೆಯ ಪಾತ್ರದಲ್ಲಿ ನಟಿಸುತ್ತಿರುವುದು ತಿಳಿದೇ ಇದೆ. ಆದರೆ ಸಾಯಿ ಪಲ್ಲವಿಯ ಮೊದಲ ಬಾಲಿವುಡ್ ಸಿನಿಮಾ ಇದಲ್ಲ ಬದಲಿಗೆ ಆಮಿರ್ ಖಾನ್ ಪುತ್ರನ ಜೊತೆಗೆ ನಟಿಸಿರುವ ಏಕ್ ದಿನ್. 2024 ರ ಆರಂಭದಲ್ಲೇ ಚಿತ್ರೀಕರಣ ಶುರುವಾದರೂ ಬಹಳ ತಡವಾಗಿ ಸಿನಿಮಾ ಬಿಡುಗಡೆ ಆಗುತ್ತಿದೆ. ಸಿನಿಮಾದ ಟೀಸರ್ ಬಿಡುಗಡೆ ಆಗಿದ್ದು, ಸಾಯಿ ಪಲ್ಲವಿ ಸಖತ್ ಗಮನ ಸೆಳೆಯುತ್ತಿದ್ದಾರೆ.

ಮತ್ತೆ ಟಾಕ್ಸಿಕ್ ಚಿತ್ರಕ್ಕೆ ಚಿಂತೆ ತಂದಿಟ್ಟ ಧುರಂದರ್ 2

ವಿಷಯದಲ್ಲಿ ಇನ್ನೂ ಗೊಂದಲ ಇದೆ. ಹೀಗಿರುವಾಗಲೇ ಒಂದು ಅಪ್‌ಡೇಟ್ ಸಿಕ್ಕಿದೆ. ಇದು 'ಟಾಕ್ಸಿಕ್' ಚಿತ್ರ ತಂಡದ ಚಿಂತೆಗೆ ಕಾರಣ ಆಗಿದೆ. ಧುರಂಧರ್ 2 ಸಿನಿಮಾ ಮಾರ್ಚ್ ರೇಸ್‌ನಿಂದ ಮುಂದಕ್ಕೆ ಹೋಗಿದೆ ಎನ್ನಲಾಗಿತ್ತು. ಇದಕ್ಕೆ ಕಾರಣ ಅಕ್ಷಯ್ ಖನ್ನಾ. ಧುರಂದರ್ 2 ಚಿತ್ರದ ಕೆಲವು ದೃಶ್ಯಗಳನ್ನು ರೀಶೂಟ್ ಮಾಡುವ ಅಗತ್ಯವಿರುವ ಕಾರಣಕ್ಕೆ ಅಕ್ಷಯ್ ಖನ್ನಾ ಅವರ ಕಾಲ್‌ಶೀಟ್ ಕೇಳಲಾಗಿದೆ ಎನ್ನಲಾಗಿತ್ತು. ಆದರೆ, ಈಗ ಕೇಳಿ ಬರುತ್ತಿರುವ ಮಾಹಿತಿ ಪ್ರಕಾರ, ಅಕ್ಷಯ್ ಖನ್ನಾ ಯಾವುದೇ ಶೂಟ್‌ನಲ್ಲಿ ಭಾಗಿ ಆಗುತ್ತಿಲ್ಲವಂತೆ. ಆದಿತ್ಯ ಧಾರ್ ಅವರು ಪರ್ಫೆಕ್ಷನಿಸ್ಟ್ ಎನಿಸಿಕೊಂಡಿದ್ದಾರೆ. ಅವರು ಸ್ಕ್ರಿಪ್ಟ್‌ನ ಬರೆಯುವಾಗಲೇ ಎಲ್ಲವನ್ನೂ ಆಲೋಚಿಸಿರುತ್ತಾರೆ. 'ಧುರಂದರ್ 2' ವಿಷಯದಲ್ಲೂ ಅವರು ಹಾಗೆಯೇ ಮಾಡಿದ್ದಾರೆ. ಈಗಾಗಲೇ ಸಿನಿಮಾ ಶೂಟ್ ಪೂರ್ಣಗೊಂಡಿದ್ದು, ಅವರು ಭಾಗಿ ಆಗೋದಿಲ್ಲ ಎಂದು ಹೇಳಲಾಗುತ್ತಿದೆ. ಅಕ್ಷಯ್ ಖನ್ನಾ ಅವರು 'ಧುರಂಧರ್ 2' ಚಿತ್ರದ ಕೆಲವೇ ದೃಶ್ಯಗಳಲ್ಲಿ ಬರಲಿದ್ದಾರೆ.

ಇದನ್ನು ಈಗಾಗಲೇ ಶೂಟ್ ಮಾಡಲಾಗಿದೆ. ಹೀಗಾಗಿ, ಧುಂಧರ್ 2 ಚಿತ್ರದ ರೀಶೂಟ್ ಎಂಬುದರಲ್ಲಿ ಯಾವುದೇ ಅರ್ಥವಿಲ್ಲ ಎನ್ನುತ್ತಿವೆ ಮೂಲಗಳು. 'ಟಾಕ್ಸಿಕ್' ಸಿನಿಮಾ ಮಾರ್ಚ್ 19ರಂದು ರಿಲೀಸ್ ಆಗುತ್ತಿದೆ. ಇದೇ ದಿನ 'ಧುರಂದರ್ 2' ಕೂಡ ರಿಲೀಸ್ ಆಗಲಿದೆ.

ಟಾಕ್ಸಿಕ್ ಚಿತ್ರದಲ್ಲಿ ಯಶ್ ನಟಿಸಿದ್ದಾರೆ. ಈ ಸಿನಿಮಾಗೆ ದೊಡ್ಡ ಬಜೆಟ್ ಸುರಿಯಲಾಗಿದೆ. ಹಿಂದಿ ಬೆಲ್ಟ್‌ನಲ್ಲಿ ಚಿತ್ರಕ್ಕೆ ದೊಡ್ಡ ಮಟ್ಟದಲ್ಲಿ ಸ್ಪರ್ಧೆ ನಿರೀಕ್ಷಿಸಬಹುದಾಗಿದೆ.

ಯಶ್‌ಗೆ ದುರಂಧರ್ ಅಡ್ಡಗಾಲು

ಸೂಪರ್ ಹಿಟ್ 'ಧುರಂಧರ್' ಚಿತ್ರದ ಸೀಕ್ವೆಲ್ 'ಧುರಂಧರ್ 2 ಬಿಡುಗಡೆ ದಿನಾಂಕದ ಬಗ್ಗೆ ಗೊಂದಲ ಮುಂದುವರಿದಿದೆ. ಅಕ್ಷಯ್ ಖನ್ನಾ ಅವರ ಕಾಲ್‌ಶೀಟ್ ಮತ್ತು ರೀಶೂಟ್ ಕಾರಣದಿಂದ ಮಾರ್ಚ್ 19ರ ಬಿಡುಗಡೆ ಮುಂದೂಡಿಕೆ ವದಂತಿ ಹರಡಿತ್ತು. ಆದರೆ, ರೀಶೂಟ್ ಅಸಾಧ್ಯ ಎಂದು ಮೂಲಗಳು ಸ್ಪಷ್ಟಪಡಿಸಿವೆ. ಇದೇ ದಿನ ಯಶ್ ನಟನೆಯ ಬಹುನಿರೀಕ್ಷಿತ 'ಟಾಕ್ಸಿಕ್' ಸಿನಿಮಾ ರಿಲೀಸ್ ಆಗುತ್ತಿರುವುದರಿಂದ ಎರಡೂ ಚಿತ್ರಗಳ ನಡುವೆ ಪೈಪೋಟಿ ನಿರೀಕ್ಷಿಸಲಾಗಿದೆ. 'ಧುರಂಧರ್' ಸಿನಿಮಾ ಸೂಪರ್ ಹಿಟ್ ಆಗಿದೆ. ಈ ಚಿತ್ರ 2025ರ ಡಿಸೆಂಬರ್ 5ರಂದು ತೆರೆಗೆ ಬಂತು. ಈಗಲೂ ಸಿನಿಮಾ ಅದ್ಭುತ ಕಲೆಕ್ಷನ್ ಮಾಡುತ್ತಿದೆ. ಚಿತ್ರವನ್ನು ಜನರು ಮುಗಿಬಿದ್ದು ವೀಕ್ಷಣೆ ಮಾಡುತ್ತಿದ್ದಾರೆ. ಈಗ ಸಿನಿಮಾಗೆ ಸೀಕ್ವೆಲ್ ಬರುತ್ತಿದೆ. ಮಾರ್ಚ್ 19ರಂದು 'ಧುರಂಧರ್ 2' ಸಿನಿಮಾ ರಿಲೀಸ್ ಆಗಲಿದೆ ಎನ್ನಲಾಗಿತ್ತು. ಈ

ಸ್ಟಾರ್ ನಟಿ ಜೊತೆ ಶೀಘ್ರವೇ ಧನುಷ್ ಮದ್ವೆ

ಸೂಪರ್‌ಸ್ಟಾರ್ ರಜನಿಕಾಂತ್ ಮಾಜಿ ಅಳಿಯ ಧನುಷ್ ತಮ್ಮ 20 ವರ್ಷದ ವೈವಾಹಿಕ ಜೀವನಕ್ಕೆ ಗುಡ್ ಬೈ ಹೇಳಿದ್ದರು. ರಜನಿಕಾಂತ್ ಪುತ್ರಿ ಐಶ್ವರ್ಯ ಹಾಗೂ ಧನುಷ್ 2022ರಲ್ಲಿ ವಿಚ್ಛೇದನ ಘೋಷಣೆ ಮಾಡಿದ್ದರು. ಬಳಿಕ 2024ರಲ್ಲಿ ಇವರು ಪರಸ್ಪರ ಒಪ್ಪಿಗೆ ಮೇರೆಗೆ ವಿಚ್ಛೇದನ ಪಡೆದಿದ್ದರು. ಇದೀಗ ಧನುಷ್ ಸ್ಟಾರ್ ನಟಿ ಕೈ ಹಿಡಿಯಲು ಸಿದ್ದರಾಗಿದ್ದಾರೆ. ನಟ ಧನುಷ್ ನಟಿ ಮೃಣಾಲ್ ಠಾಕೂರ್ ಜೊತೆ ಎರಡನೇ ವಿವಾಹವಾಗಲು ಸಿದ್ಧತೆ ನಡೆಸಿದ್ದಾರೆ ಎನ್ನಲಾಗ್ತಿದೆ.

ಇತ್ತೀಚೆಗೆ ಧನುಷ್ ಹಾಗೂ ಮೃಣಾಲ್ ಠಾಕೂರ್ ಹಲವಾರು ವೇದಿಕೆಯಲ್ಲಿ ಪಾರ್ಟಿಗಳಲ್ಲಿ, ಹುಟ್ಟುಹಬ್ಬದ ಪಾರ್ಟಿಗಳಲ್ಲಿ ಕಾಣಿಸಿಕೊಂಡಿದ್ದರು. ಜೊತೆಗೆ ಧನುಷ್ ಹಾಕಿರುವ ಪೋಸ್ಟ್‌ಗಳಿಗೆ ಮೃಣಾಲ್ ಲೈಕ್ ಕೊಡೋದು ಕಮೆಂಟ್ಸ್ ಹಾಕೋದು ಮಾಡುತ್ತಿದ್ದರು. ಇವೆಲ್ಲ ಘಟನೆಗಳು ಅವ್ರಿಬ್ಬರ ಮಧ್ಯೆ ಗಾಸಿಪ್ ಸೃಷ್ಟಿಸಿತ್ತು. ಆದ್ರೆ ಇದೆಲ್ಲದಕ್ಕೂ ಈಗ ತೆರೆ ಎಳೆಯುವ ಸಮಯ ಬಂದಂತಿದೆ. ಅಂದಹಾಗೆ ಮೃಣಾಲ್ ಹಾಗೂ ಧನುಷ್ ಸನ್ ಆಫ್ ಸರ್ದಾರ್-2 ಸಿನಿಮಾದ ಪ್ರೀಮಿಯರ್‌ನಲ್ಲಿ ಒಟ್ಟೊಟ್ಟಿಗೆ ಕಾಣಿಸಿಕೊಂಡ ಬಳಿಕವಂತೂ ಪ್ರೀತಿ, ಪ್ರೇಮದ ಗುಲ್ಲು ಜೋರಾಗಿತ್ತು. ಇದೀಗ ಇಬ್ಬರೂ ಮದ್ವೆಯಾಗುತ್ತಿದ್ದಾರೆ ಎನ್ನಲಾಗ್ತಿದೆ. ಅದ್ರಲ್ಲೂ ಫೆಬ್ರವರಿ 14ರಂದು ವೈವಾಹಿಕ ಜೀವನಕ್ಕೆ ಕಾಲಿಡಲಿದ್ದಾರೆ ಎನ್ನುವ ಸುದ್ದಿ ಹರಿದಾಡುತ್ತಿದೆ.

5 ಎಕರೆ ಭೂಮಿ ಖರೀದಿಸಿದ ವಿರಾಟ್

ಟೀಂ ಇಂಡಿಯಾ ಮಾಜಿ ನಾಯಕ ವಿರಾಟ್ ಕೊಹ್ಲಿ ಮತ್ತು ಪತ್ನಿ ಅನುಷ್ಕಾ ಶರ್ಮಾ ಮಹಾರಾಷ್ಟ್ರದ ಆಲಿಬಾಗ್‌ನಲ್ಲಿ 37.86 ಕೋಟಿ ರೂ. ಮೌಲ್ಯದ 5 ಎಕರೆ ಭೂಮಿ ಖರೀದಿಸಿದ್ದಾರೆ.

ಇದು ರಜಾ ದಿನಗಳನ್ನು ಕಳೆಯಲು ಮತ್ತು ಎರಡನೇ ಮನೆ ನಿರ್ಮಿಸಲು ಸೂಕ್ತ ಸ್ಥಳವಾಗಿದೆ. ಆಲಿಬಾಗ್ ಶ್ರೀಮಂತರು ಮತ್ತು ಸೆಲೆಬ್ರಿಟಿಗಳ ಐಷಾರಾಮಿ ಹೂಡಿಕೆ ತಾಣವಾಗಿದ್ದು, ಆಸ್ತಿ ಬೆಲೆಗಳು ಗಗನಕ್ಕೇರುತ್ತಿವೆ. ವಿರೂಷ್ಕಾ ದಂಪತಿಗೆ ಇದು ಆಲಿಬಾಗ್‌ನಲ್ಲಿ ಎರಡನೇ ಭೂಮಿ ಖರೀದಿಯಾಗಿದೆ.

ಟೀಂ ಇಂಡಿಯಾ ಮಾಜಿ ನಾಯಕ ವಿರಾಟ್ ಕೊಹ್ಲಿ ಪ್ರಸ್ತುತ ನ್ಯೂಜಿಲೆಂಡ್ ವಿರುದ್ಧ ಮೂರು ಪಂದ್ಯಗಳ ಏಕದಿನ ಸರಣಿಯನ್ನು ಆಡುತ್ತಿದ್ದಾರೆ. ಈ ನಡುವೆ ತಮ್ಮ ಮಡದಿ ಅನುಷ್ಕಾ ಶರ್ಮಾ ಜೊತೆಗೂಡಿ ಭೂಮಿ ಖರೀದಿಯ ಕೆಲಸದಲ್ಲೂ ಬ್ಯುಸಿಯಾಗಿದ್ದಾರೆ. ವರದಿಯ ಪ್ರಕಾರ, ವಿರಾಟ್ ಕೊಹ್ಲಿ ಮತ್ತು ಮಡದಿ ಅನುಷ್ಕಾ ಶರ್ಮಾ ಮಹಾರಾಷ್ಟ್ರದ ಆಲಿಬಾಗ್‌ನಲ್ಲಿ 5 ಎಕರೆ ಭೂಮಿಯನ್ನು ಖರೀದಿಸಿದ್ದಾರೆ.

ಈ ಒಪ್ಪಂದವನ್ನು ರಿಯಲ್ ಎಸ್ಟೇಟ್ ಮಾಹಿತಿ ಕಂಪನಿ ಮ್ಯಾಟ್ರಿಕ್ಸ್ ಬಹಿರಂಗಪಡಿಸಿದೆ. ವರದಿಯ ಪ್ರಕಾರ, ದಂಪತಿಗಳು ಜಂಟಿಯಾಗಿ 5 ಎಕರೆ ಭೂಮಿ ಖರೀದಿಸಿದ್ದಾರೆ. ಇದರ ಮೌಲ್ಯ ಸುಮಾರು 37.86 ಕೋಟಿ ರೂ ಎನ್ನಲಾಗುತ್ತಿದೆ. ಮುಂಬೈ ಬಳಿ ಇರುವ ಈ ಪ್ರದೇಶ ರಜಾ ದಿನಗಳನ್ನು ಕಳೆಯಲೂ ಸೂಕ್ತ ಸ್ಥಳವಾಗಿದ್ದು, ವಿರೂಷ್ಕ ದಂಪತಿಗಳು ಈ ಸ್ಥಳದಲ್ಲಿ ತಮ್ಮ ಎರಡನೇ ಮನೆಯನ್ನು ನಿರ್ಮಿಸಲು ಚಿಂತಿಸಿದ್ದಾರೆ. ಆಲಿಬಾಗ್‌ನಲ್ಲಿ ಕೊಹ್ಲಿ ದಂಪತಿಗಳು ಎರಡನೇ ಬಾರಿಗೆ ಭೂಮಿ ಖರೀದಿಸಿದ್ದಾರೆ. ಇದಕ್ಕೂ ಮೊದಲು ಸುಮಾರು 1.474 ಹೆಕ್ಟೇರ್ ಮತ್ತು ಸುಮಾರು 0.627 ಹೆಕ್ಟೇರ್ ಭೂಮಿಯನ್ನು ಖರೀದಿ ಮಾಡಿದ್ದರು. ದಾಖಲೆಗಳ ಪ್ರಕಾರ, ಈ ಭೂಮಿ ರಾಯಗಡ ಜಿಲ್ಲೆಯ ಆಲಿಬಾಗ್ ಪ್ರದೇಶದ ಆವಾಸ್ ಬೀಚ್ ಬಳಿಯ ಜಿರಾದ್ ಗ್ರಾಮದಲ್ಲಿದೆ. ಆಸ್ತಿಯನ್ನು ಜನವರಿ 2026 ರಲ್ಲಿ ನೋಂದಣಿ ಮಾಡಿಸಲಾಗಿದ್ದು, ಸ್ಟ್ಯಾಂಪ್ ಡ್ಯೂಟಿ ಮತ್ತು ನೋಂದಣಿ ಶುಲ್ಕವನ್ನು ಸಹ ಪಾವತಿಸಲಾಗಿದೆ.

ಮೇಲೆ ಹೇಳಿದಂತೆ ಆಲಿಬಾಗ್ ರಜಾ ದಿನಗಳನ್ನು ಕಳೆಯಲು ಸೂಕ್ತ ಸ್ಥಳವಾಗಿದ್ದು, ಈ ಭಾಗದಲ್ಲಿ ಕ್ರಿಕೆಟಿಗರು, ಚಲನಚಿತ್ರ ತಾರೆಯರು ಮತ್ತು ದೊಡ್ಡ ಉದ್ಯಮಿಗಳು ಐಷಾರಾಮಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಶಾಂತ ವಾತಾವರಣ, ಶುದ್ಧ ಗಾಳಿ ಮತ್ತು ಸಮುದ್ರ ಸಮೀಪವಿರುವ ಕಾರಣ ಈ ಪ್ರದೇಶದ ಮೇಲೆ ಹಣವಂತರ ಕಣ್ಣು ಬಿದ್ದಿದೆ. ಆಲಿಬಾಗ್ ಮುಂಬೈ, ನವಿ ಮುಂಬೈ ಮತ್ತು ಪುಣೆಯಂತಹ ಪ್ರಮುಖ ನಗರಗಳಿಗೆ ಹತ್ತಿರದಲ್ಲಿದೆ ಎಂಬುದು ಗಮನಿಸಬೇಕಾದ ಸಂಗತಿ. ಆಲಿಬಾಗ್ ಅನ್ನು ಸಾಮಾನ್ಯವಾಗಿ 'ಮಿನಿ ಗೋವಾ' ಎಂದು ಕರೆಯಲಾಗುತ್ತದೆ. ಇದು ಮಹಾರಾಷ್ಟ್ರದ ಕೊಂಕಣ ಪ್ರದೇಶದಲ್ಲಿ ನೆಲೆಗೊಂಡಿರುವ ಒಂದು ಸುಂದರ ಪಟ್ಟಣವಾಗಿದೆ. ವಾರಾಂತ್ಯದ ಪ್ರವಾಸಗಳಿಗಾಗಿ ಜನರು ಇಲ್ಲಿಗೆ ಹೆಚ್ಚಾಗಿ ಭೇಟಿ ನೀಡುತ್ತಾರೆ.

ಇದು ಮುಂಬೈನಿಂದ ಸುಮಾರು 110 ಕಿಲೋಮೀಟರ್ ದೂರದಲ್ಲಿದೆ. ಸಮುದ್ರ ಮತ್ತು ಕಡಲತೀರಗಳಿಂದ ಸುತ್ತುವರೆದಿರುವ ಈ ಸ್ಥಳವು ಸಮುದ್ರ ಪ್ರಿಯರಿಗೆ ವಿಶೇಷ ಸ್ಥಳವೆಂದು ಪರಿಗಣಿಸಲಾಗಿದೆ. ಗಮನಾರ್ಹವಾಗಿ, ಕಳೆದ ಕೆಲವು ವರ್ಷಗಳಲ್ಲಿ ಆಸ್ತಿ ಬೆಲೆಗಳು ಗಮನಾರ್ಹವಾಗಿ ಹೆಚ್ಚಾಗಿದೆ. ಇಂದು, ಆಲಿಬಾಗ್‌ನಲ್ಲಿ ಅಪಾರ್ಟ್‌ಮೆಂಟ್‌ಗಳ ಬೆಲೆ ಪ್ರತಿ ಚದರ ಅಡಿಗೆ ಸುಮಾರು 15,000 ರಿಂದ 17,000 ರೂಪಾ